24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 104 | ನವದೆಹಲಿ | ಬೆಲೆ ₹10 | ಅಕ್ಟೋಬರ್, 9, 2026, ಶುಕ್ರವಾರ

## ಒಳಪುಟಗಳಲ್ಲಿ



ಚಿನ್ನಲೇಪಿತ ಡೊನಾಲ್ಡ್ ಟ್ರಂಪ್ ಬೆತ್ತಲೆ ಪ್ರತಿಮೆ ಅನಾವರಣ - ಪು.4

ಎಸ್‌ಐಆರ್ ವಿರುದ್ಧ ತೀವ್ರಗೊಂಡ ಹೋರಾಟ: ಪ್ರಜಾಪ್ರಭುತ್ವದ ಸಾವಿಗೆ ಮೋದಿ ಕಾರಣ - ಪು.5

# ಎಸ್‌ಐಆರ್ ಸಂಘರ್ಷ: ಇಂದು ಇಂಡಿಯಾ ಒಕ್ಕೂಟದಿಂದ ರಾಷ್ಟ್ರಪತಿ ಭೇಟಿ

**ನವದೆಹಲಿ, ಅ.8:** ಭಾರತೀಯ ಚುನಾವಣಾ ಆಯೋಗದ ಕಾರ್ಯವೈಖರಿ, ಮತದಾರರ ಪಟ್ಟಿಯ ನಡೆಯುತ್ತಿರುವ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಸಂಬಂಧಿಸಿದ ಬೇಡಿಕೆಗಳ ಕುರಿತು ಅಧಿಕೃತವಾಗಿ ಚರ್ಚಿಸಲು ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಶುಕ್ರವಾರ ಭೇಟಿಯಾಗಲು ಸಜ್ಜಾಗಿದೆ. ಈ ಮೂಲಕ ಚುನಾವಣಾ ಆಯೋಗದೊಂದಿಗಿನ ತಮ್ಮ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸಿದೆ.

**ಚುನಾವಣಾ ಆಯೋಗದ ಕಾರ್ಯವೈಖರಿ, ಎಸ್‌ಐಆರ್ ಪ್ರಕ್ರಿಯೆ ಮತ್ತು ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಸಂಬಂಧಿಸಿದ ಬೇಡಿಕೆಗಳ ಚರ್ಚೆ**



ಅಕ್ಟೋಬರ್ 7 ಮತ್ತು 9ರ ನಡುವೆ ಭೇಟಿಗೆ ಸಮಯ ಕೋರಿದ ನಂತರ, ರಾಷ್ಟ್ರಪತಿ ಭವನವು ವಿರೋಧ ಪಕ್ಷಗಳ ಮೈತ್ರಿಕೂಟದ ನಿಯೋಗವನ್ನು ಸ್ವೀಕರಿಸಲು ಒಪ್ಪಿಗೆ ಸೂಚಿಸಿದೆ. ಆರಂಭದಲ್ಲಿ 15 ಸದಸ್ಯರ ತಂಡವನ್ನು ಪ್ರಸ್ತಾಪಿಸಲಾಗಿದ್ದರೂ, ನಿಯೋಗವನ್ನು 10 ಸದಸ್ಯರಿಗೆ ಸೀಮಿತಗೊಳಿಸುವಂತೆ ರಾಷ್ಟ್ರಪತಿಗಳ ಸಚಿವಾಲಯವು ಕೋರಿತ್ತು. ಮೈತ್ರಿಕೂಟವು ಈ ಷರತ್ತನ್ನು ಒಪ್ಪಿಕೊಂಡಿದೆ. ಆದಾಗ್ಯೂ, ಮೂಲಗಳ



ಪ್ರಕಾರ, ಅವರಿಗೆ ರಾಷ್ಟ್ರಪತಿ ಕಚೇರಿಯಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಈ ನಿಯೋಗದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ರಾಷ್ಟ್ರೀಯ ಜನತಾ ದಳದ ನಾಯಕ ತೇಜಸ್ವಿ ಯಾದವ್ ಮತ್ತು ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಸೇರಿದಂತೆ ಹಿರಿಯ ವಿರೋಧ ಪಕ್ಷದ ನಾಯಕರು ಇರಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ.

ರಾಷ್ಟ್ರಪತಿಗಳೊಂದಿಗಿನ ಈ ಸಭೆಯು ರಾಷ್ಟ್ರಪತಿ ಮತ್ತು ಚುನಾವಣಾ ಆಯೋಗದ ನಡುವಿನ ಸಾಂವಿಧಾನಿಕ ಜವಾಬ್ದಾರಿಗಳ ವಿಭಜನೆಯಲ್ಲಿ ಯಾವುದೇ ಬದಲಾವಣೆಯನ್ನು ತರುವ ಸಾಧ್ಯತೆಯಿಲ್ಲ. ಬದಲಾಗಿ, 'ಇಂಡಿಯಾ' ಮೈತ್ರಿಕೂಟವು ಈ ಅವಕಾಶವನ್ನು ಬಳಸಿಕೊಂಡು ತಮ್ಮ ಆಕ್ಷೇಪಣೆಗಳು, ಬೇಡಿಕೆಗಳು ಮತ್ತು ಪೂರಕ ದಾಖಲೆಗಳನ್ನು ಮುರ್ಮು ಅವರ ಮುಂದೆ ಅಧಿಕೃತವಾಗಿ ಮಂಡಿಸಲಿದೆ ಹಾಗೂ ಚುನಾವಣಾ ಆಡಳಿತಕ್ಕೆ ಸಂಬಂಧಿಸಿದಂತೆ ತಾವು ಗಂಭೀರವೆಂದು ಪರಿಗಣಿಸುವ ವಿಷಯಗಳತ್ತ ಗಮನ ಸೆಳೆಯಲು ಪ್ರಯತ್ನಿಸಲಿದೆ. ಕುಮಾರ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ನಿಯೋಗವು ಪುನರುಚ್ಚರಿಸುವ ನಿರೀಕ್ಷೆಯೂ ಇದೆ. ನಿರಂತರ ಪ್ರತಿಭಟನೆಗಳ ನಡುವೆ ವಿರೋಧ ಪಕ್ಷಗಳು ಅವರ ರಾಜೀನಾಮೆಗೆ ಆಗ್ರಹಿಸುತ್ತಲೇ ಬಂದಿವೆ.

## ಹಿರಿಯ ಬಾಲಿವುಡ್ ನಟ ನಾನಾ ಪಾಟೇಕರ್ ವಿಧಿವಶ



**ಮುಂಬೈ, ಅ.8:** ತಮ್ಮ ವಿಶಿಷ್ಟ ಸಂಭಾಷಣಾ ಶೈಲಿಯಿಂದ ಖ್ಯಾತರಾಗಿದ್ದ ಹಿರಿಯ ನಟ ವಿಶ್ವನಾಥ್ ಪಾಟೇಕರ್ (ನಾನಾ ಪಾಟೇಕರ್) ಗುರುವಾರ ಗೋವಾದ ನಿವಾಸದಲ್ಲಿ ಹೃದಯ ಸ್ತಂಭನಕ್ಕೊಳಗಾಗಿ 75ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

ವರದಿಗಳ ಪ್ರಕಾರ, ಪಾಟೇಕರ್ ಅವರು ತಮ್ಮ ನಿವಾಸದಲ್ಲಿ ಅಸ್ವಸ್ಥರಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರು ಅವರನ್ನು ಉಳಿಸಲು ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ.

ಹಿಂದಿ ಮತ್ತು ಮರಾಠಿ ಚಿತ್ರರಂಗದ ಅತ್ಯಂತ ಪ್ರಭಾವಿ ಕಲಾವಿದರಲ್ಲಿ ಒಬ್ಬರಾಗಿದ್ದ ಪಾಟೇಕರ್, ತಮ್ಮ ಪ್ರಭಾವಶಾಲಿ ಅಭಿನಯ ಮತ್ತು ವಿಶಿಷ್ಟ ಸಂಭಾಷಣಾ ಶೈಲಿಗೆ ಹೆಸರುವಾಸಿಯಾಗಿದ್ದರು. ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆಗಾಗಿ ಅವರು ಮೂರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಮತ್ತು ಇತರ ಹಲವಾರು ಗೌರವಗಳಿಗೆ ಭಾಜನರಾಗಿದ್ದರು.

ಪಾಟೇಕರ್ ಸಾಮಾಜಿಕ ಕಾರ್ಯಗಳಲ್ಲಿಯೂ, ವಿಶೇಷವಾಗಿ ರೈತರು ಮತ್ತು ಗ್ರಾಮೀಣ ಮಹಾರಾಷ್ಟ್ರದ ಜನರ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದರು.

ಆರ್ಥಿಕ ಸಂಕಷ್ಟ ಮತ್ತು ಕಠಿಣ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ಜನರಿಗೆ ಬೆಂಬಲ ನೀಡುವ ಪ್ರಯತ್ನಗಳಲ್ಲಿ ಅವರು ನಿರಂತರವಾಗಿ ಪಾಲ್ಗೊಳ್ಳುತ್ತಿದ್ದರು. 'ಪರಿಂದಾ', 'ಕ್ರಾಂತಿವೀರ್', ಅಬ್‌ತಕ್ ಛಪ್ಪನ್', 'ನಟ ಸಾಮ್ರಾಟ್' ಮತ್ತು 'ವೆಲ್‌ಕಮ್' ಅವರ ಪ್ರಮುಖ ಚಲನಚಿತ್ರಗಳಲ್ಲಿ ಸೇರಿವೆ. ಅವರ ನಿಧನವು ಚಿತ್ರರಂಗ ಮತ್ತು ಅವರ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ತೀವ್ರ ಆಘಾತ ಹಾಗೂ ಶೋಕದಲ್ಲಿ ಮುಳುಗಿಸಿದೆ.

## ಕರ್ನಾಟಕದ ಬಾಕಿ ಅನುದಾನ: ವಿತ್ತ ಸಚಿವರಿಂದ ಸಿಹಿ ಸುದ್ದಿ

**ನವದೆಹಲಿ, ಅ.8:** ಕರ್ನಾಟಕಕ್ಕೆ ಹಳೆಯ ಬಾಕಿ ವಿಚಾರವಾಗಿ ವಿತ್ತ ಸಚಿವರೊಂದಿಗೆ ಚರ್ಚೆ ಮಾಡಿದ್ದು, ಕೆಲವು ಸಿಹಿ ಸುದ್ದಿ ಕೊಟ್ಟಿದ್ದಾರೆ. ಈಗ ಆ ಬಗ್ಗೆ ಹೇಳುವುದಿಲ್ಲ. ನಂತರ ಮಾತನಾಡುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

■ **ಜಿಎಸ್‌ಟಿ ಪಾವತಿಸದರ ಬಂಧನ ವಿಚಾರಕ್ಕೆ ಬಹುತೇಕ ರಾಜ್ಯಗಳ ವಿರೋಧ**

ಜಿಎಸ್‌ಟಿ ಸಭೆ ಬಳಿಕ ಶಿವಕುಮಾರ್ ಅವರು ಕರ್ನಾಟಕ ಭವನದಲ್ಲಿ ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಜಿಎಸ್‌ಟಿ ಕೌನ್ಸಿಲ್ ಸಭೆ ಅತ್ಯುತ್ತಮವಾಗಿ ನಡೆಯಿತು. ಕರ್ನಾಟಕದ ಅಂಶಗಳನ್ನು ಎಲ್ಲರೂ ಒಪ್ಪಿದ್ದಾರೆ.

ಜಿಎಸ್‌ಟಿ ಪಾವತಿಸದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಬಂಧಿಸುವ ವಿಚಾರ ಪ್ರಸ್ತಾಪವಾಯಿತು. ಆದಾಯ ತೆರಿಗೆ ನಿಯಮ, ನಿಬಂಧನೆಗಳಂತೆ ಮಾಡಬೇಕು, ಅನಗತ್ಯವಾಗಿ ಅಧಿಕಾರಿಗಳು ವ್ಯಾಪಾರಸ್ಥರನ್ನು ಬಂಧಿಸುವುದು ಸರಿಯಲ್ಲ. ಅವರಿಂದ ಎಷ್ಟು ಕಟ್ಟಿಸಿಕೊಳ್ಳಬೇಕೋ ಅಷ್ಟು ಹಣ ಕಟ್ಟಿಸಿಕೊಳ್ಳೋಣ. ಬಂಧಿಸುವುದು ಸರಿಯಲ್ಲ ಎಂದು ಚರ್ಚೆಯಾಯಿತು. ಒಂದು ರಾಜ್ಯ ಬಿಟ್ಟರೆ ಉಳಿದ ರಾಜ್ಯಗಳು ಒಪ್ಪಿವೆ ಎಂದು ಹೇಳಿದರು.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಡೆದ ಜಿಎಸ್‌ಟಿ ಕೌನ್ಸಲಿ ಸಭೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಕೃಷ್ಣಬೈರೇಗೌಡ, ಜಮ್ಮುಕಾಶ್ಮೀರ ಸಿಎಂ ಓಮರ್ ಅಬ್ದುಲ್ಲಾ ಹಾಗೂ ಇತರ ರಾಜ್ಯಗಳ ಪ್ರತಿನಿಧಿಗಳು, ಅಧಿಕಾರಿಗಳು ಭಾಗವಹಿಸಿದ್ದರು.

# ಭಾರತೀಯರ ಮತ ರಕ್ಷಣೆ ಕೇಂದ್ರದ ಕರ್ತವ್ಯ: ಸಿಎಂ ಡಿ.ಕೆ. ಶಿವಕುಮಾರ್

**ಅಕ್ರಮ ಬಾಂಗ್ಲಾ ವಲಸಿಗರನ್ನು ದೇಶದಿಂದ ಹೊರಗೆ ಕಳಿಸುವ ಕೆಲಸ ಮಾಡುತ್ತಿಲ್ಲವೇಕೆ ಎಂದು ಪ್ರಶ್ನೆ**

**ನವದೆಹಲಿ, ಅ.8:** ಬಾಂಗ್ಲಾದೇಶ ಹಾಗೂ ಬೇರೆಡೆಗಳಿಂದ ಬಂದು ಜನರು ಇಲ್ಲಿದ್ದಾರೆ ಎಂದು ಬಿಜೆಪಿಯವರು ಹೇಳುತ್ತಾರೆ. ಹಾಗಾದರೆ ಗಡಿಯಲ್ಲಿ ಬಾಂಗ್ಲಾದೇಶದಿಂದ ನುಸುಳಿಕೋರರನ್ನು ತಡೆಗಟ್ಟುವುದು ಕೇಂದ್ರ ಸರ್ಕಾರದ ಕರ್ತವ್ಯವಲ್ಲವೇ ಎಂದು ಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ನವದೆಹಲಿಯಲ್ಲಿ ಎಸ್‌ಐಆರ್ ಬಗ್ಗೆ ಮಾತನಾಡಿದ ಅವರು, ಬಿಜೆಪಿ ಸಂಸದರು ಹಾಗೂ ಶಾಸಕರು, ನಾವು ಬಾಂಗ್ಲಾದೇಶದವರನ್ನು ಮತಪಟ್ಟಿಯಿಂದ ತೆಗೆಯಲು ಅರ್ಜಿ ಸಲ್ಲಿಸಿದ್ದೇವೆ ಎಂದಿದ್ದಾರೆ. ಭಾರತೀಯರ ಮತಗಳ ರಕ್ಷಣೆ ಮಾಡುವುದು ಕೇಂದ್ರ ಸರ್ಕಾರದ ಕರ್ತವ್ಯ. ನಮ್ಮಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಇದ್ದರೆ ಅವರ ಮತದಾನದ ಹಕ್ಕು ಕಸಿಯುವುದು ಮಾತ್ರವಲ್ಲ, ಅವರನ್ನೇ ದೇಶದಿಂದ ಹೊರಗೆ ಹಾಕಲಿ. ಆ ಕೆಲಸ ಯಾಕೆ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಕೇಂದ್ರದಲ್ಲಿ ಪ್ರತಿಪಕ್ಷಗಳ ಹೋರಾಟದ ಬಗ್ಗೆ ಪೊಲೀಸರ ಕ್ರಮಕ್ಕೆ ಉತ್ತರಿಸಿದ ಅವರು, ಹೋರಾಟಗಾರರ ವಿರುದ್ಧ ಪೊಲೀಸರೂ ಅಮಾನವೀಯವಾಗಿ ನಡೆದುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರು ದೇಶದ ಪ್ರಜಾಪ್ರಭುತ್ವ ಹಾಗೂ ಜನರ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ ಎಂದರು.

**ಅರ್ಹ ಮತಗಳನ್ನು ಚುನಾವಣಾ ಆಯೋಗದ ಸ್ಪಷ್ಟ ಸೂಚನೆ:** ರಾಜ್ಯದಲ್ಲಿ ಬಿಜೆಪಿಯವರು ತಮ್ಮ ಕಾರ್ಯಕರ್ತರ ಹೆಸರಿನಲ್ಲಿ ಪೂರ್ವಮುದ್ರಿತ ಫಾರಂ 7 ಗಳನ್ನು ನೀಡುತ್ತಿದ್ದಾರೆ. ವಿಶೇಷವಾಗಿ ಅಲ್ಪಸಂಖ್ಯಾತ ಮತದಾರರ ಪೂರ್ವ ಮುದ್ರಿತ ಅರ್ಜಿಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ಸಲ್ಲಿಸಲಾಗುತ್ತಿದೆ. ಕೆಲ ಬಿಜೆಪಿ ಕಾರ್ಯಕರ್ತರು ತಪ್ಪು ಒಪ್ಪಿಕೊಂಡು ಅರ್ಜಿಗಳನ್ನು ಹಿಂಪಡೆದಿದ್ದಾರೆ. ಕೇಂದ್ರ ಸರ್ಕಾರ ಇದನ್ನು ಒಂದು ದೊಡ್ಡ ಕ್ರಿಮಿನಲ್ ಸಂಚು ಎಂದು ಏಕೆ ಪರಿಗಣಿಸಲಿಲ್ಲ. ರಾಜ್ಯದಲ್ಲಿ ನಮ್ಮ ಹೋರಾಟದ ನಂತರ ಚುನಾವಣಾ ಆಯೋಗವೂ,



ಸೂಕ್ತ ಪರಿಶೀಲನೆಯಿಲ್ಲದೇ ಯಾವುದೇ ಅರ್ಹ ಮತವನ್ನು ತೆಗೆದುಹಾಕಬಾರದೆಂದು ಸ್ಪಷ್ಟ ಸೂಚನೆ ನೀಡಿದೆ. ನಾವು ಆ ಹೋರಾಟ ಮಾಡದೇ ಇದ್ದಿದ್ದರೆ, ಬಡ ಹಳ್ಳಿಗರು, ಅನಕ್ಷರಸ್ಥರ ಮತಗಳನ್ನು ಡಿಲೀಟ್ ಮಾಡಲಾಗುತ್ತಿತ್ತು ಎಂದರು.

**ಪ್ರತಿಯೊಬ್ಬರ ಮತರಕ್ಷಣೆ ನನ್ನ ಕರ್ತವ್ಯ:** ಮತಗಳನ್ನು ರಕ್ಷಿಸುವ ಕಾರ್ಯವು ಬೆಂಗಳೂರಿನಿಂದ ಪ್ರಾರಂಭವಾಗಿದ್ದು, ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ರಾಜ್ಯದ ಪ್ರತಿ ನಾಗರಿಕನ ಮತದ ಹಕ್ಕನ್ನು ರಕ್ಷಿಸುವುದು ಮುಖ್ಯಮಂತ್ರಿಯಾಗಿ ನನ್ನ ಕರ್ತವ್ಯ. ಬಿಜೆಪಿಯವರು ಮತಗಳ್ಳತನ ಮಾಡಲು ಇಂತಹ ಹಂತಕ್ಕೆ ತಲುಪುವರೆಂಬ ಕಲ್ಪನೆ ನಮಗಿರಲಿಲ್ಲ. ಚುನಾವಣೆ ಗೆಲ್ಲಲು ಮೊದಲು ರಾಜ್ಯದ ಹಾಗೂ ದೇಶದ ಜನರ ಮನಸ್ಸನ್ನು ಗೆಲ್ಲಬೇಕು. ಆದರೆ ಬಿಜೆಪಿಯವರು ಚುನಾವಣಾ ಆಯೋಗದ ವ್ಯವಸ್ಥೆಯನ್ನೇ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಮತಗಳ್ಳತನದಂತಹ ಕ್ರಿಮಿನಲ್ ಸಂಚಿನ ವಿರುದ್ಧ ನಾವು ಧ್ವನಿಯೆತ್ತಿದ್ದು, ಮಾಧ್ಯಮಗಳೂ ಸಹಕರಿಸಿವೆ. ಈ ಮೂಲಕ ಮಾಧ್ಯಮದವರು ಅರ್ಹಮತದಾರರ ನೆರವಿಗೆ ನಿಂತಿದ್ದಾರೆ. ಆದ್ದರಿಂದ ನವದೆಹಲಿಯಲ್ಲಿ ದೇಶದ ಮತದಾರನ ಹಿತರಕ್ಷಣೆಗೆ ಹೋರಾಡುತ್ತಿರುವ ಇಂಡಿಯಾ ಕೂಟದ ನಾಯಕರಿಗೆ ಅಭಿನಂದಿಸುತ್ತೇನೆ ಎಂದರು.

**ದೇಶದ ಅತಿದೊಡ್ಡ ಕುತಂತ್ರ**

ಮತದಾರರ ಹೆಸರುಗಳನ್ನು ಅಳಿಸಿಹಾಕಲು ನಡೆಸಿರುವ ಪ್ರಯತ್ನ ದೇಶದ ಅತಿ ದೊಡ್ಡ ಕುತಂತ್ರವಾಗಿದೆ. ಮತದಾನದ ಹಕ್ಕು ಬದುಕಿನ ಹಕ್ಕಾಗಿದೆ. ವಿರೋಧ ಪಕ್ಷದ ನಾಯಕರಾಗಿ ಪ್ರತಿ ಮತದಾನವನ್ನು ಉಳಿಸುವುದು ರಾಹುಲ್ ಗಾಂಧಿ ಅವರ ಕರ್ತವ್ಯವಾಗಿದೆ. ದೇಶದಲ್ಲಾಗಿರುವ ಮತಗಳ್ಳತನದ ಬಗ್ಗೆ ಚುನಾವಣಾ ಆಯೋಗದ ಸದಸ್ಯರಿಂದ ಈಗಾಗಲೇ ಬಹಿರಂಗಗೊಂಡಿದೆ. ನ್ಯಾಯಾಲಯಗಳೂ ಕೂಡ ಇದನ್ನು ಒಪ್ಪಿದ್ದು, ನ್ಯಾಯವನ್ನು ಎತ್ತಿ ಹಿಡಿದಿರುವುದಕ್ಕಾಗಿ ನಾನು ಅಭಿನಂದಿಸುತ್ತೇನೆ. ಕರ್ನಾಟಕದಲ್ಲಿ ಲಕ್ಷಾಂತರ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಮೂನೆ–7 ಅರ್ಜಿಗಳನ್ನು ಮುದ್ರಣ ಮಾಡಲಾಗಿದೆ. ದಲಿತ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಮತದಾರರ ಹೆಸರು ಹಾಗೂ ವಿಳಾಸ ನಮೂದಿಸಿ ಸ್ಥಳೀಯ ಬಿಜೆಪಿ ನಾಯಕರಿಗೆ ನಮೂನೆ –7 ನೀಡಲಾಗಿದೆ. ಅರ್ಜಿಗಳನ್ನು ನೀಡಿದವರ ಐಡಿ ಕಾರ್ಡ್, ದೂರವಾಣಿ ಸಂಖ್ಯೆಯನ್ನು ನೀಡಲಾಗಿದೆ. ಈ ಬಗ್ಗೆ ದೂರು ನೀಡಿದ ಬೆನ್ನಲ್ಲೇ ಬಿಎಲ್‌ಓಗಳನ್ನು ಬೆದರಿಸಿ ಅರ್ಜಿಗಳನ್ನು ವಾಪಸ್ಸು ಪಡೆದಿದ್ದಾರೆ ಎಂದರು.

**ಪ್ರಜಾಪ್ರಭುತ್ವ ರಕ್ಷಣೆ:** ಜಿಎಸ್‌ಟಿ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದು, ಕರ್ನಾಟಕದಲ್ಲಿನ ಎಸ್‌ಐಆರ್ ಪ್ರಕ್ರಿಯೆಯ ಸಂಪೂರ್ಣ ಮಾಹಿತಿಯನ್ನು ನಮ್ಮ ನಾಯಕರಿಗೆ ಒಪ್ಪಿಸಲಾಗುವುದು. ಅವರೆಲ್ಲಾ ಸದ್ಯಕ್ಕೆ ಬಿಡುವಿಲ್ಲದಿರುವುದರಿಂದ ಗೋವಾದಲ್ಲಿ ನಡೆಯಲಿರುವ ಪಕ್ಷದ ಸಭೆಗೆ ಹೋಗಿ ದಾಖಲೆಗಳನ್ನು ಸಲ್ಲಿಸುತ್ತೇನೆ. ನಂತರ ನಾಯಕರ ಸೂಚನೆ ಮೇರೆಗೆ ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

ಕೇಂದ್ರ ಸಚಿವರು ಸೇರಿದಂತೆ ಎನ್‌ಡಿಎ ನಾಯಕರು ರಾಜ್ಯಪಾಲರ ಕಚೇರಿಗೆ ಹೋಗಿ ರಾಜ್ಯ ಸರ್ಕಾರಕ್ಕೆ ಪ್ರಶ್ನೆ ಮಾಡುವ ಹಕ್ಕಿಲ್ಲ ಎಂದು ಹೇಳುತ್ತಿರುವುದೇಕೆ, ಇದು ಕ್ರಿಮಿನಲ್ ಚಟುವಟಿಕೆಯಲ್ಲವೇ, ಕೊಲೆಯಾಗುವ ಮುನ್ನ ಕೊಲೆಯನ್ನು ತಪ್ಪಿಸಿದ್ದೇವೆ. ರಾಜ್ಯಪಾಲರ ಕಚೇರಿಗೆ ತೆರಳಿರುವ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ರಾಜ್ಯಪಾಲರು ನಮ್ಮ ಅಧಿಕಾರಿಗಳಿಗೆ ಕರೆ ಮಾಡಿ ಪ್ರಕರಣ ದಾಖಲಿಸುತ್ತಿರುವುದೇಕೆ ಎಂದು ಕೇಳಿದ್ದಾರೆ. ಇಲ್ಲಿ ನಡೆದಿರುವುದು ಅಪರಾಧವಲ್ಲವೇ, ರಾಜ್ಯದ ಮುಖ್ಯಮಂತ್ರಿಯಾಗಿ ಮತದಾರರ ಹಕ್ಕು ಉಳಿಸುವುದು ನನ್ನ ಕರ್ತವ್ಯವಲ್ಲವೇ. ಬಿಜೆಪಿ ನಾಯಕರು ಇಂತಹ ಕೀಳುಮಟ್ಟಕ್ಕೆ ಇಳಿಯುತ್ತಾರೆ ಎಂದು ನಾನು ನಿರೀಕ್ಷಿಸಿರಲಿಲ್ಲ.

ಬಿಜೆಪಿಗರು ಜನರ ಹೃದಯ ಗೆದ್ದು ಚುನಾವಣೆ ಗೆಲ್ಲಬೇಕು. ಅದನ್ನು ಬಿಟ್ಟು ಚುನಾವಣಾ ಆಯೋಗ ಮೂಲಕ ಇಂತಹ ಅಕ್ರಮ ಮಾಡುತ್ತಿದೆ. ರಾಜ್ಯದಲ್ಲಿ ಇಷ್ಟು ಅಕ್ರಮ ನಡೆಯುತ್ತಿರುವಾಗ ಅಗತ್ಯ ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ. ಬದುಕಿರುವವರನ್ನು ಸತ್ತಿದ್ದಾರೆ ಎಂದು ಸುಳ್ಳು ಹೇಳಿ ಮತದಾನದ ಹಕ್ಕು ಕಸಿಯುವುದು ಅಕ್ರಮವಲ್ಲವೇ ಇದು ಅಪರಾಧ ಪಿತೂರಿಯಾಗಿದೆ. ಅಮಾಯಕ ಬಿಜೆಪಿ ಕಾರ್ಯಕರ್ತರಿಗೆ ಈ ಕೆಲಸ ಒಪ್ಪಿಸಿರುವುದು. ಬಿಜೆಪಿ ಕಾರ್ಯಕರ್ತರು ಎಲ್ಲಿ ತಮ್ಮ ಹೆಸರು ಬಯಲು ಮಾಡುತ್ತಾರೋ ಎಂದು ಹೆದರಿದ್ದಾರೆ. ಈ ಬಗ್ಗೆ ತನಿಖೆ ಮಾಡಿಸಿ ಪ್ರಜಾಪ್ರಭುತ್ವ ಉಳಿಸುತ್ತೇನೆ ಎಂದು ಡಿಕೆಶಿ ಎಚ್ಚರಿಕೆ ಕೊಟ್ಟರು

# ತಮಿಳುನಾಡಿಗೆ 15 ದಿನ 3 ಸಾವಿರ ಕ್ಯೂಸೆಕ್ ಕಾವೇರಿ ನೀರು

**ಕಾವೇರಿ ನೀರಿ ನಿರ್ವಹಣಾ ಪ್ರಾಧಿಕಾರ ಸೂಚನೆ: ಕರ್ನಾಟಕಕ್ಕೆ ಮತ್ತೆ ಹಿನ್ನಡೆ**

**ನವದೆಹಲಿ, ಅ.8:** ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಮತ್ತೊಂದು ಹಿನ್ನಡೆಯಾಗಿದೆ. ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 3,000 ಕ್ಯೂಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕರ್ನಾಟಕಕ್ಕೆ ಸೂಚನೆ ನೀಡಿದೆ.

ಗುರುವಾರ ಬೆಳಗ್ಗೆ ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲಿ ತಮಿಳುನಾಡಿಗೆ ಪ್ರತಿದಿನ 3,000 ಕ್ಯೂಸೆಕ್‌ನಂತೆ 15 ದಿನಗಳ ಅವಧಿಯಲ್ಲಿ ಒಟ್ಟು 3.91 ಟಿಎಂಸಿ ನೀರು ಹರಿಸುವಂತೆ ಶಿಫಾರಸು ಮಾಡಲಾಗಿತ್ತು. ಈ ಶಿಫಾರಸನ್ನು ಜಾರಿಗೊಳಿಸುವಂತೆ CWMA ಕರ್ನಾಟಕಕ್ಕೆ ಸೂಚಿಸಿದೆ.

ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರುವುದು ಹಾಗೂ ಕಾವೇರಿ



ಕೊಳ್ಳದ ಪ್ರಮುಖ ಜಲಾಶಯಗಳಾದ ಕೆಆರ್‌ಎಸ್, ಹೇಮಾವತಿ, ಹಾರಂಗಿ ಮತ್ತು ಕಬಿನಿಯಲ್ಲಿ ನೀರಿನ ಸಂಗ್ರಹ ಕುಸಿದಿರುವುದನ್ನು ಕರ್ನಾಟಕ ಸರ್ಕಾರ ಪ್ರಾಧಿಕಾರದ ಗಮನಕ್ಕೆ ತಂದಿತ್ತು. ಇಂತಹ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು. ಆದರೆ ಕರ್ನಾಟಕದ ಮನವಿಯನ್ನು CWMA ಒಪ್ಪಿಕೊಳ್ಳಲಿಲ್ಲ. ಇದರಿಂದ ಈಗಾಗಲೇ ನೀರಿನ ಕೊರತೆ ಎದುರಿಸುತ್ತಿರುವ ಕರ್ನಾಟಕಕ್ಕೆ ಮತ್ತಷ್ಟು ಒತ್ತಡ ಉಂಟಾಗಿದೆ.

ಮುಂದಿನ 15 ದಿನಗಳ ಕಾಲ ಪ್ರತಿದಿನ 3 ಸಾವಿರ ಕ್ಯೂಸೆಕ್ ನೀರು ಹರಿಸಬೇಕಾದ ಪರಿಸ್ಥಿತಿ ರಾಜ್ಯಕ್ಕೆ ಎದುರಾಗಿದೆ. ಕಾವೇರಿ ನೀರು ಬಿಡುಗಡೆ ಪ್ರಮಾಣವನ್ನು ಕಡಿಮೆ ಮಾಡುವಂತೆ ಕರ್ನಾಟಕ ಮನವಿ ಮಾಡಿದ್ದರೂ, CWRC ಶಿಫಾರಸಿನಂತೆ ಪ್ರಾಧಿಕಾರ 3 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಸೂಚಿಸಿರುವುದು ರಾಜ್ಯದ ಪಾಲಿಗೆ ಮತ್ತೊಂದು ಹಿನ್ನಡೆಯಾಗಿದೆ.

# ಮಾಫಿಸಾಕ್ಷಿ ಪರಿಗಣಿಸದಂತೆ ಕೋರಿದ್ದ ಅರ್ಜಿ ವಜಾ ಸುಪ್ರೀಂ ಕೋರ್ಟ್‌ನಲ್ಲಿ ನಟ ದರ್ಶನ್‌ಗೆ ಹಿನ್ನಡೆ

**ನವದೆಹಲಿ, ಅ.8:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿಸಾಕ್ಷಿಯನ್ನು ಪರಿಗಣಿಸುವ ವಿಚಾರಕ್ಕೆ ಸಂಬಂಧಿಸಿದಂತೆ ನಟ ದರ್ಶನ್‌ಗೆ ಸುಪ್ರೀಂ ಕೋರ್ಟ್‌ನಲ್ಲಿ ಹಿನ್ನಡೆಯಾಗಿದೆ. ಮಾಫಿಸಾಕ್ಷಿಗೆ ಸಂಬಂಧಿಸಿದಂತೆ ಪತ್ನಿ ವಿಜಯಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಗುರುವಾರ ವಜಾಗೊಳಿಸಿದೆ.



ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ವಿಜಯಲಕ್ಷ್ಮೀ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ನ್ಯಾ. ಜೆ.ಬಿ ಪಾರ್ದಿವಾಲ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ಬಳಿ ಮಾಫಿಸಾಕ್ಷಿಗೆ ಸಂಬಂಧಿಸಿದಂತೆ ಸೆಷನ್ಸ್ ನ್ಯಾಯಲಯದ ಆದೇಶ ಎತ್ತಿ ಹಿಡಿದ ಹೈಕೋರ್ಟ್ ನಿಲುವು ಸರಿಯಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ವಿಜಯಲಕ್ಷ್ಮಿ ಪರ ಹಿರಿಯ ವಕೀಲ ನಾಗಮುತ್ತು ವಾದ ಮಂಡಿಸಿದರು, ಮಾಫಿಸಾಕ್ಷಿಯನ್ನು ಪರಿಗಣಿಸುವ ಅಧಿಕಾರ ಪ್ರಿನ್ಸಿಪಲ್ ಕೋರ್ಟ್‌ಗೆ ಮಾತ್ರ ಇದೆ ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ಮಾಫಿ ಸಾಕ್ಷಿಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂಬ ವಾದವನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿತು. ಪ್ರಕರಣದಲ್ಲಿ ಬೇರೆ ಯಾವುದೇ ಕಾನೂನು ಅಂಶಗಳಿದ್ದರೆ ಆ ಕುರಿತು ವಾದ ಮಂಡಿಸುವಂತೆ ಸೂಚಿಸಿತು. ವಿಚಾರಣಾ ಕೋರ್ಟ್‌ಗೆ ಅಧಿಕಾರ ಇಲ್ಲ ಎಂಬ ವಿಚಾರವನ್ನೇ ಮುಂದಿಟ್ಟುಕೊಂಡು ವಾದಿಸುವ ಬದಲು, ಅದಕ್ಕಿಂತ ಪರಿಣಾಮಕಾರಿ ಕಾನೂನು ಅಂಶಗಳಿದ್ದರೆ ಅವುಗಳನ್ನು ಮಂಡಿಸುವಂತೆ ನ್ಯಾಯಮೂರ್ತಿ ಪರ್ದಿವಾಲಾ ಸೂಚಿಸಿದರು. ಇದೇ ವೇಳೆ ಮಾಫಿ ಸಾಕ್ಷಿ ವಿಚಾರಣೆಂ ಸಂದರ್ಭದಲ್ಲಿ ಆರೋಪಿಗಳಿಗೆ ಪಾಟಿ ಸವಾಲು ನಡೆಸುವ ಹಕ್ಕು ಇದೆ ಎಂದು ತಿಳಿಸಲಾಯಿತು. ಈ ಮೂಲಕ ಮಾಫಿ ಸಾಕ್ಷಿ ನೀಡುವ ಹೇಳಿಕೆಯನ್ನು ವಿಚಾರಣೆಯ ಸಂದರ್ಭದಲ್ಲಿ ಪ್ರಶ್ನಿಸುವ ಅವಕಾಶ ಆರೋಪಿಗಳಿಗೆ ಇರುವುದನ್ನು ಪೀಠ ಸ್ಪಷ್ಟಪಡಿಸಿದೆ. ಅರ್ಜಿ ವಜಾಗೊಳಿಸಿದ ಬಳಿಕವೂ ವಿಜಯಲಕ್ಷ್ಮಿ ಪರ ವಕೀಲ ನಾಗಮುತ್ತು ವಾದ ಮುಂದುವರಿಸಲು ಪ್ರಯತ್ನಿಸಿದರು. ಆದರೆ ಅರ್ಜಿ ವಜಾಗೊಂಡ ಹಿನ್ನೆಲೆಯಲ್ಲಿ ಹೆಚ್ಚಿನ ವಾದವನ್ನು ಆಲಿಸಲು ಸುಪ್ರೀಂಕೋರ್ಟ್ ಮುಂದಾಗಲಿಲ್ಲ.

## ನಿತ್ಯ ಪಂಚಾಂಗ 9.10.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ಭಾದ್ರಪದ ಬಹುಳ, ಚತುರ್ದಶಿ, ಉತ್ತರಾ ನಕ್ಷತ್ರ, ಘಾತ ಚತುರ್ದಶಿ, ಹುಲ್ಯಾಳ ಶಂಭಲಿಂಗಸ್ವಾಮಿ ಪುಣ್ಯದಿನ, ಶಸ್ತ್ರಾದಿ ಹತಶಾಸ್ತ್ರ, ವಿಶ್ವ ಅಂಚೆ ದಿನ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ನನ್ನ–ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ಷಡ್ಯಂತ್ರ

### ಸ್ಟಿಂಗ್ ಮಾಡಿದ ಪಿತಾಮಹ ಯಾರು ಎಂದು ಗೊತ್ತು: ಸಿಎಂ ಡಿ.ಕೆ.ಶಿವಕುಮಾರ್

**ನವದೆಹಲಿ, ಅ.9:** ಮುಖ್ಯಮಂತ್ರಿ ಆದ ಬಳಿಕ ನನ್ನ ಹಾಗೂ ಇತರೆ ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ಪ್ರಯತ್ನ ನಡೆದಿದ್ದು, ಇದರ ಪಿತಾಮಹ ಯಾರು ಇದಕ್ಕೆ ಹಣಕಾಸಿನ ನೆರವು ಯಾರು ನೀಡುತ್ತಿದ್ದಾರೆ ಹಾಗೂ ಹೇಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂಬುದು ನನಗೆ ತಿಳಿದಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ. ನವದೆಹಲಿಯ ಕರ್ನಾಟಕ ಭವನದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಗುರುವಾರ ಪ್ರತಿಕ್ರಿಯೆ ನೀಡಿದರು. ಸಚಿವರ ಮೇಲೆ ಗುಪ್ತ ಕಾರ್ಯಾಚರಣೆ ಮಾಡುತ್ತಿರುವ ಬಗ್ಗೆ ನೀಡಿರುವ ಎಚ್ಚರಿಕೆ ಬಗ್ಗೆ ಕೇಳಿದಾಗ, ಮಾರು ವೇಷದ ಕಾರ್ಯಾಚರಣೆಗಳನ್ನು ನನ್ನ ಮೇಲಿಂದಲೇ ಶುರು ಮಾಡಲು ಪ್ರಯತ್ನ ಮಾಡಿದ್ದಾರೆ. ನನ್ನ ಬಳಿ ಈ ಬಗ್ಗೆ ಎಲ್ಲ ಸಾಕ್ಷ್ಯಗಳೂ ಇವೆ. ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ನಾನು ಏನೇ ಮಾತನಾಡಬೇಕಾದರೂ ಸುಮ್ಮನೆ ಮಾತನಾಡುವುದಿಲ್ಲ ಎಂದರು.

ಈ ಕಾರ್ಯಾಚರಣೆ ಸಿಎಂ ಆಗುವ ಮುನ್ನವೇ ಅಥವಾ ಸಿಎಂ ಆದ ಬಳಿಕ ನಡೆದಿದೆಯೇ ಎಂದು ಕೇಳಿದಾಗ, ಮುಖ್ಯಮಂತ್ರಿಯಾದ ಬಳಿಕ ನಡೆದಿರುವ ಪ್ರಯತ್ನಗಳ ಬಗ್ಗೆ ಹೇಳುತ್ತಿದ್ದೇನೆ. ನನ್ನನ್ನು ಸೇರಿಸಿ ಬೇರೆ ಯಾವ, ಯಾವ ನಾಯಕರ ವಿರುದ್ಧ ಕಾರ್ಯಾಚರಣೆ ಮಾಡಲು



ಪ್ರಯತ್ನಿಸುತ್ತಿದ್ದಾರೆ ಎಂಬುದೂ ತಿಳಿದಿದೆ. ಆದರೆ, ಈ ಎಲ್ಲ ವಿಚಾರಗಳನ್ನು ಈಗ ಬಹಿರಂಗವಾಗಿ ಮಾತನಾಡುವ ಅಗತ್ಯವಿಲ್ಲ ಎಂದು ತಿಳಿಸಿದರು. ತಮ್ಮ ವಿರುದ್ಧದ ಪ್ರಯತ್ನಗಳ ಹಿಂದೆ ಕರ್ನಾಟಕದವರೇ ಇದ್ದಾರೆಯೇ ಅಥವಾ ಬೇರೆ ರಾಜ್ಯದವರೂ ಇದ್ದಾರೆಯೇ ಎಂಬ ಬಗ್ಗೆ ಕೇಳಲಾಗಿ, ನಾನು ನಿಮ್ಮ ಬಳಿ ಎಲ್ಲವನ್ನೂ ಬಹಿರಂಗಪಡಿಸಲು ಹೋಗುವುದಿಲ್ಲ. ಕಾಲ ಬಂದಾಗ ಉತ್ತರ ಕೊಡುತ್ತೇನೆ ಎಂದು ಹೇಳಿದರು.

**ಅಧಿಕಾರಿಗಳು, ಸಚಿವರಿಗೆ ಎಚ್ಚರಿಕೆಯಿಂದಿರಲು ಸೂಚನೆ**

ಸಚಿವರನ್ನು ಸಿಕ್ಕಿ ಹಾಕಿಸಲು ಏಜೆಂಟರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಬಹಳ ಚರ್ಚೆಯಾಗುತ್ತಿದೆ ಎಂದು ಕೇಳಿದಾಗ, ಕೆಲವರು ನನ್ನ ಬಳಿ ಬಂದಿದ್ದರು, ನಾನು ಚಿತ್ರಗಳನ್ನು ಬಿಡುಗಡೆ ಮಾಡಲು ಸಿದ್ಧ. ಸದ್ಯಕ್ಕೆ ಅದರ ಅವಶ್ಯಕತೆ ಇಲ್ಲ. ಯಾರು ಏನೇನು ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತು. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ನನ್ನ ಬಳಿ ಯಾರು ಬಂದಿದ್ದರೋ ಅವರ ಮೇಲೆ ಅನುಮಾನ ಬಂದು ಪೊಲೀಸರಿಗೆ ತಿಳಿಸಿ, ದಾಖಲೆಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿದ್ದೇನೆ. ಅದನ್ನು ಈಗಲೇ ಬಹಿರಂಗ ಮಾಡಲು ಸಾಧ್ಯವಿಲ್ಲ. ಇದಕ್ಕೆ ಪಿತಾಮಹರು ಯಾರು ಎಂದು ತಿಳಿದಿದೆ. ಅದಕ್ಕೆಲ್ಲಾ ಉತ್ತರಿಸಲು ಹೋಗುವುದಿಲ್ಲ. ಅಧಿಕಾರಿಗಳನ್ನು ಸುಮ್ಮನೆ ಸಿಕ್ಕಿಹಾಕಿಸಲು ಪ್ರಯತ್ನ ಮಾಡುತ್ತಿದ್ದು, ಅವರು ಹುಷಾರಾಗಿರಬೇಕು ಎಂದು ಎಚ್ಚರಿಕೆ ನೀಡಿದೆ. ಹಿಂದೆ ಮಾಧ್ಯಮದಿಂದ ಸ್ಟಿಂಗ್ ಆಪರೇಷನ್ ಮಾಡಲು ಬಂದಿದ್ದರು. ಹಾಗಾಗಿ ಈಗಲೇ ಎಚ್ಚರಿಕೆ ನೀಡಲಾಗಿದೆ. ಕೆಲವು ನಾಯಕರು ಈ ಕಾರ್ಯಾಚರಣೆಗೆ ಖಾಸಗಿ ಏಜೆಂಟರನ್ನು ನೇಮಕ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಪಕ್ಕಾ ಮಾಹಿತಿ ಇದೆ ಎಂದರು.

# ಸಂಕಷ್ಟದಲ್ಲಿ ರೈತರನ್ನು ಕೈಬಿಡುವುದಿಲ್ಲ, ಸಾಲ ಪಡೆದಾದರೂ ನೆರವಾಗುತ್ತೇವೆ: ಡಿಸಿಎಂ ಭರವಸೆ



**ಕೊಪ್ಪಳ, ಅ.8:** ರಾಜ್ಯದಲ್ಲಿ ಬರ ಪರಿಸ್ಥಿತಿ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದು, ರೈತರು ಬೆಳೆದ ಬೆಳೆ ಸಂಪೂರ್ಣ ನಾಶವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರನ್ನು ಉಳಿಸಿಕೊಳ್ಳುವುದು ಸರ್ಕಾರದ ಮೊದಲ ಆದ್ಯತೆಯಾಗಿದ್ದು, ಅಗತ್ಯ ಬಿದ್ದರೆ ಸಾಲ ಪಡೆದಾದರೂ ರೈತರಿಗೆ ನೆರವು ನೀಡುತ್ತೇವೆ ಎಂದು ಡಿಸಿಎಂ ಡಾ.ಜಿ.ಪರಮೇಶ್ವರ್ ಭರವಸೆ ನೀಡಿದರು.

ಯಲಬುರ್ಗಾ ತಾಲೂಕಿನ ಗುನ್ನಾಳ ಗ್ರಾಮದ ಜಮೀನಿಗೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು.

ರಾಜ್ಯದ 240 ತಾಲೂಕುಗಳ ಪೈಕಿ ಈಗಾಗಲೇ 217 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಉತ್ತರ ಕರ್ನಾಟಕದ ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು, ವಿಜಯಪುರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬರದ ತೀವ್ರತೆ ಮೈಸೂರು ಭಾಗಕ್ಕಿಂತ ಹೆಚ್ಚಾಗಿದೆ. ಇತ್ತೀಚೆಗೆ ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳ ಬರ ಪರಿಸ್ಥಿತಿ ಪರಿಶೀಲಿಸಿದ ಸಂದರ್ಭದಲ್ಲಿ ವಿಜಯನಗರ ಜಿಲ್ಲೆಯಲ್ಲಿ ಶೇ.98ರಷ್ಟು ಬೆಳೆ ನಾಶವಾಗಿರುವುದು ಕಂಡುಬಂದಿದೆ. ಉಳಿದ ಶೇ.2ರಷ್ಟು ಬೆಳೆಯೂ ರೈತರ ಕೈಗೆ ಸಿಗುವ ಪರಿಸ್ಥಿತಿಯಲ್ಲಿಲ್ಲ. ರಾಜ್ಯವು ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

**ಕೇಂದ್ರದ ಮಾನದಂಡದ ಪ್ರಕಾರವೇ 8,500 ಕೋಟಿ ರೂ. ಪರಿಹಾರ ಸಿಗಬೇಕು**

ಕೇಂದ್ರ ಸರ್ಕಾರದ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿ (ಎನ್‌ಡಿಆರ್‌ಎಫ್) ಮಾನದಂಡದ ಪ್ರಕಾರ ರೈತರಿಗೆ ಒಟ್ಟು 8,500 ಕೋಟಿ ರೂ. ಪರಿಹಾರ ದೊರೆಯಬೇಕಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು ಸೇರಿರುತ್ತದೆ. ಆದರೆ ಕೇಂದ್ರದಿಂದ ಇನ್ನೂ ಪರಿಹಾರ ಬಿಡುಗಡೆಯಾಗದ ಕಾರಣ ರೈತರು ಕಾಯುವ ಸ್ಥಿತಿಯಲ್ಲಿರಬಾರದು ಎಂದು ರಾಜ್ಯ ಸರ್ಕಾರ ತನ್ನ ಪಾಲಿನಿಂದ ಮೊದಲ ಕಂತಿನಲ್ಲಿ ತಲಾ ರೂ. 2,500 ನೀಡಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಮೂರು ತಂಡಗಳನ್ನು ರಾಜ್ಯಕ್ಕೆ ಕಳುಹಿಸಿದ್ದು, ಅವು ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿಯನ್ನು ಪರಿಶೀಲಿಸಿವೆ. ಈ ತಂಡಗಳು ಸಲ್ಲಿಸುವ ವರದಿಯ ಆಧಾರದ ಮೇಲೆ ಕೇಂದ್ರ ಸರ್ಕಾರ ಪರಿಹಾರ ಬಿಡುಗಡೆ ಮಾಡಬೇಕಿದೆ. ಮುಖ್ಯಮಂತ್ರಿ, ತಾವು ಹಾಗೂ ವಿರೋಧ ಪಕ್ಷದ ನಾಯಕರನ್ನು ಒಳಗೊಂಡ ನಿಯೋಗವನ್ನು ಕೇಂದ್ರಕ್ಕೆ ಕರೆದೊಯ್ದು ಪರಿಹಾರಕ್ಕೆ ಒತ್ತಾಯಿಸಲು ನಿರ್ಧರಿಸಲಾಗಿದೆ. ಆದರೆ ಬಿಜೆಪಿ ಮತ್ತು ಜನತಾದಳದ ನಾಯಕರು ನಿಯೋಗದಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿಸಿದ್ದಾರೆ ಎಂದು ಹೇಳಿದರು.

**ಬೆಳೆವಿಮೆ ತ್ವರಿತ ಪಾವತಿಗೆ ಕ್ರಮ**

ಬರದಿಂದ ಬೆಳೆ ಕಳೆದುಕೊಂಡಿರುವ ರೈತರಿಗೆ ಬೆಳೆ ವಿಮೆಯ ಹಣವನ್ನು ಶೀಘ್ರವಾಗಿ ತಲುಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಈ ಬಗ್ಗೆ ವಿಮಾ ಕಂಪನಿಗಳೊಂದಿಗೆ ಈ ಬಗ್ಗೆ ಚರ್ಚಿಸಿದ್ದೇನೆ. ಬೆಳೆ ವಿಮೆಗೆ ರೈತರು ಪಾವತಿಸಬೇಕಾದ ಪಾಲನ್ನು ಸರ್ಕಾರವೇ ಭರಿಸುವ ಬಗ್ಗೆಯೂ ಕ್ರಮ ಕೈಗೊಳ್ಳಲಾಗುತ್ತಿದೆ. ಅರ್ಹ ರೈತರಿಗೆ ವಿಮಾ ಪರಿಹಾರ ತ್ವರಿತವಾಗಿ ದೊರೆಯಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ ಎಂದರು.

**ಸಾಲ ಮರುಪಾವತಿಗೆ ಐದು ವರ್ಷ ಕಾಲಾವಕಾಶ**

ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಾಲ ಮರುಪಾವತಿಗೆ ಐದು ವರ್ಷಗಳ ಕಾಲಾವಕಾಶ ನೀಡುವ ಕುರಿತು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಸಾಲದ ಮರುಪಾವತಿಯನ್ನು 60 ತಿಂಗಳು ಮುಂದೂಡುವ ಮೊರಟೋರಿಯಂ ಅವಧಿ ಕಲ್ಪಿಸಲಾಗಿದ್ದು, ಈ ಅವಧಿಯಲ್ಲಿ ರೈತರು ಸಾಲ ಮರುಪಾವತಿ ಮಾಡದಿದ್ದರೂ ಪರವಾಗಿಲ್ಲ. ಸಾಲದ ಮೇಲಿನ ಬಡ್ಡಿ ಸೇರಿ ಸಂಬಂಧಿತ ಜವಾಬ್ದಾರಿಗಳನ್ನು ಸರ್ಕಾರವೇ ನೋಡಿಕೊಳ್ಳಲಿದೆ ಎಂದು ಬ್ಯಾಂಕ್‌ಗಳಿಗೆ ತಿಳಿಸಲಾಗಿದೆ ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದರು.

**ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ನೀಡಲು ಕೇಂದ್ರಕ್ಕೆ ಮನವಿ**

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮೆಕ್ಕೆಜೋಳವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗಿದ್ದು, ಈಗ ಬೆಲೆಯ ಕೊರತೆ ಮತ್ತು ಇಳುವರಿ ಕುಸಿತದಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸಚಿವರು ತಿಳಿಸಿದರು.

# ಐಟಿ, ಇ.ಡಿ., ಸಿಬಿಐ ಬಳಸಿಕೊಂಡು ರಾಜ್ಯ ಸರ್ಕಾರ ಕೆಡವಲು ಕೇಂದ್ರ ಯತ್ನ: ಪ್ರಿಯಾಂಕ್ ಖರ್ಗೆ ಆರೋಪ



**ಬೆಂಗಳೂರು, ಅ.8:** ಕೇಂದ್ರ ಸರ್ಕಾರ ಐಟಿ, ಇಡಿ, ಸಿಬಿಐ ಮೂಲಕ ರಾಜ್ಯ ಸರ್ಕಾರವನ್ನು ಕೆಡವಲು ಯತ್ನಿಸುತ್ತಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ ಮಾಡಿದ್ದಾರೆ. ಮಹಾರಾಷ್ಟ್ರ, ಅಸ್ಸಾಂ, ಗೋವಾ, ಆಂಧ್ರಪ್ರದೇಶ, ಮಧ್ಯಪ್ರದೇಶದ ಇತಿಹಾಸವನ್ನು ನೋಡಿದರೆ ಐಟಿ, ಇಡಿ, ಸಿಬಿಐ ಕೇಂದ್ರ ಸರ್ಕಾರದ ಪ್ರಾಯೋಜಿತ ದಾಳಿ ಎಂದು ಗೊತ್ತಾಗುತ್ತದೆ ಎಂದು ಖರ್ಗೆ ಹೇಳಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಬಗ್ಗೆ ಮಾತನಾಡಿದ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಕುಮಾರಸ್ವಾಮಿಯವರು ಎಲ್ಲಿಂದ ಮಾಹಿತಿ ಪಡೆದಿದ್ದಾರೆಂದು ಗೊತ್ತಿಲ್ಲ. ಆದರೆ ನಮಗೆ ಬಂದಿರುವ ಮಾಹಿತಿ ಪ್ರಕಾರ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವನ್ನು ಹೇಗಾದರೂ ಮಾಡಿ ಕೆಡವಬೇಕೆಂಬ ಪ್ರಯತ್ನ ನಡೆದಿದೆ. ಐಟಿ, ಇಡಿ ಹಾಗೂ ಕೇಂದ್ರ ಸರ್ಕಾರದವರು ಸರ್ಕಾರವನ್ನು ಯಾವುದಾದರೂ ರೀತಿಯಲ್ಲಿ ಕೆಡವಲು ಪ್ರಯತ್ನ ನಡೆಸಿದ್ದಾರೆ. ಕೇಂದ್ರ ಸರ್ಕಾರ ಹತಾಶೆಗೊಂಡಿದೆ," ಎಂದು ಖರ್ಗೆ ಹೇಳಿದರು.

ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳ ಜನಪ್ರಿಯತೆಯನ್ನು ಸಹಿಸದೆ ಅಸೂಯೆಯಿಂದ ಮಾತನಾಡುತ್ತಿದ್ದಾರೆ ಎಂದು ಖರ್ಗೆ ಆರೋಪಿಸಿದರು.

"ಮುಖ್ಯಮಂತ್ರಿಗಳೇ ಮಾಡಿಸ್ತಾರೆಂದು ಕುಮಾರಸ್ವಾಮಿ ಹೇಳ್ತಿರೋದು ಸರಿಯಲ್ಲ. ಅವರು ಮುಖ್ಯಮಂತ್ರಿ ಮತ್ತು ಕೇಂದ್ರ ಸಚಿವರಾಗಿದ್ದವರು. ನಿಮ್ಮ ಕುರ್ಚಿಗಾದ್ರು ಸ್ವಲ್ಪ ಗೌರವ ಕೊಡಿ. ನಮ್ಮ ಕುಟುಂಬದ ಬಗ್ಗೆ ಮಾತನಾಡಲು ನಿಮಗೆ ಅರ್ಹತೆ ಇಲ್ಲ," ಎಂದು ಖರ್ಗೆ ತಿಳಿಸಿದರು.

# ತೆರಿಗೆ ವ್ಯಾಪ್ತಿಯಿಂದ ಸರ್ಕಾರಿ, ಅರಣ್ಯ ಆಸ್ತಿಯನ್ನು ಹೊರಗಿಡುವ ಸುತ್ತೋಲೆಗೆ ತಡೆ



**ಬೆಂಗಳೂರು, ಅ.8:** ತೆರಿಗೆ ನಿರ್ಧಾರಣೆ ಹಾಗೂ ಇ–ಸ್ವತ್ತು 2.0 ತಂತ್ರಾಂಶ ದಿಂದ ಸರ್ಕಾರಿ ಮತ್ತು ಅರಣ್ಯ ಭೂಮಿಯಲ್ಲಿನ ಆಸ್ತಿಗಳನ್ನು ಕೈಬಿಡುವ ಬಗ್ಗೆ ಕಳೆದ ಆಗಸ್ಟ್ 13ರಂದು ಹೊರಡಿಸಲಾಗಿರುವ ಸುತ್ತೋಲೆಗೆ ತಾತ್ಕಾಲಿಕ ತಡೆ ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಈ ಹಿಂದೆ ವಿಧಾನಮಂಡಲದ ಉಭಯ ಸದನಗಳಲ್ಲಿ ಅನುಮೋದನೆಯಾಗಿದ್ದ ಹಾಗೂ ರಾಜ್ಯಪಾಲರ ಅಂಗೀಕಾರ ಪಡೆದಿದ್ದ ಕಾಯಿದೆಗೆ ಸಂಬಂಧಿಸಿದಂತೆ ಈ ಸುತ್ತೋಲೆಯನ್ನು ಇಲಾಖೆ ವತಿಯಿಂದ ಹೊರಡಿಸಲಾಗಿತ್ತು. ಆದರೆ ಕಸ್ತೂರಿರಂಗನ್ ವರದಿಯ ಮೇಲಿನ ಚರ್ಚೆಯ ವೇಳೆ ವಿಶೇಷ ಅಧಿವೇಶನದಲ್ಲಿ ಹಲವು ಜನಪ್ರತಿನಿಧಿಗಳು ಪಕ್ಷಾತೀತ ವಾಗಿ ಈ ಸುತ್ತೋಲೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಸದನದಲ್ಲಿ ಭರವಸೆ ನೀಡಿದಂತೆ ಈಗ ಆಗಸ್ಟ್ 13ರ ಆದೇಶಕ್ಕೆ ತಡೆ ನೀಡಲಾಗಿದೆ ಎಂದು ತಿಳಿಸಿದರು.

ಕಾಡಿನಂಚಿನಲ್ಲಿರುವ ಮತ್ತು ಸರ್ಕಾರಿ ಭೂಮಿಯಲ್ಲಿ ಈಗಾಗಲೇ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರು ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿರುವ ಈಶ್ವರ ಖಂಡ್ರೆ, ಕಂದಾಯ, ಅರಣ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸೇರಿದಂತೆ ಬಹು ಇಲಾಖೆಯ ಅಧಿಕಾರಿಗಳ ಉನ್ನತಮಟ್ಟದ ಸಮಿತಿ ರಚಿಸಿ ಇದಕ್ಕೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಈ ಸಂಬಂಧ ಇಂದು ಎಲ್ಲ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದು, ಮುಂದಿನ ಆದೇಶದವರೆಗೆ ಆಗಸ್ಟ್ 13ರ ಸುತ್ತೋಲೆಗೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆ ಕೈಗೊಳ್ಳದಿರಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

### ಕುತಂತ್ರ ಬದಿಗಿಟ್ಟು ಜನರ ಕಷ್ಟಕ್ಕೆ ಸ್ಪಂದಿಸಿ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

# ಕಾಂಗ್ರೆಸ್ ನಾಯಕರೇ ದಂಗೆ ಏಳುವ ದಿನ ದೂರವಿಲ್ಲ

**ಬಾಗಲಕೋಟೆ, ಅ.8:** ರಾಜ್ಯ ಸರ್ಕಾರವು ಸ್ಟಿಂಗ್ ಮತ್ತು ಡಿಂಗ್ ಆಪರೇಷನ್‌ಗಳಂತಹ ರಾಜಕೀಯ ಕುತಂತ್ರಗಳನ್ನು ಬಿಟ್ಟು ಜನರ ಕಷ್ಟಗಳಿಗೆ ಸ್ಪಂದಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ನಾಯಕರೇ ದಂಗೆ ಏಳುವ ಪರಿಸ್ಥಿತಿ– ರಾಜ್ಯದಲ್ಲಿ ಷಡ್ಯಂತ್ರ ಹಾಗೂ ಕುತಂತ್ರ ರಾಜಕಾರಣ ಮಾಡುವುದರಲ್ಲಿ ಆಡಳಿತರೂಢ ಪಕ್ಷದವರೇ ಮುಂದಿದ್ದಾರೆ. ಇದಕ್ಕೆ ಕಾಂಗ್ರೆಸ್ ಶಾಸಕರೇ ಸಾಕ್ಷಿಯಾಗಿದ್ದು, ಎಚ್.ಕೆ. ಪಾಟೀಲ, ಬಸವರಾಜ ರಾಯರಡ್ಡಿ ಹಾಗೂ ಬಿ.ಆರ್. ಪಾಟೀಲ ಅವರೇ ಈ ಬಗ್ಗೆ ಧ್ವನಿ ಎತ್ತಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮುಂದಿನ ದಿನಗಳಲ್ಲಿ ಸ್ವತಃ ಕಾಂಗ್ರೆಸ್ ನಾಯಕರೇ ಸರ್ಕಾರದ ವಿರುದ್ಧ ದಂಗೆ ಏಳಲಿದ್ದಾರೆ ಎಂದು ಭವಿಷ್ಯ ನುಡಿದರು.

**ಅಹಿಂದ ಮತಗಳ ಡಿಲೀಟ್ ಆರೋಪಕ್ಕೆ ತಿರುಗೇಟು**

ಅಹಿಂದ ಮತಗಳನ್ನು ವ್ಯವಸ್ಥಿತವಾಗಿ



ಕೈಬಿಡಲಾಗುತ್ತಿದೆ ಎಂಬ ಮುಖ್ಯಮಂತ್ರಿಗಳ ಆರೋಪ ಸಂಪೂರ್ಣ ಸುಳ್ಳು. ಕೇಂದ್ರದ ನರೇಂದ್ರ ಮೋದಿ ಸಂಪುಟದಲ್ಲಿಯೇ 35ಕ್ಕೂ ಹೆಚ್ಚು ಹಿಂದುಳಿದ ವರ್ಗಗಳ ಸಚಿವರಿದ್ದಾರೆ. ಪ್ರತಿ ಕ್ಷೇತ್ರದಲ್ಲಿ 5ರಿಂದ 10 ಸಾವಿರ ಮತಗಳನ್ನು ಡಿಲೀಟ್ ಮಾಡಲಾಗಿದೆ ಎಂದು ಸಿಎಂ ಕೇವಲ ಆರೋಪ ಮಾಡುತ್ತಿದ್ದು, ಧೈರ್ಯ ಇದ್ದರೆ ಆ ಮತದಾರರ ಪಟ್ಟಿಯನ್ನು ಬಹಿರಂಗಪಡಿಸಲಿ ಎಂದು ವಿಜಯೇಂದ್ರ ಸವಾಲು ಹಾಕಿದರು.

**ಪ್ರಕೃತಿ ವಿಕೋಪ ನಿರ್ವಹಣೆಯಲ್ಲಿ ಸರ್ಕಾರ ವಿಫಲ**

ರಾಜ್ಯದಲ್ಲಿ ತೀವ್ರ ಬರಗಾಲವಿದ್ದರೂ ಸರ್ಕಾರ ರೈತರ ಸಂಕಷ್ಟಕ್ಕೆ ಸ್ಪಂದಿಸುವಲ್ಲಿ ವಿಫಲವಾಗಿದೆ. ಮುಖ್ಯಮಂತ್ರಿಗಳು ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕೈಕಟ್ಟಿ ಕುಳಿತಿದ್ದಾರೆ ಎಂದು ವಿಜಯೇಂದ್ರ ಲೇವಡಿ ಮಾಡಿದರು.

**ಪ್ರಮುಖ ಬೇಡಿಕೆಗಳು ಮತ್ತು ವಾಗ್ದಾಳಿ**

ಹೆಕ್ಟೇರ್‌ಗೆ 50,000 ರೂಪಾಯಿ ಬರ ಪರಿಹಾರ ನೀಡಬೇಕು ರೈತರ 5 ಲಕ್ಷ ರೂಪಾಯಿವರೆಗಿನ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಮುಂದಿನ 4–5 ತಿಂಗಳವರೆಗೆ ರೈತರಿಗೆ ನೀಡುವ ಪ್ರೋತ್ಸಾಹ ಧನವನ್ನು 5 ರೂಪಾಯಿ ಹೆಚ್ಚಿಸಬೇಕು. ಉತ್ತರ ಕರ್ನಾಟಕ ಭಾಗದ ಜನರು ಕೆಲಸ ಅರಸಿ ಗುಳೆ ಹೋಗುವುದನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು. ಯುಕೆಪಿ ಯೋಜನೆಗೆ ಹಣವಿಲ್ಲ, ವಿಶ್ವಬ್ಯಾಂಕ್‌ನಿಂದ ಸಾಲ ಮಾಡಿ ಹಣ ಮಾಡುವ ಹುನ್ನಾರ ನಡೆಯುತ್ತಿದೆ ಎಂದು ಟೀಕಿಸಿದರು.

# ಆಡಳಿತದಲ್ಲಿ ಪಾರದರ್ಶಕತೆ ತರಲು ತಂತ್ರಜ್ಞಾನದಲ್ಲಿ ಭಾಷಿಣಿ ಸಾಧನ ಅಳವಡಿಕೆ: ಪ್ರಿಯಾಂಕ್ ಖರ್ಗೆ




ಈ ಕಾರ್ಯಾಗಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಆರ್‌ಡಿಪಿಆರ್ ಮತ್ತು ಇ–ಗವರ್ನೆನ್ಸ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಮಂಜುನಾಥ್ ಹಾಗೂ ಟಿಸಿಎಸ್‌ನ ನಿರ್ದೇಶಕ ಹರ್ಷಲ್ ಗೋಯಲ್ ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

### ಭಾಷಿಣಿ ರಾಜ್ಯಂ ಕಾರ್ಯಾಗಾರದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

ಬೆಂಗಳೂರು, ಅ.8: ಜನಸಾಮಾನ್ಯರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಂಡುಕೊಳ್ಳಲು ಮತ್ತು ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ತರಲು ಕೃತಕ ಬುದ್ಧಿಮತ್ತೆ (ಎಐ) ಸೇರಿ ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳಲ್ಲಿ ಭಾಷಿಣಿ ತಂತ್ರಜ್ಞಾನ ಸಾಧನವನ್ನು ಅಳವಡಿಸಿಕೊಳ್ಳಲಾಗುವುದು ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರಜಾಸೇವಾ ಇಲಾಖೆಯ ಇಡಿಸಿಎಸ್ ನಿರ್ದೇಶನಾಲಯವು ವಿಕಾಸಸೌಧದಲ್ಲಿ ಗುರುವಾರ ಆಯೋಜಿಸಿದ್ದ ಭಾಷಿಣಿ ರಾಜ್ಯಂ ಎಂಬ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕವು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ಪ್ರಸ್ತುತ ವಿಶ್ವದ 4ನೇ ಅತಿದೊಡ್ಡ ತಂತ್ರಜ್ಞಾನ ಕ್ಲಸ್ಟರ್ ಆಗಿ ಹೊರಹೊಮ್ಮಿದೆ. ಕೃತಕ ಬುದ್ಧಿಮತ್ತೆ ಕೌಶಲ್ಯದಲ್ಲಿ 5ನೇ ಸ್ಥಾನದಲ್ಲಿದ್ದು, ಅತ್ಯಂತ ದಕ್ಷ ಮಾನವ ಸಂಪನ್ಮೂಲವನ್ನು ಹೊಂದಿದೆ. ಭಾಷಿಣಿ ಯೋಜನೆಯನ್ನು ವೇಗವಾಗಿ ಮುನ್ನಡೆಸಲು ಕರ್ನಾಟಕ ಅತ್ಯಂತ ಸೂಕ್ತವಾದ ರಾಜ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕದಲ್ಲಿ ಪ್ರತಿ 150 ಕಿಲೋಮೀಟರ್‌ಗೆ ಭಾಷಾಶೈಲಿ ಬದಲಾಗುತ್ತದೆ. ಗಡಿಭಾಗಗಳಲ್ಲಿ ಮರಾಠಿ, ಉರ್ದು, ತೆಲುಗು, ತಮಿಳು, ಮಲಯಾಳಂ ಹಾಗೂ ಕರಾವಳಿಯಲ್ಲಿ ತುಳು ಮತ್ತು ಬ್ಯಾರಿ ಭಾಷೆಗಳ ಪ್ರಭಾವವಿದೆ. ಈ ಪ್ರಾದೇಶಿಕ ಭಾಷಾ ವೈವಿಧ್ಯದಿಂದಾಗಿ ಸ್ಥಳೀಯ ಮಟ್ಟದಲ್ಲಿ ನಾಗರಿಕರಿಗೆ ಸರ್ಕಾರಿ ಸೇವೆಗಳನ್ನು ತಲುಪಿಸುವುದು ಸವಾಲಿನ ಕೆಲಸವಾಗಿದೆ. ಈ ಸವಾಲನ್ನು ಭಾಷಿಣಿ ತಂತ್ರಜ್ಞಾನದ ಮೂಲಕ ಸುಲಭವಾಗಿ ಮೆಟ್ಟಿಬರಬಹುದು ಎಂದು ಹೇಳಿದರು.

ಪ್ರಸ್ತುತ 700ಕ್ಕೂ ಹೆಚ್ಚು ನಾಗರಿಕ ಸೇವೆಗಳನ್ನು ಡಿಜಿಟಲ್ ರೂಪದಲ್ಲಿ ನೀಡಲಾಗುತ್ತಿದೆ. ಸಾರ್ವಜನಿಕರು ದೊಡ್ಡ ಅರ್ಜಿಗಳನ್ನು ಭರ್ತಿ ಮಾಡುವ ಬದಲಿಗೆ ವಾಟ್ಸ್‌ಪ್, ಚಾಟ್‌ಬಾಟ್‌ಗಳು, ಧ್ವನಿ ಮತ್ತು ವಿಡಿಯೋ ಸಂದೇಶಗಳ ಮೂಲಕ ದೂರು ಸಲ್ಲಿಸಲು ಬಯಸುತ್ತಿದ್ದಾರೆ. ಈ ದೂರುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಭಾಷಿಣಿ ಹಾಗೂ ಎಐ ಸಾಧನಗಳನ್ನು ಸಕ್ರಿಯವಾಗಿ ಬಳಸಿಕೊಳ್ಳಲು ಯೋಜನೆ ರೂಪಿಸಲಾಗುತ್ತಿದೆ ಎಂದು ಪ್ರಿಯಾಂಕ್ ಖರ್ಗೆ ವಿವರಿಸಿದರು.

**ಇ–ಆಫೀಸ್ ವ್ಯವಸ್ಥೆಯಲ್ಲಿ ಭಾಷಿಣಿ**

ಪ್ರಜಾಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ ಮಾತನಾಡಿ, ಇ–ಆಫೀಸ್ ವ್ಯವಸ್ಥೆಯಲ್ಲಿ ಭಾಷಿಣಿ ಸಾಧನವನ್ನು ಅಳವಡಿಸಲಾಗಿದ್ದು, ಕಳೆದ ಒಂದು ತಿಂಗಳಿನಿಂದ ಅಧಿಕಾರಿಗಳು ಇದನ್ನು ಸುಲಭವಾಗಿ ಬಳಸುತ್ತಿದ್ದಾರೆ. ಟೈಪ್ ಮಾಡುವ ಬದಲಿಗೆ ಧ್ವನಿಯಿಂದ ಪಠ್ಯಕ್ಕೆ ರೂಪಾಂತರಿಸಲು ಮತ್ತು ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳ ನಡುವೆ ಟಿಪ್ಪಣಿಗಳನ್ನು ತಕ್ಷಣ ಅನುವಾದಿಸಲು ಇದು ನೆರವಾಗುತ್ತಿದೆ. ಆರೋಗ್ಯ ಕ್ಷೇತ್ರದಲ್ಲಿ ವೈದ್ಯರು ರೋಗಿಗಳ ಜೊತೆ ಮಾತನಾಡುವಾಗಲೇ ವರದಿ ಸಿದ್ಧಪಡಿಸಲು ಕೂಡ ಈ ತಂತ್ರಜ್ಞಾನ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಕಾರ್ಯಾಗಾರದಲ್ಲಿ ದೆಹಲಿಯಿಂದ ಆಗಮಿಸಿದ್ದ ಭಾಷಿಣಿ ತಂಡದ ಸಿಇಓ ಅಮಿತಾಭ್ ನಾಗ್ ಅವರು ಭಾಷಿಣಿ ತಂತ್ರಜ್ಞಾನದ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

# ರಾಜಧಾನಿ ದೆಹಲಿಯಲ್ಲಿ ಪಟ್ಲ ಯಕ್ಷ ಸೌರಭ–2026

### ನೇಪಥ್ಯ ಕಲಾವಿದ ನಾಳ ರಘುಶೆಟ್ಟಿ ಅವರಿಗೆ ನಾಳೆ ಯಕ್ಷಸೌರಭ ಪ್ರಶಸ್ತಿ ಪ್ರದಾನ

**ನವದೆಹಲಿ, ಅ.8:** ಯಕ್ಷಧ್ರುವ ಪಟ್ಲ ಫೌಂಡೇಶನ್, ದೆಹಲಿ ಘಟಕವು ಪ್ರತಿ ವರ್ಷದಂತೆ ಈವರ್ಷವೂ ದಿನಾಂಕ 10.10.2026 ರಂದು ದೆಹಲಿ ಕರ್ನಾಟಕ ಸಂಘ ಮತ್ತು ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಸಹಯೋಗದಲ್ಲಿ ಪಟ್ಲ ಯಕ್ಷಸೌರಭ–2026 ಸಮಾರಂಭವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಈ ಸಮಾರಂಭವನ್ನು ಕೇಂದ್ರಾಡಳಿತ ಪ್ರದೇಶ ಚಂಡೀಗಢದ ಮುಖ್ಯ ಕಾರ್ಯದರ್ಶಿ ಎಚ್. ರಾಜೇಶ್ ಪ್ರಸಾದ್ ಐಎಎಸ್ ಅವರು ಉದ್ಘಾಟಿಸಲಿರುವರು. ಆರ್.ಕೆ. ಪುರಂ ಕ್ಷೇತ್ರದ ಶಾಸಕ ಅನಿಲ್ ಕುಮಾರ್‌ಶರ್ಮ ಅವರು ಮುಖ್ಯ ಅತಿಥಿಗಳಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ರೇಣುಕುಮಾರ್ ಆರ್., ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ಯಕ್ಷಧ್ರುವ ಪಟ್ಲ ಫೌಂಡೇಶನ್ ಬಂಟ್ವಾಳ ಘಟಕದ ಗೌರವ ಅಧ್ಯಕ್ಷ ಚಂದ್ರಹಾಸ ಶೆಟ್ಟಿ ರಂಗೋಲಿ ಮತ್ತು ನವದೆಹಲಿಯ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ಅಧ್ಯಕ್ಷ ಸುರೇಶ್ ಶೆಟ್ಟಿ ಅವರು ಗೌರವ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಕರ್ನಾಟಕ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಜನರಲ್ ಮ್ಯಾನೇಜರ್ ಬಸವರಾಜ್ ಎಸ್.ದೇಸಳ್ಳಿ ಅವರನ್ನು ಅಭಿನಂದಿಸಲಾಗುವುದು ಮತ್ತು ಯಕ್ಷಗಾನದಲ್ಲಿ ನೇಪಥ್ಯ ಕಲೆಯಿಂದ ಗಮನಾರ್ಹ ಸಾಧನೆಗೈದು ಪ್ರಸಿದ್ಧರಾದ ರಘು ಶೆಟ್ಟಿ ನಾಳ ಅವರನ್ನು ಗೌರವ ಪೂರ್ವಕವಾಗಿ ಸನ್ಮಾನಿಸಲಾಗುವುದು.

> **ಯಕ್ಷಧ್ರುವ ಪಟ್ಲ ಫೌಂಡೇಶನ್ ಸಂಸ್ಥಾಪಕ ಪಟ್ಲ ಸತೀಶ್ ಶೆಟ್ಟಿ ಅವರ ಭಾಗವತಿಕೆಯಲ್ಲಿ ಬಹುಜನರ ಅಪೇಕ್ಷೆಯ ಮೇರೆಗೆ ಜ್ವಾಲಾ ಪ್ರತಾಪ ಯಕ್ಷಗಾನ ಪ್ರದರ್ಶನ ಗೊಳ್ಳಲಿದೆ ಎಂದು ಪಟ್ಲ ಫೌಂಡೇಶನ್ ಟ್ರಸ್ಟ್, ದೆಹಲಿ ಘಟಕದ ಅಧ್ಯಕ್ಷ ಡಾ. ನಿರಂಜನ್ ನಾಯ್ಕ್ ತಿಳಿಸಿದ್ದಾರೆ.**

### ರಘುಶೆಟ್ಟಿ ನಾಳ ಕಿರು ಪರಿಚಯ



ಬೆಳ್ತಂಗಡಿ ತಾಲೂಕಿನ ನಾಳ ಎಂಬಲ್ಲಿ ಓಬಯ ಶೆಟ್ಟಿ ಮತ್ತು ದೇವಕಿ ದಂಪತಿಗಳಿಗೆ ಮೂರನೇ ಮಗನಾಗಿ ಜನಿಸಿದ ಇವರು 5ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಪಡೆದವರು. 16ನೇ ಯಯಸ್ಸಿಗೆ ಯಕ್ಷಗಾನದ ಮೇಲಿನ ಪ್ರೀತಿಯಿಂದ ವೃತ್ತಿಯನ್ನು ಆರಂಭಿಸಿ ಪ್ರಸ್ತುತ ಪಾವಂಜೆ ಮೇಳದ ಪ್ರಧಾನ ರಂಗ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಾ ಮೇಳದ ಉನ್ನತಿಗೆ ಶ್ರಮಿಸುತ್ತಿದ್ದಾರೆ. ಇವರು 3 ವರ್ಷ ಕರ್ನಾಟಕ ಮೇಳ, 35 ವರ್ಷಗಳ ಕಾಲ ಕಟೀಲು ಮೇಳದಲ್ಲಿ ನಿಷ್ಠಾವಂತರಾಗಿ ಚುರುಕಿನಿಂದ ರಂಗ ಸಹಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ಅತ್ಯಂತ ಮುತುವರ್ಜಿಯಿಂದ ಅಬ್ಬರದ ವೇಷಗಳಿಗೆ ದೊಂದಿ ಹಿಡಿಯುವ ಚಾಕಚಕ್ಯತೆಯಿಂದ ಯಕ್ಷಗಾನವು ವಿಜೃಂಭಿಸುವಂತೆ ಮಾಡಿದ್ದಾರಲ್ಲದೆ ಇಷ್ಟರವರೆಗೆ ತೆಂಕುತಿಟ್ಟಿನ ಮೇಳಗಳಲ್ಲಿ ಇವರೇ ಅಗ್ರಗಣ್ಯ ರಂಗಪರಿಕರ್ಮಿ ಎಂಬ ಮನ್ನಣೆಗೆ ಪಾತ್ರರಾಗಿದ್ದಾರೆ.

ಪ್ರಸಂಗದ ನಡೆಯನ್ನು ಅರಿತಿರುವ ಇವರ ಪರದೆ ಎಳೆಯುವ ಕೆಲಸ, ರಂಗಸ್ಥಳ ನಿರ್ಮಾಣ, ಅಲಂಕಾರ, ದೇವಿ ಮಹಾತ್ಮೆಗೆ ತೊಟ್ಟಿಲು ಕಟ್ಟುವ ಕಾಯಕ ಹಾಗೂ ಪ್ರಸಂಗಕ್ಕೆ ಪೂರಕವಾದ ಸಾಮಾಗ್ರಿಗಳನ್ನು ಸರಿಯಾದ ಸಮಯಕ್ಕೆ ಹೊಂದಿಸುವ ಪ್ರಾಮಾಣಿಕ ಕೆಲಸ ಮಹತ್ತರವಾದುದು. ಯಕ್ಷಗಾನ ಕ್ಷೇತ್ರದಲ್ಲಿ ತನ್ನ ಸೇವೆ, ಕರ್ತವ್ಯವನ್ನು ಯಾವುದೇ ಫಲಾಪೇಕ್ಷೆಯನ್ನು ಬಯಸದೇ ದುಡಿಯುತ್ತಿರುವ ಇವರಿಗೆ ಮುಂಬಯಿ, ಬೆಳ್ಮಣ್, ಪೊಳಲಿ ಹಾಗೂ ಇನ್ನಿತರ ಹಲವಾರು ಸಂಘ–ಸಂಸ್ಥೆಗಳು ಇವರು ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಅಭಿನಂದಿಸಿವೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಕ್ರಿಮಿನಲ್ ವಿಚಾರಣೆ ಮಿತಿ 1 ಕೋಟಿಯಿಂದ 5 ಕೋಟಿಗೆ ಹೆಚ್ಚಳ

## ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ

**ನವದೆಹಲಿ,ಅ.8:** ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳಿಗೆ 57ನೇ ಜಿಎಸ್‌ಟಿ ಮಂಡಳಿ ಸಭೆ ಒಪ್ಪಿಗೆ ನೀಡಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆರಿಗೆದಾರರಿಗೆ ಅನುಕೂಲ ಕಲ್ಪಿಸುವ ಹಲವು ಸುಧಾರಣೆಗಳನ್ನು ಕೈಗೊಳ್ಳಲಾಗಿದೆ. ಪ್ರಮುಖವಾಗಿ ಜಿಎಸ್‌ಟಿ ಅಧಿಕಾರಿಗಳಿಗೆ ತೆರಿಗೆ ವಂಚನೆ ಆರೋಪದಲ್ಲಿ ವ್ಯಕ್ತಿಗಳನ್ನು ಬಂಧಿಸುವ ಅಧಿಕಾರವನ್ನು ತೆಗೆದುಹಾಕಲು ನಿರ್ಧರಿಸಲಾಗಿದೆ.

ಜಿಎಸ್‌ಟಿ ಕಾಯ್ದೆಯಡಿ ಕ್ರಿಮಿನಲ್ ವಿಚಾರಣೆ ಆರಂಭಿಸುವ ಮಿತಿಯನ್ನು 1 ಕೋಟಿಯಿಂದ 5 ಕೋಟಿಗೆ ಹೆಚ್ಚಿಸಲಾಗಿದೆ. ಇದರಿಂದ ಕಡಿಮೆ ಮೊತ್ತದ ತೆರಿಗೆ ವಿವಾದಗಳು ಕ್ರಿಮಿನಲ್ ಪ್ರಕರಣಗಳಾಗಿ ಪರಿವರ್ತನೆಯಾಗುವುದನ್ನು ತಪ್ಪಿಸಲು ಸಾಧ್ಯವಾಗಲಿದೆ. ತೆರಿಗೆ, ಬಡ್ಡಿ ಹಾಗೂ ಸೂಕ್ತ ದಂಡದ ಮೂಲಕ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸುವ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡಲಾಗಿದೆ.




ಮಂಡಳಿಯ ನಿರ್ಧಾರಗಳಂತೆ ಜಿಎಸ್‌ಟಿ ಕಾಯ್ದೆಯಲ್ಲಿನ ಕೆಲವು ಅಪರಾಧಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡಲಾಗಿದ್ದು, ಇನ್ನೂ ಹಲವು ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಕನಿಷ್ಠ ಶಿಕ್ಷೆಯ ಕಡ್ಡಾಯ ನಿಯಮವನ್ನೂ ತೆಗೆದುಹಾಕಲಾಗಿದೆ. ಗಂಭೀರ ತೆರಿಗೆ ವಂಚನೆ ಮತ್ತು ವಂಚನೆಯಂತಹ ಪ್ರಕರಣಗಳಲ್ಲಿ ಕಾನೂನು ಕ್ರಮ ಮುಂದುವರಿಯಲಿದೆ.

ತೆರಿಗೆದಾರರಿಗೆ ಮತ್ತೊಂದು ಪ್ರಮುಖ ಪರಿಹಾರವಾಗಿ ಕಡಿಮೆ ಮೊತ್ತದ ವಿವಾದಗಳನ್ನು ಕಡಿಮೆ ಮಾಡುವ ಕ್ರಮ ಕೈಗೊಳ್ಳಲಾಗಿದೆ. 10 ಸಾವಿರಕ್ಕಿಂತ ಕಡಿಮೆ ತೆರಿಗೆ ಬೇಡಿಕೆಗೆ ಶೋಕಾಸ್ ನೋಟಿಸ್ ನೀಡದಿರುವ ಮಿತಿಗೆ ಮಂಡಳಿ ಅನುಮೋದನೆ ನೀಡಿದೆ ಎಂದು ವರದಿಯಾಗಿದೆ. ಇದರಿಂದ ಸಣ್ಣ ವ್ಯಾಪಾರಿಗಳು ಮತ್ತು ಉದ್ಯಮಿಗಳ ಮೇಲಿನ ಅನುಸರಣೆ ಹೊರೆ ಕಡಿಮೆಯಾಗುವ ನಿರೀಕ್ಷೆಯಿದೆ.

ಸಣ್ಣ ಉದ್ಯಮಗಳು ಹಾಗೂ ವಾಣಿಜ್ಯ ಕ್ಷೇತ್ರಕ್ಕೆ ಜಿಎಸ್‌ಟಿ ನೋಂದಣಿ ಪ್ರಕ್ರಿಯೆ ಸರಳಗೊಳಿಸುವುದು, ತೆರಿಗೆ ಮರುಪಾವತಿ ವೇಗಗೊಳಿಸುವುದು, ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು ಸೇರಿದಂತೆ ಹಲವು ಕ್ರಮಗಳಿಗೆ ಒತ್ತು ನೀಡಲಾಗಿದೆ. ರಫ್ತುದಾರರು, ಸಣ್ಣ ಮಾರಾಟಗಾರರು ಮತ್ತು ಸರಕು ಸಾಗಣೆ ಕ್ಷೇತ್ರಕ್ಕೂ ಪರಿಹಾರ ಕಲ್ಪಿಸುವ ಉದ್ದೇಶ ಹೊಂದಲಾಗಿದೆ. ಈ ಸಭೆಯಲ್ಲಿ ಜಿಎಸ್‌ಟಿ ತೆರಿಗೆ ದರಗಳಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.

### 57ನೇ ಜಿಎಸ್‌ಟಿ ಮಂಡಳಿ ಸಭೆಯ ಪ್ರಮುಖ ನಿರ್ಣಯಗಳು

- ಜಿಎಸ್‌ಟಿ ಅಧಿಕಾರಿಗಳ ಬಂಧನ ಅಧಿಕಾರಕ್ಕೆ ಕಡಿವಾಣ ; ತೆರಿಗೆ ಅಧಿಕಾರಿಗಳ ಮನಬಂದಂತೆ ಬಂಧಿಸುವ ಅಧಿಕಾರವನ್ನು ರದ್ದು/ಸೀಮಿತಗೊಳಿಸಲು ನಿರ್ಧಾರ
- ಅಪರಾಧ ಪ್ರಕರಣ ದಾಖಲಿಸುವ ಮಿತಿ ?1 ಕೋಟಿಯಿಂದ ?5 ಕೋಟಿಗೆ ಏರಿಕೆ ; 5 ಕೋಟಿಗಿಂತ ಕಡಿಮೆ ಮೊತ್ತದ ತೆರಿಗೆ ಪ್ರಕರಣಗಳಲ್ಲಿ ಅಪರಾಧ ವಿಚಾರಣೆ ನಡೆಯುವ ಸಾಧ್ಯತೆ ಕಡಿಮೆಯಾಗಲಿದೆ
- 10 ಸಾವಿರಕ್ಕಿಂತ ಕಡಿಮೆ ತೆರಿಗೆ ಮೊತ್ತಕ್ಕೆ ಹೊಸ ಬೇಡಿಕೆ ನೋಟಿಸ್ ಇಲ್ಲ ; 10,000 ಅಥವಾ ಅದಕ್ಕಿಂತ ಕಡಿಮೆ ಮೊತ್ತದ ಹೊಸ ಜಿಎಸ್‌ಟಿ ಬೇಡಿಕೆ ನೋಟಿಸ್ ನೀಡದಿರಲು ನಿರ್ಧಾರ
- 10 ಸಾವಿರಕ್ಕಿಂತ ಕಡಿಮೆ ಮೊತ್ತದ ಬಾಕಿ ನೋಟಿಸ್‌ಗಳಿಗೂ ಪರಿಹಾರ ; ಈಗಾಗಲೇ ಜಾರಿಯಾಗಿರುವ ಇಂತಹ ನೋಟಿಸ್ ಹಿಂಪಡೆಯಲು ಶಿಫಾರಸು
- ಜಿಎಸ್‌ಟಿ ರೀಫಂಡ್‌ಗೆ ವೇಗ; ರೀಫಂಡ್ ಅರ್ಜಿಗಳನ್ನು ಸ್ವೀಕರಿಸಿ ಪ್ರಕ್ರಿಯೆಗೊಳಿಸುವ ಗಡುವನ್ನು 15 ದಿನಗಳಿಂದ 10 ದಿನಗಳಿಗೆ ಇಳಿಸಲು ನಿರ್ಧಾರ
- ಉದ್ಯೋಗಿಗಳ ವಿಮೆಗೆ ಇನ್ಪುಟ್ ತೆರಿಗೆ ಕ್ರೆಡಿಟ್; ಉದ್ಯೋಗಿಗಳಿಗಾಗಿ ಪಡೆಯುವ ವಿಮಾ ರಕ್ಷಣೆಗೆ ಪಾವತಿಸುವ ಜಿಎಸ್‌ಟಿಗೆ ಉದ್ಯೋಗದಾತರಿಗೆ ಇನ್ಪುಟ್ ತೆರಿಗೆ ಕ್ರೆಡಿಟ್ ನೀಡಲು ಅವಕಾಶ
- ಇ-ಕಾಮರ್ಸ್ ಸಣ್ಣ ವ್ಯಾಪಾರಿಗಳಿಗೆ ನೋಂದಣಿ ಸರಳ; ಇ-ಕಾಮರ್ಸ್ ವೇದಿಕೆಗಳ ಮೂಲಕ ಸರಕು/ಸೇವೆ ಮಾರಾಟ ಮಾಡುವ ಸಣ್ಣ ವ್ಯಾಪಾರಿಗಳ ಜಿಎಸ್‌ಟಿ ನೋಂದಣಿ ಪ್ರಕ್ರಿಯೆ ಸುಲಭಗೊಳಿಸಲು ನಿರ್ಧಾರ
- 9.5 ಲಕ್ಷ ಸಣ್ಣ ಮಾರಾಟಗಾರರಿಗೆ ಅನುಕೂಲ; ಪ್ರತಿ ರಾಜ್ಯದಲ್ಲೂ ಪ್ರತ್ಯೇಕ ಭೌತಿಕ ವ್ಯಾಪಾರ ಸ್ಥಳ ಹೊಂದುವ ಬದಲು ಪ್ಲಾಟ್‌ಫಾರ್ಮ್‌ನ ಗೋದಾಮನ್ನು ವ್ಯಾಪಾರದ ಸ್ಥಳವಾಗಿ ನೋಂದಾಯಿಸಲು ಅವಕಾಶ ನೀಡಲಾಗಿದೆ
- ಡಿಲಿವರಿ ರೈಡರ್ ಸೇವೆಗಳಿಗೆ ತೆರಿಗೆ ಇಳಿಕೆ; ನೋಂದಣಿಯಾಗದ ರೈಡರ್ ಡೆಲಿವರಿ ಸೇವೆಗಳ ಜಿಎಸ್‌ಟಿ ದರವನ್ನು 18%ರಿಂದ 5%ಕ್ಕೆ ಇಳಿಸಲಾಗಿದೆ
- ಸಿಜಿಎಸ್‌ಟಿ ವ್ಯವಸ್ಥೆಯಲ್ಲಿ ಫೇಸ್ಲೆಸ್ ತೆರಿಗೆ ಆಡಳಿತ ಜಾರಿಗೆ ತರಲು ಸರ್ಕಾರ ಮುಂದಾಗಿದೆ.
- ಐಟಿಸಿ ಕುರಿತು ಸಮಿತಿ ; ಪೂರೈಕೆದಾರ ತೆರಿಗೆ ಪಾವತಿಸದಿದ್ದರೂ ಸರಿಯಾದ ಇನ್ವಾಯ್ಸ್ ಹೊಂದಿರುವ ಪ್ರಾಮಾಣಿಕ ಖರೀದಿದಾರರಿಗೆ ಇನ್ಪುಟ್ ತೆರಿಗೆ ಕ್ರೆಡಿಟ್ ರಕ್ಷಣೆ ನೀಡುವ ವಿಚಾರವನ್ನು ಸಮಿತಿಗೆ ವಹಿಸಲಾಗಿದೆ.

## ಔಷಧ ಕಂಪನಿಗಳ ಉಚಿತ ಕೊಡುಗೆಗೆ ಕಡಿವಾಣ ತಜ್ಞರ ಸಮಿತಿ ರಚನೆಗೆ ಸುಪ್ರೀಂಕೋರ್ಟ್ ಆದೇಶ

**ನವದೆಹಲಿ,ಅ.8:** ವೈದ್ಯರು ನಿರ್ದಿಷ್ಟ ಔಷಧಗಳನ್ನು ಶಿಫಾರಸು ಮಾಡುವಂತೆ ಪ್ರಭಾವ ಬೀರುವ ಉದ್ದೇಶದಿಂದ ಔಷಧ ಕಂಪನಿಗಳು ಉಚಿತ ಉಡುಗೊರೆ, ವಿದೇಶ ಪ್ರವಾಸ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನೀಡುತ್ತಿರುವ ಆರೋಪಗಳ ಕುರಿತು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿದೆ. ಈ ಕುರಿತು ಸೂಕ್ತ ಕಾನೂನುಬದ್ಧ ನಿಯಂತ್ರಣ ವ್ಯವಸ್ಥೆ ರೂಪಿಸುವ ಅಗತ್ಯ ಪರಿಶೀಲಿಸಲು ಕೇಂದ್ರ ಸರ್ಕಾರಕ್ಕೆ ತಜ್ಞರ ಸಮಿತಿ ರಚಿಸುವಂತೆ ನ್ಯಾಯಾಲಯ ಸೂಚಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಈ ನಿರ್ದೇಶನ ನೀಡಿದೆ. ಔಷಧ ಕಂಪನಿಗಳ ಮಾರುಕಟ್ಟೆ ಚಟುವಟಿಕೆಗಳನ್ನು ನಿಯಂತ್ರಿಸಲು ಕಾನೂನುಬದ್ಧ ವ್ಯವಸ್ಥೆ ಅಗತ್ಯವಿದೆಯೇ, ಅಗತ್ಯವಿದ್ದರೆ ಯಾವ ರೀತಿಯ ಶಾಸನಾತ್ಮಕ ಚೌಕಟ್ಟು ರೂಪಿಸಬೇಕು ಎಂಬುದನ್ನು ಸಮಿತಿ ಪರಿಶೀಲಿಸಲಿದೆ. ಸಮಿತಿಯ ವರದಿ ಹಾಗೂ ಅದರ ಆಧಾರದ ಮೇಲೆ ಕೇಂದ್ರ ಸರ್ಕಾರ ಕೈಗೊಳ್ಳುವ ಕ್ರಮವನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಬೇಕಿದೆ. ಮುಂದಿನ ವಿಚಾರಣೆಯನ್ನು 2027ರ ಜನವರಿ 29ರಂದು ನಡೆಸಲು ನ್ಯಾಯಾಲಯ ನಿಗದಿಪಡಿಸಿದೆ.



ಫೆಡರೇಷನ್ ಆಫ್ ಮೆಡಿಕಲ್ ಆ್ಯಂಡ್ ಸೇಲ್ಸ್ ರೆಪ್ರೆಸೆಂಟೇಟಿವ್ಸ್ ಅಸೋಸಿಯೇಷನ್ಸ್ ಆಫ್ ಇಂಡಿಯಾ (ಎಫ್‌ಎಂಆರ್‌ಎಐ) ಸಲ್ಲಿಸಿರುವ ಅರ್ಜಿಯಲ್ಲಿ, ಕೆಲವು ಔಷಧ ಕಂಪನಿಗಳು ವೈದ್ಯರನ್ನು ಪ್ರಭಾವಿಸಲು ದುಬಾರಿ ಉಡುಗೊರೆಗಳು, ವಿದೇಶ ಪ್ರವಾಸಗಳು ಮತ್ತು ಇತರ ಫ್ರೀಬೀಸ್ ನೀಡುತ್ತಿವೆ ಎಂದು ಆರೋಪಿಸಲಾಗಿದೆ. ಇದರಿಂದ ದುಬಾರಿ ಬ್ರ್ಯಾಂಡೆಡ್ ಔಷಧಗಳು ಅಥವಾ ಅಗತ್ಯವಿಲ್ಲದ ಔಷಧ ಸಂಯೋಜನೆಗಳನ್ನು ರೋಗಿಗಳಿಗೆ ಶಿಫಾರಸು ಮಾಡುವ ಸಾಧ್ಯತೆ ಇದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ. ಪ್ರಸ್ತುತ 2024ರ ಏಕರೂಪ ಔಷಧ ಮಾರುಕಟ್ಟೆ ನೀತಿಸಂಹಿತೆ ಜಾರಿಯಲ್ಲಿದೆ. ಈ ಸಂಹಿತೆಯಲ್ಲಿ ವೈದ್ಯರಿಗೆ ಉಡುಗೊರೆ, ಔಷಧ ಮಾದರಿ, ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಾಯೋಜಕತ್ವ ಸೇರಿದಂತೆ ಹಲವು ಅಂಶಗಳ ಬಗ್ಗೆ ನಿಯಮಗಳಿವೆ. ಆದರೆ ಔಷಧ ಕಂಪನಿಗಳ ಅನೈತಿಕ ಚಟುವಟಿಕೆಗಳನ್ನು ನೇರವಾಗಿ ನಿಯಂತ್ರಿಸಲು ಸ್ಪಷ್ಟವಾದ ಕಾನೂನುಬದ್ಧ ವ್ಯವಸ್ಥೆಯ ಕೊರತೆ ಇದೆ ಎಂದು ಕೇಂದ್ರ ಸರ್ಕಾರವೇ ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ತಿಳಿಸಿದೆ.

ಕೇಂದ್ರದ ಪ್ರಕಾರ, ವೈದ್ಯರು ಔಷಧ ಕಂಪನಿಗಳಿಂದ ಉಡುಗೊರೆ, ಪ್ರವಾಸ, ಆತಿಥ್ಯ ಅಥವಾ ಹಣಕಾಸಿನ ಲಾಭ ಪಡೆಯುವುದಕ್ಕೆ ಈಗಾಗಲೇ ರಾಷ್ಟ್ರೀಯ ವೈದ್ಯಕೀಯ ಆಯೋಗ ಕಾಯ್ದೆ, 2019 ಹಾಗೂ ವೃತ್ತಿಪರ ನಡವಳಿಕೆ ನಿಯಮಗಳು ಅನ್ವಯಿಸುತ್ತವೆ. ಉಲ್ಲಂಘನೆಯಾದರೆ ವೈದ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಅವಕಾಶವಿದೆ. ಆದರೆ ಕಂಪನಿಗಳ ಕಡೆಯಿಂದ ನಡೆಯುವ ಇಂತಹ ಚಟುವಟಿಕೆಗಳನ್ನು ನೇರವಾಗಿ ನಿಯಂತ್ರಿಸುವಲ್ಲಿ ನಿಯಂತ್ರಣದ ಕೊರತೆ ಇರುವುದನ್ನು ಸರ್ಕಾರ ಒಪ್ಪಿಕೊಂಡಿದೆ.

ಈ ಹಿನ್ನೆಲೆಯಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ ಪಾರದರ್ಶಕತೆ ಹೆಚ್ಚಿಸುವುದು, ಅನೈತಿಕ ಮಾರುಕಟ್ಟೆ ತಂತ್ರಗಳಿಗೆ ಕಡಿವಾಣ ಹಾಕುವುದು ಹಾಗೂ ರೋಗಿಗಳ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಹೊಸ ಕಾನೂನುಬದ್ಧ ವ್ಯವಸ್ಥೆ ಅಗತ್ಯವಿದೆಯೇ ಎಂಬುದನ್ನು ತಜ್ಞರ ಸಮಿತಿ ಪರಿಶೀಲಿಸಲಿದೆ. ಸದ್ಯಕ್ಕೆ UCPMP-2024 ಮುಂದುವರಿಯಲಿದೆ.

## ಉ.ಪ್ರ.ಚುನಾವಣೆ: ಅಗತ್ಯ ಸೇವೆಗಳ ಸಿಬ್ಬಂದಿಗೆ ಅಂಚೆ ಮತದಾನ ಸೌಲಭ್ಯ ಕಲ್ಪಿಸಲು ಇಸಿಐ ಪ್ರಕ್ರಿಯೆ ಆರಂಭ

**ಲಖನೌ,ಅ.8:** ಮುಂಬರುವ 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಮತದಾನದ ದಿನದಂದು ಕರ್ತವ್ಯದಲ್ಲಿರುವ ಕಾರಣ ತಮ್ಮ ನಿಗದಿತ ಮತಗಟ್ಟೆಗಳಲ್ಲಿ ಮತ ಚಲಾಯಿಸಲು ಸಾಧ್ಯವಾಗದ ಅಗತ್ಯ ಸೇವೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಂಚೆ ಮತದಾನದ ಸೌಲಭ್ಯವನ್ನು ಒದಗಿಸುವ ಪ್ರಕ್ರಿಯೆಯನ್ನು ಭಾರತೀಯ ಚುನಾವಣಾ ಆಯೋಗ (ಇಸಿಐ) ಪ್ರಾರಂಭಿಸಿದೆ.



ಈ ಕುರಿತು ಗುರುವಾರ ಇಲ್ಲಿ ಮುಖ್ಯ ಚುನಾವಣಾ ಅಧಿಕಾರಿ ನವದೀಪ್ ರಿನ್ವಾ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಯಿತು. ನಿಗದಿತ ನಿಯಮಗಳ ಪ್ರಕಾರ, ಇಸಿಐ ಅಧಿಸೂಚಿಸಿರುವ ಅಗತ್ಯ ಸೇವೆಗಳಲ್ಲಿ ತೊಡಗಿರುವ ಸಿಬ್ಬಂದಿ ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಅರ್ಹರಾಗಿದ್ದಾರೆ ಎಂದು ರಿನ್ವಾ ತಿಳಿಸಿದರು. ತಮ್ಮ ಇಲಾಖೆಗಳ ವ್ಯಾಪ್ತಿಗೆ ಬರುವ ಅಗತ್ಯ ಸೇವೆಗಳ ವಿವರಗಳು ಹಾಗೂ ಅಂತಹ ಸೇವೆಗಳಲ್ಲಿ ತೊಡಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಗತ್ಯ ಮಾಹಿತಿಯನ್ನು ಒದಗಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿದೆ. ಚುನಾವಣಾ ಕರ್ತವ್ಯದಲ್ಲಿ ನಿಯೋಜಿಸಲಾದ ಸಿಬ್ಬಂದಿಗೆ ನಿಯಮಗಳ ಪ್ರಕಾರ 'ಚುನಾವಣಾ ಕರ್ತವ್ಯ ಪ್ರಮಾಣಪತ್ರ' ಅಥವಾ 'ಅಂಚೆ ಮತಪತ್ರ'ಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಎಂದು ರಿನ್ವಾ ಸ್ಪಷ್ಟಪಡಿಸಿದರು. ಅಗತ್ಯ ಸೇವೆಗಳಲ್ಲಿ ತೊಡಗಿರುವ ಸಿಬ್ಬಂದಿಗೆ ಪ್ರತ್ಯೇಕ ವ್ಯವಸ್ಥೆಯಡಿ ಅಂಚೆ ಮತಪತ್ರಗಳನ್ನು ಒದಗಿಸಲಾಗುತ್ತದೆ. 2027ರ ವಿಧಾನಸಭಾ ಚುನಾವಣೆಗೆ ಮುನ್ನ ಅರ್ಹ ಸಿಬ್ಬಂದಿಗೆ ಅಂಚೆ ಮತದಾನ ಸೌಲಭ್ಯವನ್ನು ವಿಸ್ತರಿಸುವ ಪ್ರಕ್ರಿಯೆಯನ್ನು ಸುಗಮವಾಗಿ ಪೂರ್ಣಗೊಳಿಸಲು, ಸಂಬಂಧಪಟ್ಟ ಇಲಾಖೆಗಳು ಸೂಕ್ತ ಮಾಹಿತಿಯನ್ನು ಸಕಾಲದಲ್ಲಿ ಒದಗಿಸಬೇಕು ಎಂದು ರಿನ್ವಾ ಸೂಚಿಸಿದರು.

ಅಗತ್ಯ ಸೇವೆಗಳಲ್ಲಿ ತೊಡಗಿರುವ ತಮ್ಮ ಅಧಿಕಾರಿಗಳು ಅಥವಾ ಉದ್ಯೋಗಿಗಳಿಗೆ ಅಂಚೆ ಮತದಾನ ಸೌಲಭ್ಯದ ಅಗತ್ಯವಿಲ್ಲದ ಇಲಾಖೆಗಳು, ಆ ವಿಷಯವನ್ನು ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು ಎಂದು ಅವರು ಹೇಳಿದರು. ಸಭೆಯಲ್ಲಿ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವೈದ್ಯಕೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅಂಚೆ ಇಲಾಖೆ, ಇಂಧನ ಇಲಾಖೆ, ಪೊಲೀಸ್, ನಾಗರಿಕ ವಿಮಾನಯಾನ, ರೈಲ್ವೆ, ಮೆಟ್ರೋ ರೈಲು, ದೂರದರ್ಶನ, ಆಕಾಶವಾಣಿ ಮತ್ತು ಬಿಎಸ್‌ಎನ್‌ಎಲ್‌ನ ಅಧಿಕಾರಿಗಳು ಭಾಗವಹಿಸಿದ್ದರು.

## ಪೋಕ್ಸೋ ಪ್ರಕರಣದಲ್ಲಿ ಸಂತ್ರಸ್ತರ ವಾದ ಆಲಿಸದೆ ನಿರೀಕ್ಷಣಾ ಜಾಮೀನು ನೀಡುವಂತಿಲ್ಲ: ಅಲಹಾಬಾದ್ ಹೈಕೋರ್ಟ್

**ಪ್ರಯಾಗ್ರಾಜ್,ಅ.8:** ಪೋಕ್ಸೋ ಕಾಯ್ದೆಯಡಿ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡುವ ಮೊದಲು ಸಂತ್ರಸ್ತೆ ಅಥವಾ ದೂರುದಾರರಿಗೆ ಕಡ್ಡಾಯವಾಗಿ ನೋಟಿಸ್ ನೀಡಿ, ಅವರ ವಾದ ಆಲಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಸಂತ್ರಸ್ತರ ವಾದ ಆಲಿಸದೆ ನೀಡಿದ ನಿರೀಕ್ಷಣಾ ಜಾಮೀನು ಆದೇಶವು ಆರಂಭದಿಂದಲೇ ಕಾನೂನುಬದ್ಧವಾಗಿ ಅಮಾನ್ಯವಾಗಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.




ನ್ಯಾಯಮೂರ್ತಿ ವಿವೇಕ್ ಕುಮಾರ್ ಸಿಂಗ್ ಅವರ ಪೀಠವು ವೀರ್ ಸಿಂಗ್ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು ಪ್ರಕರಣದ ವಿಚಾರಣೆ ನಡೆಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಪೋಕ್ಸೋ ಕಾಯ್ದೆ ಹಾಗೂ ಪೋಕ್ಸೋ ನಿಯಮಗಳು-2020ರ ಅಡಿಯಲ್ಲಿ ಸಂತ್ರಸ್ತೆ ಅಥವಾ ದೂರುದಾರರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸುವುದು ಕೇವಲ ಪ್ರಕ್ರಿಯೆಯಲ್ಲ, ಕಡ್ಡಾಯ ಕಾನೂನುಬದ್ಧ ನಿಯಮ ಎಂದು ಪೀಠ ಹೇಳಿದೆ. 2023ರ ಫೆಬ್ರವರಿಯಲ್ಲಿ ದಾಖಲಾಗಿದ್ದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳಿಗೆ ವಿಶೇಷ ಪೋಕ್ಸೋ ನ್ಯಾಯಾಲಯ 2026ರ ಜನವರಿ 17ರಂದು ನಿರೀಕ್ಷಣಾ ಜಾಮೀನು ನೀಡಿತ್ತು. ಆದರೆ ಜಾಮೀನು ನೀಡುವ ಮೊದಲು ಸಂತ್ರಸ್ತೆ ಅಥವಾ ದೂರುದಾರರಿಗೆ ಯಾವುದೇ ನೋಟಿಸ್ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ದೂರುದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಜಾಮೀನು ರದ್ದುಪಡಿಸಲು ಆರೋಪಿಗಳು ಜಾಮೀನಿನ ನಂತರ ಸಾಕ್ಷ್ಯ ನಾಶಪಡಿಸುವುದು, ಸಾಕ್ಷಿಗಳಿಗೆ ಬೆದರಿಕೆ ಹಾಕುವುದು ಅಥವಾ ಜಾಮೀನಿನ ಸೌಲಭ್ಯ ದುರುಪಯೋಗಪಡಿಸಿಕೊಂಡಿರುವಂತಹ ಕಾರಣಗಳು ಇರಬೇಕು ಎಂದು ವಾದಿಸಿದ್ದರು. ಆದರೆ ಹೈಕೋರ್ಟ್ ಈ ವಾದವನ್ನು ತಿರಸ್ಕರಿಸಿತು. ಜಾಮೀನು ರದ್ದುಪಡಿಸುವುದು ಮತ್ತು ಕಡ್ಡಾಯ ಕಾನೂನು ಪ್ರಕ್ರಿಯೆ ಉಲ್ಲಂಘನೆಯ ಹಿನ್ನೆಲೆಯಲ್ಲಿ ಜಾಮೀನು ಆದೇಶವನ್ನು ರದ್ದುಗೊಳಿಸುವುದು ಎರಡೂ ವಿಭಿನ್ನ ವಿಚಾರಗಳು ಎಂದು ನ್ಯಾಯಾಲಯ ತಿಳಿಸಿತು. ಕಡ್ಡಾಯ ಕಾನೂನು ನಿಯಮವನ್ನು ಉಲ್ಲಂಘಿಸಿ ಹಾಗೂ ಆಲಿಸುವ ಹಕ್ಕು ಎಂಬ ನೈಸರ್ಗಿಕ ನ್ಯಾಯದ ತತ್ವಕ್ಕೆ ವಿರುದ್ಧವಾಗಿ ನಿರೀಕ್ಷಣಾ ಜಾಮೀನು ನೀಡಿದ್ದರೆ, ಆರೋಪಿಯು ನಂತರ ಜಾಮೀನಿನ ಸೌಲಭ್ಯವನ್ನು ದುರುಪಯೋಗಪಡಿಸಿಕೊಂಡಿದ್ದಾನೆಯೇ ಇಲ್ಲವೇ ಎಂಬುದನ್ನು ಪರಿಗಣಿಸದೆ ಆ ಆದೇಶವನ್ನು ರದ್ದುಪಡಿಸಬಹುದು ಎಂದು ಪೀಠ ಹೇಳಿದೆ. ಈ ಹಿನ್ನೆಲೆಯಲ್ಲಿ ವಿಶೇಷ ಪೋಕ್ಸೋ ನ್ಯಾಯಾಲಯ ನೀಡಿದ್ದ ಜಾಮೀನು ಆದೇಶವನ್ನು ಅಲಹಾಬಾದ್ ಹೈಕೋರ್ಟ್ ರದ್ದುಪಡಿಸಿ, ಸಂತ್ರಸ್ತೆ ಮತ್ತು ರಾಜ್ಯಕ್ಕೆ ಸೂಕ್ತ ನೋಟಿಸ್ ನೀಡಿ, ಆಕ್ಷೇಪಣೆ ಸಲ್ಲಿಸಲು ಸಮಂಜಸವಾದ ಅವಕಾಶ ಕಲ್ಪಿಸಿದ ಬಳಿಕ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೊಸದಾಗಿ ವಿಚಾರಣೆ ನಡೆಸುವಂತೆ ಸೂಚಿಸಿದೆ. ಅದೇ ವೇಳೆ, ಹೊಸ ವಿಚಾರಣೆ ಪೂರ್ಣಗೊಳ್ಳುವವರೆಗೆ ಆರೋಪಿಗಳಿಗೆ ಆರು ವಾರಗಳ ಕಾಲ ಬಲವಂತದ ಕ್ರಮದಿಂದ ಮಧ್ಯಂತರ ರಕ್ಷಣೆ ನೀಡಿದೆ. ಈ ತೀರ್ಪನ್ನು ಉತ್ತರ ಪ್ರದೇಶದ ಎಲ್ಲ ವಿಶೇಷ ಪೋಕ್ಸೋ ನ್ಯಾಯಾಲಯಗಳಿಗೆ ಹಂಚುವಂತೆ ಹೈಕೋರ್ಟ್‌ಗೆ ರಿಜಿಸ್ಟ್ರಾರ್ ಜನರಲ್‌ಗೆ ನಿರ್ದೇಶನ ನೀಡಲಾಗಿದೆ.

ಸುಪ್ರೀಂಕೋರ್ಟ್‌ನ ಜಗಜೀತ್ ಸಿಂಗ್ ವಿರುದ್ಧ ಆಶಿಶ್ ಮಿಶ್ರಾ ತೀರ್ಪನ್ನು ಉಲ್ಲೇಖಿಸಿದ ಹೈಕೋರ್ಟ್, ತನಿಖೆಯ ಹಂತದಿಂದ ವಿಚಾರಣೆ ಪೂರ್ಣಗೊಳ್ಳುವವರೆಗೆ, ಜಾಮೀನು ವಿಚಾರಣೆಯೂ ಸೇರಿದಂತೆ ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಸಂತ್ರಸ್ತರಿಗೆ ಭಾಗವಹಿಸುವ ಕಾನೂನುಬದ್ಧ ಹಕ್ಕಿದೆ ಎಂಬುದನ್ನು ಪುನರುಚ್ಚರಿಸಿದೆ.

## ಹಿಂದೂ ನಾಯಕನಿಗೆ ಕೇರಳ ಮುಸ್ಲಿಂ ಲೀಗ್ ಉಪಾಧ್ಯಕ್ಷ ಪಟ್ಟ

**ತಿರುವನಂತಪುರ, ಅ. 8:** ಕೇರಳದ ಪ್ರಮುಖ ರಾಜಕೀಯ ಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ತನ್ನ ಸಾಂಸ್ಥಿಕ ಪುನಾರಚನೆಯಲ್ಲಿ ಅತ್ಯಂತ ಮಹತ್ವದ ಮತ್ತು ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದೆ. ತನ್ನ 70ಕ್ಕೂ ಹೆಚ್ಚು ವರ್ಷಗಳ ಇತಿಹಾಸದಲ್ಲೇ ಮೊದಲ ಬಾರಿಗೆ, ಐಯುಎಂಎಲ್ ಉನ್ನತ ಸಾಂಸ್ಥಿಕ ಹುದ್ದೆಯಾದ ರಾಜ್ಯ ಉಪಾಧ್ಯಕ್ಷರನ್ನಾಗಿ ಹಿಂದೂ ನಾಯಕ ಸಿ. ಶ್ಯಾಮ್ (61) ಅವರನ್ನು ಆಯ್ಕೆ ಮಾಡಲಾಗಿದೆ. ಆಲಪ್ಪುಳದ ಪ್ರಭಾವಿ ನಾಯರ್ ಕುಟುಂಬಕ್ಕೆ ಸೇರಿದ ಸಿ. ಶ್ಯಾಮ್ ಅವರು (ಕೇರಳ ವಿಧಾನಸಭೆಯ ಪ್ರಥಮ ಸ್ಪೀಕರ್ ಆರ್. ಶಂಕರನಾರಾಯಣನ್ ತಂಬಿ ಅವರ ಸೋದರಳಿಯ) ಹಿಂದೆ ಎಡಪಂಥೀಯ ಯುವಜನ ಸಂಘಟನೆ ಡಿವೈಎಫ್‌ಐನಲ್ಲಿ ಸಕ್ರಿಯರಾಗಿದ್ದರು.

2010ರಲ್ಲಿ ಸಿಪಿಐಎಂ ಒಡನಾಟ ತೊರೆದು ಮುಸ್ಲಿಂ ಲೀಗ್ ಸೇರಿದ ಅವರು, ಕಳೆದ 15 ವರ್ಷಗಳಿಂದ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಅವರಿಗೆ ಇಡುಕ್ಕಿ ಮತ್ತು ಪತ್ತನಂತಿಟ್ಟ ಜಿಲ್ಲೆಗಳ ಉಸ್ತುವಾರಿಯನ್ನೂ ವಹಿಸಲಾಗಿದೆ.

ಮುಸ್ಲಿಂ ಲೀಗ್ ಮೇಲೆ ಎಡಪಂಥೀಯ ಪಕ್ಷಗಳು ನಿರಂತರವಾಗಿ ಹೊರಿಸುತ್ತಿದ್ದ ಕೋಮುವಾದಿ ಅಥವಾ ಒಂದು ಸಮುದಾಯಕ್ಕೆ ಸೀಮಿತ ಪಕ್ಷ ಎಂಬ ಆರೋಪವನ್ನು ಮುರಿಯಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬುದು ಸ್ಪಷ್ಟವಾಗುತ್ತಿದೆ. ಶಾಸಕರು ಹಾಗೂ ಸಚಿವರುಗಳನ್ನು ಪಕ್ಷದ ಸಾಂಸ್ಥಿಕ ಹುದ್ದೆಗಳಿಂದ ಮುಕ್ತಗೊಳಿಸಿ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಈ ಪುನಾರಚನೆ ನಡೆದಿದೆ. ಸಿ. ಶ್ಯಾಮ್ ಅವರ ಜೊತೆಗೆ ದಲಿತ ನಾಯಕ ಯು.ಸಿ. ರಾಮನ್ ಅವರು ಕೂಡ ಪಕ್ಷದ ಕಾರ್ಯದರ್ಶಿಯಾಗಿ ಮುಂದುವರಿಯಲಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಐಯುಎಂಎಲ್ ತನ್ನ ಸಾಂಪ್ರದಾಯಿಕ ನಿಲುವಿನಿಂದ ಹೊರಬಂದು ಮಹಿಳಾ ನಾಯಕಿಯರಿಗೂ ರಾಜಕೀಯ ಪ್ರಾಶಸ್ತ್ಯ ನೀಡಲು ಹೆಜ್ಜೆ ಇಡುತ್ತಿದೆ. ಇತ್ತೀಚೆಗೆ ನಡೆದ ವಿಧಾನಸಭಾ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮುಸ್ಲಿಂ ಲೀಗ್ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡಿ ಟಿಕೆಟ್ ನೀಡಿತ್ತು.ವಿದ್ಯಾರ್ಥಿ ಮತ್ತು ಯುವಜನ ರಂಗದಲ್ಲಿ ಮುಂಚೂಣಿಯಲ್ಲಿದ್ದ ಫಾತಿಮಾ ತಹಿಲಿಯಾ ಅವರಂತಹ ಯುವ ನಾಯಕಿಯರು ಶಾಸಕಿಯಾಗಿ ಹಾಗೂ ರಾಜಕೀಯ ರಂಗದಲ್ಲಿ ಮುನ್ನಲೆಗೆ ಬಂದರು. ಇದು ಪಕ್ಷದೊಳಗೆ ಮಹಿಳಾ ಧ್ವನಿಗೆ ಆದ್ಯತೆ ಸಿಗುತ್ತಿದೆ ಎಂಬ ಚರ್ಚೆಗೆ ಗ್ರಾಸವಾಯಿತು. ಈ ನೂತನ ತಂತ್ರಗಾರಿಕೆಯು ಯುಡಿಎಫ್ ಮೈತ್ರಿಕೂಟಕ್ಕೆ ಹೆಚ್ಚಿನ ಬಲ ತರಲಿದ್ದು, ಮುಸ್ಲಿಂ ಲೀಗ್ ಸರ್ವ ಜನ ಸಮ್ಮತ ಜಾತ್ಯತೀತ ಪಕ್ಷವಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂಬ ಅಭಿಪ್ರಾಯವಿದೆ.

## ಆರು ತಿಂಗಳಲ್ಲಿ ಕುಂದಿದ ಗ್ರಾಮೀಣ ಗ್ರಾಹಕರ ವಿಶ್ವಾಸ: ಆರ್‌ಬಿಐ ಸಮೀಕ್ಷೆ

**ನವದೆಹಲಿ, ಅ.8:** ಭಾರತದ ಗ್ರಾಮೀಣ ಗ್ರಾಹಕರ ವಿಶ್ವಾಸವು 2026ರ ವರ್ಷದ ಉದ್ದಕ್ಕೂ ನಿರಂತರವಾಗಿ ಕುಸಿಯುತ್ತಲೇ ಬಂದಿದೆ. ದೇಶದ ಆರ್ಥಿಕತೆ, ಉದ್ಯೋಗಾವಕಾಶಗಳು ಮತ್ತು ತಮ್ಮ ಸ್ವಂತ ಆದಾಯದ ಬಗ್ಗೆ ಗ್ರಾಮೀಣ ಕುಟುಂಬಗಳು ತೀವ್ರ ನಿರಾಶಾವಾದ ಹೊಂದಿದ್ದರೂ, ಮುಂಬರುವ ದಿನಗಳಲ್ಲಿ ತಮ್ಮ ಖರ್ಚು ವೆಚ್ಚಗಳು ಹೆಚ್ಚಾಗಲಿವೆ ಎಂಬ ನಿರೀಕ್ಷೆಯನ್ನು ಅವರು ಮುಂದುವರಿಸಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ) ಬಿಡುಗಡೆ ಮಾಡಿರುವ ಸೆಪ್ಟೆಂಬರ್ 2026ರ ಗ್ರಾಮೀಣ ಗ್ರಾಹಕರ ವಿಶ್ವಾಸಾರ್ಹತೆ ಸಮೀಕ್ಷೆ?ಯು, ಗ್ರಾಮೀಣ ಮತ್ತು ಅರೆ-ನಗರ ಪ್ರದೇಶದ ಕುಟುಂಬಗಳು ಪ್ರಸ್ತುತ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಹೇಗೆ ನೋಡುತ್ತಿದ್ದಾರೆ ಹಾಗೂ ಮುಂದಿನ ಒಂದು ವರ್ಷದ ಅವಧಿಯಲ್ಲಿ ಏನಾಗಬಹುದು ಎಂಬ ಅವರ ಆಶಯಗಳ ನಡುವಿನ ಕಂದಕವು ಹೇಗೆ ವಿಸ್ತಾರವಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಎತ್ತಿತೋರಿಸಿದೆ. ಆರ್ಥಿಕತೆ, ಉದ್ಯೋಗ, ಬೆಲೆಗಳು, ಆದಾಯ ಮತ್ತು ಖರ್ಚಿನ ಬಗೆಗಿನ ಜನರ ಗ್ರಹಿಕೆಗಳನ್ನು ಕಳೆದ ವರ್ಷದ ಅಂಕಿ-ಅಂಶಗಳೊಂದಿಗೆ ಹೋಲಿಸಿ ಅಳೆಯುವ ಆರ್.ಬಿ.ಐ ನ ಪ್ರಸ್ತುತ ಪರಿಸ್ಥಿತಿ ಸೂಚ್ಯಂಕ ಕುಸಿತ ಕಂಡಿದೆ. ಈ ಸೂಚ್ಯಂಕವು ಜುಲೈ ತಿಂಗಳಲ್ಲಿ 91.7 ರಷ್ಟಿತ್ತು, ಆದರೆ ಸೆಪ್ಟೆಂಬರ್ ತಿಂಗಳ ವೇಳೆಗೆ ಇದು 90.6 ಕ್ಕೆ ಇಳಿಕೆಯಾಗಿದೆ. ಜನವರಿ ತಿಂಗಳಲ್ಲಿ 100.5 ರಷ್ಟಿದ್ದ ಈ ಮಹತ್ವದ ಸೂಚ್ಯಂಕವು ಅಲ್ಲಿಂದ ಸತತವಾಗಿ ಆರನೇ ಬಾರಿ ಕುಸಿತ ಕಂಡಿರುವುದು ಗ್ರಾಮೀಣ ಆರ್ಥಿಕತೆಯ ಆತಂಕಕಾರಿ ಬೆಳವಣಿಗೆಯಾಗಿದೆ. ಅಷ್ಟೇ ಅಲ್ಲದೆ, ಕಳೆದ ವರ್ಷದ ಅಂದರೆ 2025ರ ಸೆಪ್ಟೆಂಬರ್‌ನಲ್ಲಿ ಈ ಸೂಚ್ಯಂಕವು 100.9 ರಷ್ಟಿತ್ತು. ಆರ್ಥಿಕ ಸ್ಥಿತಿಯ ತೀವ್ರ ಹದಗೆಡುವಿಕೆಯನ್ನು ಇದು ಬಹಳ ಸ್ಪಷ್ಟವಾಗಿ ಗುರುತಿಸುವಂತೆ ಮಾಡಿದೆ. ಈ ಆರ್ಥಿಕ ಕುಸಿತವು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗಿರದೆ ಎಲ್ಲಾ ವಿಭಾಗಗಳಲ್ಲೂ ವ್ಯಾಪಕವಾಗಿ ಹರಡಿದೆ. ಸಮೀಕ್ಷೆಯ ಪ್ರಕಾರ, ಸಾಮಾನ್ಯ ಆರ್ಥಿಕ ಪರಿಸ್ಥಿತಿಯ ಮೇಲಿನ ಜನರ ನಿವ್ವಳ ಪ್ರತಿಕ್ರಿಯೆಯು ಜುಲೈ ತಿಂಗಳಲ್ಲಿ ಮೈನಸ್ 11.9 ರಷ್ಟಿತ್ತು, ಅದು ಸೆಪ್ಟೆಂಬರ್‌ನಲ್ಲಿ ಮೈನಸ್ 14.1 ಕ್ಕೆ ಇಳಿಕೆಯಾಗಿದೆ. ಉದ್ಯೋಗದ ಮುಂಭಾಗದಲ್ಲಿ ನೋಡಿದರೂ ಉದ್ಯೋಗಾವಕಾಶಗಳ ಬಗೆಗಿನ ಜನರ ನಿವ್ವಳ ಪ್ರತಿಕ್ರಿಯೆಯು ಮೈನಸ್ 8.0 ಯಿಂದ ಮೈನಸ್ 10.5 ಕ್ಕೆ ಹದಗೆಟ್ಟಿದೆ. ಅದೇ ರೀತಿ, ಆದಾಯದ ಮಾಪನವು ಮೈನಸ್ 8.7 ರಿಂದ ಮೈನಸ್ 9.9 ಕ್ಕೆ ಜಾರಿದೆ. ಆರ್ಥಿಕ ಪರಿಸ್ಥಿತಿಯು ಸುಧಾರಿಸಿದೆ ಎಂದು ಭಾವಿಸುವವರಿಗಿಂತ, ಪರಿಸ್ಥಿತಿ ಹದಗೆಟ್ಟಿದೆ ಎಂದು ಭಾವಿಸುವವರ ಪಾಲು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂಬುದನ್ನು ದತ್ತಾಂಶಗಳು ದೃಢಪಡಿಸುತ್ತವೆ. ಆದಾಯದ ದತ್ತಾಂಶವು ಗ್ರಾಮೀಣ ಜನರ ಆರ್ಥಿಕ ಸಂಕಷ್ಟವನ್ನು ಮತ್ತಷ್ಟು ಆಳವಾಗಿ ಅನಾವರಣಗೊಳಿಸುತ್ತದೆ. ಸೆಪ್ಟೆಂಬರ್ ತಿಂಗಳಲ್ಲಿ, ಕೇವಲ ಶೇ 20.6 ರಷ್ಟು ಮಂದಿ ಮಾತ್ರ ಒಂದು ವರ್ಷದ ಹಿಂದಿನ ಅವಧಿಗೆ ಹೋಲಿಸಿದರೆ ತಮ್ಮ ಆದಾಯವು ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಆದರೆ, ಶೇ 30.5 ರಷ್ಟು ಜನರು ತಮ್ಮ ಆದಾಯವು ಕಡಿಮೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಒಂದು ವರ್ಷದ ಹಿಂದೆ, ಅಂದರೆ ಹಿಂದಿನ ವರ್ಷ ಇದೇ ಅವಧಿಯಲ್ಲಿ, ಆದಾಯ ಹೆಚ್ಚಾಗಿದೆ ಎಂದವರ ಪ್ರಮಾಣ ಶೇ 24.5 ರಷ್ಟಿತ್ತು ಹಾಗೂ ಕಡಿಮೆಯಾಗಿದೆ ಎಂದವರ ಪ್ರಮಾಣ ಶೇ 26.5 ರಷ್ಟಿತ್ತು. ಇದರ ಪರಿಣಾಮವಾಗಿ, ಆದಾಯದ ನಿವ್ವಳ ಪ್ರತಿಕ್ರಿಯೆಯು 2025ರ ಸೆಪ್ಟೆಂಬರ್‌ನಲ್ಲಿದ್ದ ಮೈನಸ್ 2.1 ರಿಂದ ಪ್ರಸ್ತುತ ಮೈನಸ್ 9.9 ಕ್ಕೆ ತೀವ್ರವಾಗಿ ಕುಸಿದಿದೆ. ಹಣದುಬ್ಬರ ಅಥವಾ ಬೆಲೆ ಏರಿಕೆಯು ಗ್ರಾಮೀಣ ಜನರ ಮೇಲೆ ಬೀರುತ್ತಿರುವ ಒತ್ತಡಕ್ಕೆ ಮತ್ತೊಂದು ಪ್ರಮುಖ ಕಾರಣವಾಗಿದೆ. ಪ್ರಸ್ತುತ ಹಣದುಬ್ಬರದ ಬಗ್ಗೆ ಗ್ರಾಮೀಣ ಕುಟುಂಬಗಳ ಸರಾಸರಿ ಗ್ರಹಿಕೆಯು ಮೇ ತಿಂಗಳಲ್ಲಿ ಶೇ 5.9 ರಷ್ಟಿತ್ತು ಮತ್ತು ಜುಲೈನಲ್ಲಿ ಶೇ 6.1 ರಷ್ಟಿತ್ತು. ಆದರೆ ಸೆಪ್ಟೆಂಬರ್‌ನಲ್ಲಿ ಇದು ಶೇ 6.8 ಕ್ಕೆ ತೀವ್ರವಾಗಿ ಏರಿಕೆಯಾಗಿದೆ. ಮುಂದಿನ ಒಂದು ವರ್ಷದ ಹಣದುಬ್ಬರದ ನಿರೀಕ್ಷೆಯು ಕೂಡ ಗಣನೀಯವಾಗಿ ಹೆಚ್ಚಾಗಿದ್ದು, ಮಾರ್ಚ್‌ನಲ್ಲಿದ್ದ ಶೇ 6.8 ಮತ್ತು ಜುಲೈನಲ್ಲಿದ್ದ ಶೇ 7.4 ರಿಂದ ಈಗ ಶೇ 7.9ಕ್ಕೆ ಜಿಗಿದಿದೆ. ಸೆಪ್ಟೆಂಬರ್ ತಿಂಗಳ ಈ ವರದಿಯು ಗಮನಾರ್ಹವಾಗಿದೆ ಏಕೆಂದರೆ, ಜುಲೈ ತಿಂಗಳಿಗೆ ಹೋಲಿಸಿದರೆ ಪ್ರಸ್ತುತ ಹಣದುಬ್ಬರದಲ್ಲಿ 70 ಮೂಲಾಂಶ ಮತ್ತು ಭವಿಷ್ಯದ ಹಣದುಬ್ಬರ ನಿರೀಕ್ಷೆಯಲ್ಲಿ 50 ಮೂಲಾಂಶ ಏರಿಕೆಯಾಗಿದೆ. ಬೆಲೆಗಳ ಮಟ್ಟದ ಬಗ್ಗೆ ಜನರು ನೀಡಿರುವ ಪ್ರತಿಕ್ರಿಯೆಗಳು ಈ ಆತಂಕವನ್ನು ಮತ್ತಷ್ಟು ಒತ್ತಿಹೇಳುತ್ತವೆ. ಜುಲೈ ತಿಂಗಳಲ್ಲಿ ಶೇ 91.6 ರಷ್ಟು ಜನರು ವಸ್ತುಗಳ ಬೆಲೆಗಳು ಏರಿಕೆಯಾಗಿವೆ ಎಂದು ಹೇಳಿದ್ದರು. ಆದರೆ, ಸೆಪ್ಟೆಂಬರ್‌ನಲ್ಲಿ ಬರೋಬ್ಬರಿ ಶೇ 93.2 ರಷ್ಟು ಪ್ರತಿಕ್ರಿಯೆದಾರರು ಒಂದು ವರ್ಷದ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಪ್ರಸ್ತುತ ಬೆಲೆಗಳು ಗಣನೀಯವಾಗಿ ಹೆಚ್ಚಾಗಿವೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಭವಿಷ್ಯದ ಬಗ್ಗೆಯೂ ಜನರಲ್ಲಿ ಯಾವುದೇ ಸಕಾರಾತ್ಮಕ ಭಾವನೆಗಳಿಲ್ಲ. ಮುಂದಿನ ವರ್ಷವೂ ಸಹ ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಾಗಲಿವೆ ಎಂದು ಶೇ 85.9 ರಷ್ಟು ಜನರು ನಿರೀಕ್ಷಿಸುತ್ತಾರೆ. ಇದು ಗ್ರಾಮೀಣ ಭಾಗದಲ್ಲಿ ಜೀವನ ನಿರ್ವಹಣೆಯ ವೆಚ್ಚವು ಸೃಷ್ಟಿಸುತ್ತಿರುವ ದೈನಂದಿನ ಭಯವನ್ನು ತೋರಿಸುತ್ತದೆ. ಇಷ್ಟೆಲ್ಲಾ ಆತಂಕಗಳ ನಡುವೆಯೂ, ಗ್ರಾಮೀಣ ಕುಟುಂಬಗಳ ಖರ್ಚು ಸಂಪೂರ್ಣವಾಗಿ ಕುಸಿದಿದೆ ಎಂದು ಸಮೀಕ್ಷೆ ಹೇಳುವುದಿಲ್ಲ. ಜುಲೈನಲ್ಲಿ 77.4 ರಷ್ಟಿದ್ದ ಖರ್ಚಿನ ನಿವ್ವಳ ಪ್ರತಿಕ್ರಿಯೆಯು ಸೆಪ್ಟೆಂಬರ್‌ನಲ್ಲಿ 79.6 ಕ್ಕೆ ಕೊಂಚ ಸುಧಾರಿಸಿದೆ. ವಿಶೇಷವಾಗಿ ಅಗತ್ಯ ವಸ್ತುಗಳ ಮೇಲಿನ ಖರ್ಚು ಪ್ರಬಲವಾಗಿಯೇ ಉಳಿದಿದ್ದು, ಇದರ ನಿವ್ವಳ ಪ್ರತಿಕ್ರಿಯೆ 84.2 ರಷ್ಟಿದೆ. ಆದರೆ, ಅನಿವಾರ್ಯವಲ್ಲದ ವಸ್ತುಗಳ ಮೇಲಿನ ಖರ್ಚಿನ ಪ್ರತಿಕ್ರಿಯೆಯು ಕೇವಲ 39.3 ರಷ್ಟಿದೆ. ಪ್ರಸ್ತುತ ನಿರಾಶಾದಾಯಕ ಪರಿಸ್ಥಿತಿ ಮತ್ತು ಭವಿಷ್ಯದ ಆಶಾವಾದದ ನಡುವಿನ ಈ ವ್ಯತ್ಯಾಸವನ್ನು ಭವಿಷ್ಯದ ನಿರೀಕ್ಷೆಗಳ ಸೂಚ್ಯಂಕ? ಸೆರೆಹಿಡಿದಿದೆ. ಇದು ಜುಲೈನಲ್ಲಿದ್ದ 113.6 ರಿಂದ 112.8 ಕ್ಕೆ ಇಳಿಕೆಯಾಗಿದ್ದರೂ, 100 ಕ್ಕಿಂತ ಮೇಲಿರುವುದರಿಂದ ಮುಂಬರುವ ವರ್ಷದ ಬಗ್ಗೆ ಆಶಾವಾದವನ್ನು ಸೂಚಿಸುತ್ತದೆ. ಜನವರಿಯಲ್ಲಿದ್ದ 129.3 ಕ್ಕೆ ಹೋಲಿಸಿದರೆ ಇದೂ ಕೂಡ ಕುಸಿದಿದೆ. ಭಾರತದಾದ್ಯಂತ ಗ್ರಾಮೀಣ ಮತ್ತು ಅರೆ-ನಗರ ಪ್ರದೇಶಗಳಿಂದ ಸಂಗ್ರಹಿಸಲಾದ ಒಟ್ಟು 8,799 ಪ್ರತಿಕ್ರಿಯೆಗಳನ್ನು ಆಧರಿಸಿದ ಈ ಆರ್.ಬಿ.ಐ ಸಮೀಕ್ಷೆಯು ಕೇವಲ ಗ್ರಾಮೀಣ ನಿರಾಶಾವಾದವನ್ನು ಮಾತ್ರವಲ್ಲದೆ, ಕುಟುಂಬಗಳ ಆತ್ಮವಿಶ್ವಾಸದ ಮೇಲಾಗುತ್ತಿರುವ ತೀವ್ರ ಆಘಾತವನ್ನು ಎತ್ತಿತೋರಿಸುತ್ತದೆ. ಗ್ರಾಮೀಣ ಗ್ರಾಹಕರು ಖರ್ಚು ಮಾಡುತ್ತಿದ್ದರೂ, ಆದಾಯ, ಉದ್ಯೋಗ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಅವರ ಗ್ರಹಿಕೆಗಳು ಹದಗೆಡುತ್ತಿವೆ ಹಾಗೂ ಬೆಲೆ ಏರಿಕೆಯ ನಿರೀಕ್ಷೆಗಳು ಹೆಚ್ಚಾಗುತ್ತಿವೆ. ಭವಿಷ್ಯದ ಬಗೆಗಿನ ಅವರ ಸಣ್ಣ ಆಶಾವಾದವೊಂದು ಸದ್ಯಕ್ಕೆ ಕೊಂಚ ಆಸರೆಯಾಗಿದೆ; ಆದರೆ ಆದಾಯದ ನಿಧಾನಗತಿಯ ಬೆಳವಣಿಗೆ ಮತ್ತು ಬೆಲೆ ಏರಿಕೆಯು ಇದೇ ರೀತಿ ಮುಂದುವರಿದರೆ ಆ ಆಶಾವಾದವೂ ಕುಸಿಯುವ ಅಪಾಯವಿದೆ. ಈ ವರದಿಯು ಎಚ್ಚರಿಕೆಯ ಗಂಟೆಯಾಗಿದ್ದು, ಕುಟುಂಬಗಳ ಆರ್ಥಿಕ ಸ್ಥಿತಿಯು ಜೀವನ ವೆಚ್ಚದ ಏರಿಕೆಗೆ ತಕ್ಕಂತೆ ಸುಧಾರಿಸುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ.

# ಭಾರತೀಯ ಐಟಿ ಪ್ರಮುಖರಿಗೆ ಅಮೆರಿಕ ಶಾಕ್

## ಗ್ರೀನ್‌ಕಾರ್ಡ್ ಪ್ರೋಗ್ರಾಂನಿಂದ ಇನ್ಫೋಸಿಸ್, ಟಿಸಿಎಸ್, ವಿಪ್ರೋ ಅಮಾನತು

**ವಾಷಿಂಗ್ಟನ್, ಅ.8:** ಭಾರತೀಯ ಐಟಿ ಕಂಪನಿಗಳು ಸೇರಿದಂತೆ ಜಾಗತಿಕ ಟೆಕ್ ದಿಗ್ಗಜರಿಗೆ ಅಮೆರಿಕ ಸರ್ಕಾರ ಭಾರೀ ಆಘಾತ ನೀಡಿದೆ. ವಿದೇಶಿ ಉದ್ಯೋಗಿಗಳಿಗೆ ಕಾಯಂ ಪೌರತ್ವ (ಗ್ರೀನ್ ಕಾರ್ಡ್) ನೀಡುವ ಮಹತ್ವದ 'ಕಾಯಂ ಕಾರ್ಮಿಕ ಪ್ರಮಾಣೀಕರಣ ಕಾರ್ಯಕ್ರಮ'ದಿಂದ ಇನ್ಫೋಸಿಸ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ವಿಪ್ರೋ, ಎಚ್‌ಸಿಎಲ್ ಸೇರಿದಂತೆ ಪ್ರಮುಖ ಐಟಿ ಹೊರಗುತ್ತಿಗೆ ಸಂಸ್ಥೆಗಳನ್ನು ಅಮೆರಿಕ ಕಾರ್ಮಿಕ ಇಲಾಖೆ ಅಮಾನತುಗೊಳಿಸಿದೆ.




ವಿದೇಶಿ ಉದ್ಯೋಗಿಗಳಿಗೆ ಶಾಶ್ವತ ಗ್ರೀನ್ ಕಾರ್ಡ್ ಪಡೆಯಲು ಉದ್ಯೋಗದಾತ ಕಂಪನಿಗಳು ಅಮೆರಿಕ ಕಾರ್ಮಿಕ ಇಲಾಖೆಯಿಂದ ಪಡೆಯಬೇಕಾದ ಕಡ್ಡಾಯ ಅಧಿಕೃತ ಅನುಮೋದನೆಯೇ ಈ ಪರ್ಮ್ (PERM) ಪ್ರಕ್ರಿಯೆಯಾಗಿದೆ. ಆದರೆ, ಜಾಗತಿಕ ಐಟಿ ಕಂಪನಿಗಳು ಈ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ ಎಂದು ಆರೋಪಿಸಿರುವ ಅಮೆರಿಕ ಸರ್ಕಾರ, ತಕ್ಷಣದಿಂದಲೇ ಜಾರಿಗೆ ಬರುವಂತೆ ಈ ಕಠಿಣ ಕ್ರಮ ಕೈಗೊಂಡಿದೆ.

**ಮೈಕ್ರೋಸಾಫ್ಟ್, ಅಡೋಬ್ ಮೇಲೂ ನಿಷೇಧದ ತೂಗುಗತ್ತಿ**

ಅಮೆರಿಕದ ಕಾರ್ಮಿಕ ಕಾರ್ಯದರ್ಶಿ ಕೀತ್ ಸಾಂಡರ್ಲಿಂಗ್ ಈ ಮಹತ್ವದ ಆದೇಶ ಪ್ರಕಟಿಸಿದ್ದು, ಕಾಗ್ನಿಜೆಂಟ್, ಇನ್ಫೋಸಿಸ್, ಟಾಟಾ, ವಿಪ್ರೋ, ಎಚ್‌ಸಿಎಲ್ ಮತ್ತು ಕ್ಯಾಪ್‌ಜೆಮಿನಿ ಕಂಪನಿಗಳನ್ನು ಪರ್ಮ್ ಕಾರ್ಯಕ್ರಮದಿಂದ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. ಇದರ ಜತೆಗೆ, ಫೆಡರಲ್ ತನಿಖೆ ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಜಾಗತಿಕ ತಂತ್ರಜ್ಞಾನ ದೈತ್ಯ ಸಂಸ್ಥೆಗಳಾದ ಮೈಕ್ರೋಸಾಫ್ಟ್ ಮತ್ತು ಅಡೋಬ ಕಂಪನಿಗಳನ್ನೂ ಈ ಯೋಜನೆಯಿಂದ ಅಮಾನತು ಮಾಡಲಾಗಿದೆ ಎಂದು ಘೋಷಿಸಿದ್ದಾರೆ. ದುರದೃಷ್ಟವಶಾತ್, ಅಮೆರಿಕದಲ್ಲಿ ಮೈಕ್ರೋಸಾಫ್ಟ್‌ಗಿಂತ ಹೆಚ್ಚಾಗಿ ಈ ವೀಸಾ ಮತ್ತು ಪ್ರಮಾಣೀಕರಣ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡ ಮತ್ತೊಂದು ಸಂಸ್ಥೆಯಿಲ್ಲ" ಎಂದು ಕೀತ್ ಸಾಂಡರ್ಲಿಂಗ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಕಟು ಶಬ್ದಗಳಲ್ಲಿ ಕಿಡಿಕಾರಿರುವ ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, "ಮೈಕ್ರೋಸಾಫ್ಟ್ ಸಂಸ್ಥೆಯು 2025 ರಲ್ಲಿ ಸ್ಥಳೀಯವಾಗಿ ನುರಿತ ಅಮೆರಿಕನ್ ಉದ್ಯೋಗಿಗಳು ಸಿಗುತ್ತಿಲ್ಲ ಎಂದು ಪ್ರಮಾಣೀಕರಿಸಿ, ಸುಮಾರು 6,000 ಅಮೆರಿಕನ್ ನೌಕರರನ್ನು ಕೆಲಸದಿಂದ ವಜಾಗೊಳಿಸಿತ್ತು. ಆದರೆ, ಅದೇ ಸಮಯದಲ್ಲಿ ಸಂಸ್ಥೆಯು 6,000 ಕ್ಕೂ ಹೆಚ್ಚು ಎಚ್-1ಬಿ ವೀಸಾಗಳಿಗೆ ಅನುಮೋದನೆ ಪಡೆದುಕೊಂಡಿದ್ದಲ್ಲದೆ, 3,682 ಪರ್ಮ್ ಅರ್ಜಿಗಳನ್ನು ಸಲ್ಲಿಸಿತ್ತು. ಇದರಲ್ಲಿ ಸುಮಾರು 1,000 ಅರ್ಜಿಗಳು ಅಮೆರಿಕನ್ ನೌಕರರನ್ನು ವಜಾಗೊಳಿಸಿದ ಹುದ್ದೆಗಳಿಗೇ ಸಲ್ಲಿಸಲಾಗಿತ್ತು" ಎಂದು ಅಂಕಿಅಂಶ ಸಹಿತ ಸ್ಫೋಟಕ ಮಾಹಿತಿ ಬಹಿರಂಗಪಡಿಸಿದ್ದಾರೆ.

ಸ್ಥಳೀಯ ಅಮೆರಿಕನ್ನರು ಸಿಗದ ಉನ್ನತ ಹುದ್ದೆಗಳಿಗೆ ಜಗತ್ತಿನ ಅತ್ಯುತ್ತಮ ಪ್ರತಿಭೆಗಳನ್ನು ಕರೆತರಲು ಎಚ್-1ಬಿ ವೀಸಾ ವ್ಯವಸ್ಥೆ ರೂಪಿಸಲಾಗಿತ್ತು. ಆದರೆ, ಪ್ರಸ್ತುತ ಈ ಸಂಪೂರ್ಣ ಕಾರ್ಯಕ್ರಮವು ವಂಚನೆ ಮತ್ತು ಅಕ್ರಮಗಳಿಂದ ತುಂಬಿಹೋಗಿದೆ ಎಂದು ವ್ಯಾನ್ಸ್ ಆಕ್ರೋಶ ಹೊರಹಾಕಿದ್ದಾರೆ.

**ವಿಶ್ವವಿದ್ಯಾಲಯಗಳ ಮೇಲೂ ತನಿಖಾ ಕಣ್ಣು:** ಕಾರ್ಮಿಕ ಇಲಾಖೆಯ ಈ ಬಿಸಿ ಕೇವಲ ಐಟಿ ಕಂಪನಿಗಳಿಗೆ ಮಾತ್ರವಲ್ಲದೆ, ಹಾರ್ವರ್ಡ್, ಯೇಲ್ ಮತ್ತು ಸ್ಟ್ಯಾನ್‌ಫೋರ್ಡ್ ಸೇರಿದಂತೆ ಒಂಬತ್ತು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೂ ತಟ್ಟಿದೆ. ಅಮೆರಿಕನ್ ನೌಕರರ ವೇತನ ಮಟ್ಟವನ್ನು ಕುಸಿಯುವಂತೆ ಮಾಡಲು ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ತಂದು ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪಗಳ ಕುರಿತು ಈ ವಿಶ್ವವಿದ್ಯಾಲಯಗಳ ವಿರುದ್ಧವೂ ತನಿಖೆ ನಡೆಸಲಾಗುವುದು ಎಂದು ಸಾಂಡರ್ಲಿಂಗ್ ತಿಳಿಸಿದ್ದಾರೆ. ಈಗಾಗಲೇ ಈ ಸಂಸ್ಥೆಗಳಿಗೆ ಸಮನ್ಸ್ ಜಾರಿ ಮಾಡಲಾಗಿದೆ ಎಂದು ಕಾರ್ಮಿಕ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಆಂಥೋಣಿ ಡಿ'ಎಸ್ಪೊಸಿಟೊ ಸ್ಪಷ್ಟಪಡಿಸಿದ್ದಾರೆ. ಅಮೆರಿಕ ಸರ್ಕಾರದ ಈ ದಿಢೀರ್ ನಿರ್ಧಾರದಿಂದಾಗಿ ಸಾವಿರಾರು ಭಾರತೀಯ ಟೆಕ್ಕಿಗಳ ಗ್ರೀನ್ ಕಾರ್ಡ್ ಕನಸು ಹಾಗೂ ಐಟಿ ಕಂಪನಿಗಳ ನೇಮಕಾತಿ ಪ್ರಕ್ರಿಯೆಗೆ ಭಾರಿ ಹಿನ್ನಡೆಯಾಗುವ ಆತಂಕ ಎದುರಾಗಿದೆ.

**ಎಚ್ಚರಿಕೆಯಿಂದಿರುವಂತೆ ಭಾರತೀಯರಿಗೆ ವಿದೇಶಾಂಗ ಸಚಿವಾಲಯ ಮಹತ್ವದ ಸಲಹೆ**

# ರಿಯಾದ್ ವಿಮಾನ ನಿಲ್ದಾಣದ ಮೇಲೆ ಕ್ಷಿಪಣಿ ದಾಳಿ

**ರಿಯಾದ್,ಅ.8:** ಕಿಂಗ್ ಖಾಲಿದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೌತಿಗಳು ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಯನ್ನು ದೃಢಪಡಿಸಿದ ಕೆಲವು ಗಂಟೆಗಳ ನಂತರ, ರಿಯಾದ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಸೌದಿ ಅರೇಬಿಯಾದಲ್ಲಿರುವ ಭಾರತೀಯ ಪ್ರಜೆಗಳಿಗೆ ಎಚ್ಚರಿಕೆಯನ್ನು ನೀಡಿದೆ. ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಿರುವಂತೆ ಒಳಾಂಗಣದಲ್ಲಿರಲು ಮತ್ತು ಅಧಿಕೃತ ಮಾರ್ಗಗಳ ಮೂಲಕ ಸ್ಥಳೀಯ ಅಧಿಕಾರಿಗಳು ನೀಡುವ ಸೂಚನೆಗಳನ್ನು ಅನುಸರಿಸಲು ಸೂಚಿಸಿದೆ.




ರಿಯಾದ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಮತ್ತು ಜೆಡ್ಡಾದ ದೂತಾವಾಸವು ವಿಎಫ್‌ಎಸ್ ಮೂಲಕ ಅವರ ಹೊರಗುತ್ತಿಗೆ ಸೇವೆಗಳೊಂದಿಗೆ ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿದೆ. "ಅಗತ್ಯವಿದ್ದಾಗ" ಮತ್ತಷ್ಟು ನವೀಕರಣಗಳು ಮತ್ತು ಸಲಹೆಗಳನ್ನು ನೀಡುವುದಾಗಿ ರಾಯಭಾರ ಕಚೇರಿ ತಿಳಿಸಿದೆ. ಹಾಗೂ ಪ್ರವಾಸಿ ಭಾರತೀಯ ಸಹಾಯತಾ ಕೇಂದ್ರದ 24 ಗಂಟೆಗಳ ಸಹಾಯವಾಣಿ ಟೋಲ್-ಫ್ರೀ ಸಂಖ್ಯೆ 8002471234ನಲ್ಲಿ ಲಭ್ಯವಿದೆ.

ರಿಯಾದ್ ವಿಮಾನ ನಿಲ್ದಾಣದ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ನಡೆದಿದೆ ಎಂದು ಹೌತಿಗಳು ಹೇಳಿದ್ದಾರೆ. ರಿಯಾದ್‌ನ ಕಿಂಗ್ ಖಾಲಿದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಗುರಿಯಾಗಿಸಿಕೊಂಡು ಹೊಸ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಯ ಹೊಣೆಯನ್ನು ಯೆಮೆನ್‌ನಲ್ಲಿರುವ ಇರಾನ್ ಬೆಂಬಲಿತ ಹೌತಿ ಬಂಡುಕೋರರು ವಹಿಸಿಕೊಂಡ ನಂತರ ಈ ಸಲಹೆ ಬಂದಿದೆ. ವರದಿಯಾದ ದಾಳಿಯು ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಯನ್ನು ಅಡ್ಡಿಪಡಿಸಿತು, ನಂತರ ನಿಂತ ವಿಮಾನದಿಂದ ಹೊಗೆ ಏರುತ್ತಿರುವುದು ಕಂಡುಬಂದಿದೆ.

ಇತ್ತೀಚಿನ ಬೆಳವಣಿಗೆಗಳು ಕಿಂಗ್ ಖಾಲಿದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಾಚರಣೆಗಳ ಮೇಲೆ ತಕ್ಷಣದ ಪರಿಣಾಮ ಬೀರಿತು. ವಿಮಾನ-ಟ್ರ್ಯಾಕಿಂಗ್ ಸೇವೆ ಫ್ಲೈಟ್ ರಾಡಾರ್ 24 ಎಕ್ಸ್‌ನಲ್ಲಿ ವಿಮಾನ ನಿಲ್ದಾಣವನ್ನು ಮತ್ತೆ ಮುಚ್ಚಲಾಗಿದೆ ಎಂದು ಹೇಳಿದೆ,

ಕೊನೆಯ ಲ್ಯಾಂಡಿಂಗ್ 80 ನಿಮಿಷಗಳಿಗಿಂತ ಹೆಚ್ಚು ಮೊದಲು ಮತ್ತು ಕೊನೆಯ ನಿರ್ಗಮನ 90 ನಿಮಿಷಗಳಿಗಿಂತ ಹೆಚ್ಚು ಮೊದಲು ದಾಖಲಾಗಿದೆ.

ಸ್ಫೋಟಗಳ ನಂತರ ಅಗ್ನಿಶಾಮಕ ಮತ್ತು ಆಂಬ್ಯುಲೆನ್ಸ್ ತಂಡಗಳನ್ನು ನಿಯೋಜಿಸಲಾಗಿದೆ ಎಂದು ವಿಮಾನ ನಿಲ್ದಾಣದ ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ, ಆದರೆ ಆ ಪ್ರದೇಶದಲ್ಲಿ ಹೊಗೆ ಗೋಚರಿಸುತ್ತಿತ್ತು. ಸಾಕ್ಷಿದಾರರು ಹೆಸರು ಬಹಿರಂಗಪಡಿಸಲು ಬಯಸದ ಸ್ಥಿತಿಯಲ್ಲಿ ಮಾತನಾಡುತ್ತಾ, ಮಾಧ್ಯಮಗಳೊಂದಿಗೆ ಮಾತನಾಡಲು ತಮಗೆ ಅಧಿಕಾರವಿಲ್ಲ ಎಂದು ಹೇಳಿದರು. ಸಾಕ್ಷಿಯ ಪ್ರಕಾರ, ಹೊರಹೋಗುವ ವಿಮಾನಗಳನ್ನು ನಿಲ್ಲಿಸಲಾಯಿತು ಮತ್ತು ಪ್ರಯಾಣಿಕರು ತಮ್ಮ ಚೆಕ್-ಇನ್ ಮಾಡಿದ ಲಗೇಜ್‌ಗಳನ್ನು ಬಿಟ್ಟು ವಿಮಾನ ನಿಲ್ದಾಣದಿಂದ ಹೊರಬರಲು ತಿಳಿಸಲಾಯಿತು. ಈ ಅಡಚಣೆಯಿಂದ ಎಷ್ಟು ವಿಮಾನಗಳು ಪರಿಣಾಮ ಬೀರಿವೆ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

**ದಾಳಿ ಖಂಡಿಸಿದ ಭಾರತ**

ಇದಕ್ಕೂ ಮೊದಲು, ಸೌದಿ ಅರೇಬಿಯಾದ ಎರಡು ವಿಮಾನ ನಿಲ್ದಾಣಗಳನ್ನು ಗುರಿಯಾಗಿಸಿಕೊಂಡು ನಡೆದ ದಾಳಿಯನ್ನು ಭಾರತ ಖಂಡಿಸಿತು, ಇದು ನಾಗರಿಕರ ಸಾವು ಮತ್ತು ಗಾಯಗಳಿಗೆ ಕಾರಣವಾಯಿತು, "ನಾಗರಿಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಳ್ಳುವುದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ" ಎಂದು ಪ್ರತಿಪಾದಿಸಿತು.

"ಕಳೆದ ಕೆಲವು ದಿನಗಳಿಂದ ರಿಯಾದ್‌ನ ಅಭಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಕಿಂಗ್ ಖಾಲಿದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಗುರಿಯಾಗಿಸಿಕೊಂಡು ನಡೆದ ದಾಳಿಯನ್ನು ಭಾರತ ಖಂಡಿಸುತ್ತದೆ, ಇದು ನಾಗರಿಕರ ಸಾವು ಮತ್ತು ಗಾಯಗಳಿಗೆ ಕಾರಣವಾಗಿದೆ" ಎಂದು ವಿದೇಶಾಂಗ ಸಚಿವಾಲಯ (MEA) ಹೇಳಿದೆ.

"ನಾಗರಿಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಳ್ಳುವುದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ" ಎಂದು ಒಇಂ ಹೇಳಿದೆ. "ನಾವು ಸೌದಿ ಅರೇಬಿಯಾ ಸಾಮ್ರಾಜ್ಯದ ಜನರು ಮತ್ತು ಸರ್ಕಾರದೊಂದಿಗೆ ಒಗ್ಗಟ್ಟನ್ನು ವ್ಯಕ್ತಪಡಿಸುತ್ತೇವೆ ಮತ್ತು ನಿಲ್ಲುತ್ತೇವೆ" ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

# ಚಿನ್ನಲೇಪಿತ ಡೊನಾಲ್ಡ್ ಟ್ರಂಪ್ ಬೆತ್ತಲೆ ಪ್ರತಿಮೆ ಅನಾವರಣ

**ಸ್ಟ್ರಾಸ್‌ಬರ್ಗ್, ಅ. 8:** ಅಮೆರಿಕದ ವಿದೇಶಾಂಗ ಮತ್ತು ಹವಾಮಾನ ನೀತಿಯ ವಿರುದ್ಧ ವಿಡಂಬನಾತ್ಮಕ ಪ್ರತಿಭಟನೆಯಾಗಿ ಸ್ಟ್ರಾಸ್‌ಬರ್ಗ್‌ನಲ್ಲಿರುವ ಯುರೋಪಿಯನ್ ಪಾರ್ಲಿಮೆಂಟ್?ನಲ್ಲಿ 23 ಕ್ಯಾರೆಟ್ ಚಿನ್ನ ಲೇಪಿತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದ್ದು, ಪ್ರತಿಮೆಗೆ 'ದಿ ಆರೆಂಜ್ ಪ್ಲೇಗ್' ಎಂದು ಕರೆಯಲಾಗಿದೆ. ಡ್ಯಾನಿಶ್ ಕಲಾವಿದ ಜೆನ್ಸ್ ಗಾಲ್ಶಿಯೋಟ್ ಅವರು ಈ ಎಂಟು ಅಡಿ ಎತ್ತರದ ಪ್ರತಿಮೆಯನ್ನು ರಚಿಸಿದ್ದು, ಟ್ರಂಪ್ ಒಂದು ಕೈಯಲ್ಲಿ ಗಾಲ್ಫ್ ಕ್ಲಬ್ ಮತ್ತು ವಿಶ್ವ ಆಕಾರದ ಚೆಂಡನ್ನು ಮತ್ತು ಇನ್ನೊಂದು ಕೈಯಲ್ಲಿ ಮಾಪಕಗಳನ್ನು ಹಿಡಿದಿರುವುದನ್ನು ತೋರಿಸುತ್ತದೆ. ಪ್ರತಿಮೆಯಲ್ಲಿ ಒಬ್ಬ ಚಿಕ್ಕ ವ್ಯಕ್ತಿಯ ಭುಜದ ಮೇಲೆ ಟ್ರಂಪ್ ಕುಳಿತಿದ್ದಾನೆ. ಅದಕ್ಕೆ ಅನ್ಯಾಯದ ರಾಜ ಎಂದು ಲೇಬಲ್ ಮಾಡಲಾಗಿದೆ. ಕೆಳಗೆ ವಿಡಂಬನಾತ್ಮಕವಾಗಿ ಪ್ರತಿಜ್ಞೆಯೊಂದಿದ್ದು, ಅದರಲ್ಲಿ ನಾನು ಒಬ್ಬ ವ್ಯಕ್ತಿಯ ಬೆನ್ನಿನ ಮೇಲೆ ಕುಳಿತಿದ್ದೇನೆ. ಅವನು ನನ್ನ ಹೊರೆಯ ಕೆಳಗೆ ಮುಳುಗುತ್ತಿದ್ದಾನೆ. ನಾನು ಅವನಿಗೆ ಸಹಾಯ ಮಾಡಲು ಏನು ಬೇಕಾದರೂ ಮಾಡುತ್ತೇನೆ.



ಅವನ ಬೆನ್ನಿನಿಂದ ಕೆಳಗಿಳಿಯುವುದನ್ನು ಹೊರತುಪಡಿಸಿ ಎಂದು ಬರೆಯಲಾಗಿದೆ.

ರಾಜಕೀಯವಾಗಿ ಪ್ರಭಾವಿತ ಶಿಲ್ಪಕೃತಿಗಳಿಗೆ ಹೆಸರುವಾಸಿಯಾಗಿರುವ ಜೆನ್ಸ್ ಗಾಲ್ಶಿಯೋಟ್, ಟ್ರಂಪ್ ಅವರ ಪರಿಸರ ಮತ್ತು ವಿದೇಶಾಂಗ ನೀತಿಗಳಲ್ಲಿನ ಅಸ್ಥಿರತೆಯ ವಿರುದ್ಧ ತಮ್ಮ ಕೃತಿ ವ್ಯಂಗ್ಯಾತ್ಮಕ ಆಕ್ರೋಶದ ಅಭಿವ್ಯಕ್ತಿ ಎಂದು ಬಣ್ಣಿಸಿದ್ದಾರೆ. ಮತ್ತು ನಿಯಮ-ಆಧಾರಿತ ವಿಶ್ವ ವ್ಯವಸ್ಥೆ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಹವಾಮಾನ ಬಿಕ್ಕಟ್ಟನ್ನು ಪರಿಹರಿಸುವ ನಮ್ಮ ಸಾಮೂಹಿಕ ಪ್ರಯತ್ನಗಳಿಗೆ ಟ್ರಂಪ್ ಅತ್ಯಂತ ದೊಡ್ಡ ಬೆದರಿಕೆಗಳಲ್ಲಿ ಒಂದಾಗಿದ್ದಾರೆ ಎಂದಿದ್ದಾರೆ. ಡ್ಯಾನಿಶ್ ಯುರೋಪಿಯನ್ ಸಂಸತ್ ಸದಸ್ಯ ಪರ್ ಕ್ಲೌಸೆನ್ ಅವರು, ಈ ಪ್ರತಿಮೆಯ ಅನಾವರಣವನ್ನು ಶ್ಲಾಘಿಸುತ್ತಾ, "ಯುರೋಪಿಯನ್ ಸಂಸತ್ತಿನಲ್ಲಿ ಈ ಶಿಲ್ಪವನ್ನು ಪ್ರದರ್ಶಿಸುವುದನ್ನು ಸಹಿಸಿಕೊಳ್ಳಲಾಗದಷ್ಟು ಅಸಹಿಷ್ಣುತೆ ಯಾರಲ್ಲಾದರೂ ಇದ್ದರೆ, ಅವರಿಗೆ ಜಾಗತಿಕ ವೇದಿಕೆಯಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಹೇಳಿದ್ದಾರೆ.

ದಿ ಇಂಡಿಪೆಂಡೆಂಟ್ ಪ್ರಕಾರ, ಟ್ರಂಪ್ ಪ್ರತಿಮೆ ಗುರುವಾರದವರೆಗೆ ಸ್ಟ್ರಾಸ್‌ಬರ್ಗ್‌ನಲ್ಲಿರಲಿದೆ. ನವೆಂಬರ್‌ನಲ್ಲಿ ಟರ್ಕಿಯಲ್ಲಿ ನಡೆಯಲಿರುವ UN COP31 ಹವಾಮಾನ ಸಮ್ಮೇಳನದಲ್ಲಿ ಇದು ಮತ್ತೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಅಲ್ಲಿ ಗಾಲ್ಶಿಯೋಟ್ ಪ್ರತಿನಿಧಿಗಳಿಗೆ 3ಆ-ಮುದ್ರಿತ ಚಿಕಣಿ ಪ್ರತಿಕೃತಿಗಳನ್ನು ವಿತರಿಸಲು ಯೋಜಿಸಿದ್ದಾರೆ ಎನ್ನಲಾಗಿದೆ.

# ಉಕ್ರೇನ್‌ನ ಬಸ್ ಮೇಲೆ ರಷ್ಯಾ ದಾಳಿ: 30 ಮಂದಿ ಸಾವು



**ಕೀವ್, ಅ.8:** ಉಕ್ರೇನ್‌ನ ಪೂರ್ವ ಭಾಗದಲ್ಲಿ ಸಾರ್ವಜನಿಕ ಬಸ್ ಒಂದರ ಮೇಲಿನ ದಾಳಿ ಸೇರಿದಂತೆ ರಷ್ಯಾ ನಡೆಸಿದ ಸರಣಿ ದಾಳಿಗಳಲ್ಲಿ 30 ಜನರು ಮೃತಪಟ್ಟಿದ್ದು, ಕನಿಷ್ಠ 18 ಜನರು ಗಾಯಗೊಂಡಿದ್ದಾರೆ ಎಂದು ಗುರುವಾರ ಅಧಿಕಾರಿಗಳು ತಿಳಿಸಿದ್ದಾರೆ. ಈ ಮಧ್ಯೆ ಉಕ್ರೇನ್ ಮೇಲೆ ರಷ್ಯಾದ ದಾಳಿಗಳು ತೀವ್ರಗೊಂಡಿದ್ದು, ರಾಜಧಾನಿ ಕೀವ್‌ನಲ್ಲಿ ವಿದ್ಯುತ್ ವ್ಯವಸ್ಥೆ ಮತ್ತಷ್ಟು ಹದಗೆಟ್ಟಿದೆ. ಉಕ್ರೇನ್‌ನ ಡೊನೆಟ್ಸ್ಕ ಪ್ರದೇಶದ ಕ್ರಾಮಾಟೋಸ್ರ್ಕ ಮತ್ತು ನೆರೆಯ ಸ್ಲೋವಿಯಾನ್ಸ್ಕ ನಗರಗಳಲ್ಲಿ ಭದ್ರತಾ ಪರಿಸ್ಥಿತಿ ತೀವ್ರವಾಗಿ ಕ್ಷೀಣಿಸಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಸಾರಿಗೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಪ್ರಾದೇಶಿಕ ಮಿಲಿಟರಿ ಆಡಳಿತದ ಮುಖ್ಯಸ್ಥ ವಡಿಮ್ ಫಿಲಾಶ್ಕಿನ್ ತಿಳಿಸಿದ್ದಾರೆ. ಮತ್ತೊಂದೆಡೆ, ವಸತಿ ಕಟ್ಟಡಗಳ ಬಳಿ ಬಿದ್ದಿದ್ದ ತಲಾ ಅರ್ಧ ಟನ್ ತೂಕದ ಎರಡು ಸ್ಫೋಟಗೊಳ್ಳದ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಬಾಂಬ್ ವಿಲೇವಾರಿ ತಜ್ಞರು ಯಶಸ್ವಿಯಾಗಿ ನಿಷ್ಕ್ರಿಯಗೊಳಿಸಿದ್ದಾರೆ ಎಂದು ಕೀವ್ ಪೊಲೀಸರು ತಿಳಿಸಿದ್ದಾರೆ.

# ರಾಹುಲ್ ವಿರುದ್ಧ ಎಫ್‌ಐಆರ್: ಅಖಿಲೇಶ್ ಆಕ್ರೋಶ

**ನವದೆಹಲಿ, ಅ. 8:** ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿ ಆಕಾಶವಾಣಿ ಭವನಕ್ಕೆ ಅಕ್ರಮ ಪ್ರವೇಶಿಸಿದ ಕಾರಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರ ವಿರುದ್ಧ ಪ್ರಕರಣ ದಾಖಲಿಸಿರುವ ದೆಹಲಿ ಪೊಲೀಸರ ಕ್ರಮವನ್ನು ಸಮಾಜವಾದಿ ಪಕ್ಷ (ಎಸ್‌ಪಿ) ಅಧ್ಯಕ್ಷ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ತೀವ್ರವಾಗಿ ಖಂಡಿಸಿದ್ದಾರೆ. ದೆಹಲಿ ಪೊಲೀಸರಿಗೆ ಎಫ್‌ಐಆರ್ ದಾಖಲಿಸುವುದನ್ನು ಬಿಟ್ಟರೆ ಬೇರೆ ಯಾವುದೇ ಕೆಲಸವಿಲ್ಲ ಎಂದು ಟೀಕಿಸಿದ್ದಾರೆ. ಏಕಪಕ್ಷೀಯ ನಿಲುವು ತೆಗೆದುಕೊಂಡ ಆರೋಪ ಹೊತ್ತಿರುವ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ಇಂಡಿಯಾ ಒಕ್ಕೂಟ ನಡೆಸಿದ ಪ್ರತಿಭಟನೆ ವೇಳೆ, ದೆಹಲಿಯ ಆಕಾಶ್‌ವಾಣಿ ಭವನದ ಆವರಣಕ್ಕೆ ರಾಹುಲ್ ಗಾಂಧಿ ಸೇರಿದಂತೆ ಹಲವು ಇಂಡಿಯಾ ಒಕ್ಕೂಟದ ನಾಯಕರು ಆಕಾಶವಾಣಿ ಭವನಕ್ಕೆ ಪ್ರವೇಶಿಸಿದ್ದರು. ಈ ವಿಚಾರವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ



ಪ್ರಿಯಾಂಕಾ ಗಾಂಧಿ ಸೇರಿದಂತೆ ಹಲವು ನಾಯಕರ ವಿರುದ್ಧ ದೆಹಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇದೇ ವೇಳೆ ಬಿಜೆಪಿ ಸರ್ಕಾರದ ವಿರುದ್ಧವೂ ಅಖಿಲೇಶ್ ಯಾದವ್ ವಾಗ್ದಾಳಿ ನಡೆಸಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುವವರೆಗೂ ದೇಶವು ಅಭಿವೃದ್ಧಿ ಹೊಂದಿದ ರಾಷ್ಟ್ರ (ವಿಕಸಿತ ಭಾರತ) ಆಗಲು ಸಾಧ್ಯವಿಲ್ಲ. ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಿದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಇನ್ನು ಈ ಬಗ್ಗೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಕೂಡಾ ಪ್ರತಿಕ್ರಿಯಿಸಿದ್ದಾರೆ. ನನ್ನ ವಿರುದ್ಧ ಈಗಾಗಲೇ 45 ಎಫ್‌ಐಆರ್‌ಗಳು ಇವೆ. 100ಕ್ಕೂ ಅಧಿಕ ಎಫ್‌ಐಆರ್ ನನ್ನ ಗುರಿ. ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಗಾಗಿ ಹೋರಾಡುವಾಗ ದಾಖಲಾಗುವ ಪ್ರತಿಯೊಂದು ಎಫ್‌ಐಆರ್ ಕೂಡ ನನಗೆ ಹೆಮ್ಮೆಯ ಪದಕವಿದ್ದಂತೆ ಎಂದಿದ್ದಾರೆ.

# ಕ್ಯಾನ್ಸರ್ ಔಷಧಗಳ ಬೆಲೆಯಲ್ಲಿ ಶೇ.70ರಷ್ಟು ಇಳಿಕೆ ಸಾಧ್ಯತೆ

**ನವದೆಹಲಿ, ಅ.8:** ಕೇಂದ್ರ ಸರ್ಕಾರವು ಕ್ಯಾನ್ಸರ್ ನಿರೋಧಕ ಜೀವ ರಕ್ಷಕ ಔಷಧಗಳ ಬೆಲೆಯನ್ನು ಗಣನೀಯವಾಗಿ ತಗ್ಗಿಸಲು ಪ್ರಮುಖ ಪ್ರಸ್ತಾವನೆಯೊಂದನ್ನು ಸಿದ್ಧಪಡಿಸಿದೆ. ಇದರಿಂದಾಗಿ ಭಾರತದಲ್ಲಿ ಕ್ಯಾನ್ಸರ್ ಔಷಧಗಳ ಚಿಲ್ಲರೆ ಬೆಲೆಯಲ್ಲಿ ಶೇ. 70ರಷ್ಟು ಇಳಿಕೆಯಾಗುವ ನಿರೀಕ್ಷೆಯಿದೆ. ಕೇಂದ್ರ ಸರ್ಕಾರವು ಬೆಲೆ ನಿಯಂತ್ರಣಕ್ಕೆ ಒಳಪಡದ ಕ್ಯಾನ್ಸರ್ ಔಷಧಗಳ ಗರಿಷ್ಠ ಚಿಲ್ಲರೆ ಬೆಲೆ (ಎಂಆರ್‌ಪಿ) ಮೇಲಿನ ವ್ಯಾಪಾರ ಲಾಭಾಂಶದ ಮಿತಿಯನ್ನು ಶೇ. 30ಕ್ಕೆ ನಿಗದಿಪಡಿಸಲು ನಿರ್ಧರಿಸಿದೆ. ಈ ಹಿಂದೆ, 2019ರಲ್ಲಿ, ಕ್ಯಾನ್ಸರ್ ಔಷಧಿಗಳ ಮೇಲಿನ ವ್ಯಾಪಾರ ಅಂಚುಗಳನ್ನು ನಿಯಂತ್ರಿಸಲು ಒಂದು ಉಪಕ್ರಮವನ್ನು ತೆಗೆದುಕೊಳ್ಳಲಾಗಿತ್ತು. ಆ ಕ್ರಮದಿಂದ 526 ಬ್ರಾಂಡ್‌ಗಳಿಗೆ ವಾರ್ಷಿಕ ಸುಮಾರು 984 ಕೋಟಿ ರೂ. ಉಳಿತಾಯವಾಗಿದೆ ಎಂದು ವರದಿಯಾಗಿದೆ. ಈ ಹೊಸ ವ್ಯವಸ್ಥೆಯ ಮೂಲಕ, ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಔಷಧಿಗಳ ಲಭ್ಯತೆಯನ್ನು ಕಾಯ್ದುಕೊಳ್ಳುವುದರ ಮೇಲೆ ಮತ್ತು ರೋಗಿಗಳಿಗೆ ಅವುಗಳನ್ನು ಹೆಚ್ಚು ಕೈಗೆಟುಕುವಂತೆ ಮಾಡುವುದರ ಮೇಲೆ ಸರ್ಕಾರ ಗಮನ ಹರಿಸಿದೆ.

**ಯಾವ ಔಷಧಗಳಿಗೆ ಇದು ಅನ್ವಯಿಸುತ್ತದೆ:** ಈ ಹೊಸ ಮಿತಿಯು ಬ್ರಾಂಡೆಡ್, ಜೆನೆರಿಕ್, ದೇಶೀಯವಾಗಿ ತಯಾರಿಸಿದ ಹಾಗೂ ವಿದೇಶದಿಂದ ಆಮದು ಮಾಡಿಕೊಳ್ಳಲಾಗುವ ಎಲ್ಲಾ ರೀತಿಯ ಕ್ಯಾನ್ಸರ್ ನಿರೋಧಕ ಔಷಧಗಳಿಗೂ ಅನ್ವಯಿಸಲಿದೆ.

# ನಿಶಾ ರಾಫೆಲ್ ವಿರುದ್ಧ ಪೋಕ್ಸೊ ಕೇಸ್

**ತಿರುವನಂತಪುರ, ಅ.8:** 11 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಕೇರಳದ ಖ್ಯಾತ ಸೋಷಿಯಲ್ ಮೀಡಿಯಾ ಇನ್‌ಫ್ಲ್ಯುಯೆನ್ಸರ್ ನಿಶಾ ರಾಫೆಲ್ ವಿರುದ್ಧ ತ್ರಿಶೂರ್ ಪಶ್ಚಿಮ ಪೊಲೀಸರು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಪೊಲೀಸರು, ಬಲಿಪಶು ಬಾಲಕನನ್ನು ವೈದ್ಯಕೀಯ-ಕಾನೂನು ಪರೀಕ್ಷೆಗಾಗಿ ತ್ರಿಶೂರ್ ಜನರಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪ್ರಾಥಮಿಕ ತಪಾಸಣೆಯಲ್ಲಿ ಲೈಂಗಿಕ ದೌರ್ಜನ್ಯ ನಡೆದಿರುವುದು ದೃಢಪಟ್ಟಿದೆ ಎಂದು ತಿಳಿಸಿದ್ದಾರೆ.

ಔಪಚಾರಿಕ ದೂರಿನ ಆಧಾರದ ಮೇರೆಗೆ ನಿಶಾ ರಾಫೆಲ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪೊಲೀಸ್ ಅಧಿಕಾರಿಗಳು ಈ ವಿಷಯದ ಬಗ್ಗೆ ವಿವರವಾದ ತನಿಖೆಯನ್ನು ಪ್ರಾರಂಭಿಸಿದ್ದು, ಮುಂದಿನ ಕಾನೂನು ಪ್ರಕ್ರಿಯೆಗಳನ್ನು ಮುಂದುವರೆಸಿದ್ದಾರೆ. ದಾಗ್ಯೂ, ನಿಶಾ ಅವರ ಆಪ್ತ ಮೂಲಗಳು ಪ್ರಕರಣವನ್ನು ಕಟ್ಟು ಕಥೆ ಎಂದು ತಳ್ಳಿ ಹಾಕಿದ್ದಾರೆ. ಎರಡು ಫ್ಲಾಟ್‌ಗಳ ಕುರಿತು ನಡೆಯುತ್ತಿರುವ ವಿವಾದದಿಂದಾಗಿ ನಿಶಾ ಮತ್ತು ದೂರುದಾರರ ನಡುವೆ ಮೊದಲೇ ದ್ವೇಷವಿತ್ತು. ಈ ಹಿನ್ನೆಲ ಈ ಪ್ರಕರಣ ದಾಖಲಿಸಿದ್ದಾರೆ ಎಂದು ಹೇಳಿದ್ದಾರೆ.

# ತಲೆಮರೆಸಿಕೊಂಡಿದ್ದ ಬಿಜೆಪಿ ಕೌನ್ಸಿಲರ್ ಹಾಜರಾತಿ ರಿಜಿಸ್ಟರ್‌ನಲ್ಲಿ ನಕಲಿ ಸಹಿ

**ತಿರುವನಂತಪುರ, ಅ. 8:** ಕೇರಳದ ತಿರುವನಂತಪುರಂ ಮಹಾನಗರ ಪಾಲಿಕೆಯ ಹಾಜರಾತಿ ಪುಸ್ತಕದಲ್ಲಿ ಬಿಜೆಪಿ ಸದಸ್ಯ ಆರ್ ಸುಗತನ್ ತಲೆಮರೆಸಿಕೊಂಡಿದ್ದ ಸಮಯದಲ್ಲಿ ಅವರ ನಕಲಿ ಸಹಿ ಹಾಕಿ ಹಾಜರಾತಿ ನಮೂದಿಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಈ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ. ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ) ಅಡಿಯಲ್ಲಿ ಪಡೆದ ದಾಖಲೆಗಳನ್ನು ಆಧರಿಸಿ ಎಲ್‌ಡಿಎಫ್ ನಾಯಕರು ಈ ಗಂಭೀರ ಆರೋಪವನ್ನು ಮಾಡಿದ್ದಾರೆ. ಬಿಜೆಪಿ ಕೌನ್ಸಿಲರ್ ಆರ್. ಸುಗತನ್ (ವಾಳೋಟ್ಟುಕೋಣಂ ವಾರ್ಡ್) ಅವರ ವಿರುದ್ಧ 19 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಮುಖ್ಯವಾಗಿ ವಟ್ಟಿಯೂರ್ಕಾವು ಮತ್ತು ನೆಡುಮಂಗಾಡ್ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬಿಜೆಪಿ ಕೌನ್ಸಿಲರ್ ವಿರುದ್ಧ ಪ್ರಕರಣಗಳು ನಮೂದಾಗಿವೆ. ಎರಡು ಕೊಲೆ ಯತ್ನ ಪ್ರಕರಣಗಳೂ ಇವೆ. ಇತ್ತೀಚೆಗೆ ವ್ಯಕ್ತಿಯೊಬ್ಬನ ತಲೆಗೆ ಹೊಡೆದು ಕೊಲೆ ಯತ್ನ ನಡೆಸಿದ ಪ್ರಕರಣದಲ್ಲಿ ಪೊಲೀಸ್ ಬಂಧನದಿಂದ ತಪ್ಪಿಸಿಕೊಳ್ಳಲು ತಲೆಮರೆಸಿಕೊಂಡಿದ್ದರು.



ಈ ಅವಧಿಯಲ್ಲಿ ಪಾಲಿಕೆಯಲ್ಲಿ ನಡೆದ ಮೂರು ಪ್ರಮುಖ ಸಭೆಗಳಿಗೆ (ಫೆಬ್ರವರಿ 26, ಮಾರ್ಚ್ 11 ಮತ್ತು ಏಪ್ರಿಲ್ 27) ಸುಗತನ್ ಗ್ೖರ್ು ಹಾ ಜ ರಾ ಗಿ ದ್ ದ್ ರ್ು. ನಿಯಮದ ಪ್ರಕಾರ, ಕೌನ್ಸಿಲರ್ ಒಬ್ಬರು ಸತತವಾಗಿ 3 ಸಭೆಗಳಿಗೆ ಗೈರುಹಾಜರಾದರೆ ಅವರ ಕೌನ್ಸಿಲರ್ ಸದಸ್ಯತ್ವ ರದ್ದಾಗುವ ಸಾಧ್ಯತೆ ಇರುತ್ತದೆ. ಈ ಸದಸ್ಯತ್ವ ರದ್ದತಿಯನ್ನು ತಪ್ಪಿಸಲು ಮತ್ತು ಅವರು ಸಭೆಗೆ ಬಂದಿದ್ದರು ಎಂದು ತೋರಿಸಲು, ಮೇಯರ್ ಕಚೇರಿಯಲ್ಲಿದ್ದ ಹಾಜರಾತಿ ಪುಸ್ತಕದಲ್ಲಿ ಅವರ ನಕಲಿ ಸಹಿ ಹಾಕಲಾಗಿದೆ ಎಂಬುದು ಎಲ್‌ಡಿಎಫ್ ನಾಯಕರ ಪ್ರಮುಖ ಆರೋಪವಾಗಿದೆ.

ದೂರು ದಾಖಲಾದ ಬೆನ್ನಲ್ಲೇ ಪೊಲೀಸರು ಹಾಜರಾತಿ ಪುಸ್ತಕದಲ್ಲಿನ ಸಹಿಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲು ಮತ್ತು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲು ಮುಂದಾಗಿದ್ದಾರೆ. ಮತ್ತೊಂದೆಡೆ, ತಮ್ಮ ಮೇಲಿನ ನಕಲಿ ಸಹಿ ಆರೋಪವನ್ನು ಕೌನ್ಸಿಲರ್ ಆರ್. ಸುಗತನ್ ತಳ್ಳಿಹಾಕಿದ್ದು, ಪೋಲಿಸರ ತನಿಖೆಗೆ ಮತ್ತು ಸಿಸಿಟಿವಿ ತನಿಖೆಗೆ ಸಿದ್ಧರಿರುವುದಾಗಿ ತಿಳಿಸಿದ್ದಾರೆ.

# ಜ್ಞಾನೇಶ್‌ಕುಮಾರ್ ನಿವಾಸದ ಸುತ್ತ ಹೆಚ್ಚಿನ ಭದ್ರತೆ

**ನವದೆಹಲಿ,ಅ.8:** ಚುನಾವಣಾ ಆಯೋಗದ ಎಸ್‌ಐಆರ್ ವಿವಾದ ಹಾಗೂ ಇಂಡಿಯಾ ಮೈತ್ರಿಕೂಟದ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನಿವಾಸದ ಸುತ್ತ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಗಾಗಲೇ ಜ್ಞಾನೇಶ್‌ಕುಮಾರ್ ಅವರು Z-plus ಭದ್ರತಾ ವಲಯದಲ್ಲಿದ್ದಾರೆ. ಆದಾಗ್ಯೂ, ಇತ್ತೀಚಿನ ಗುಪ್ತಚರ ಮಾಹಿತಿಯ ಬೆದರಿಕೆಗಳು ಹಾಗೂ ನವದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಗಮನದಲ್ಲಿಟ್ಟುಕೊಂಡು ಅವರ ನಿವಾಸದ ಹೊರಗೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ ಎಂದು ವರದಿಯಾಗಿದೆ. ಸ್ಥಳೀಯ ಜಿಲ್ಲಾ ಪೊಲೀಸರಿಗೂ ಕೂಡ ಭದ್ರತಾ ಸಿಬ್ಬಂದಿಯ ನಿಯೋಜನೆಯನ್ನು ಹೆಚ್ಚಿಸಲು ಸೂಚಿಸಲಾಗಿದ್ದು, ನವದೆಹಲಿ ಜಿಲ್ಲೆಯಲ್ಲಿ ಈಗಾಗಲೇ ಪ್ರತಿಭಟನೆಗಳು ನಡೆಯುತ್ತಿರುವುದರಿಂದ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು



ಎಲ್ಲಾ ಭದ್ರತಾ ಸಂಸ್ಥೆಗಳು ಪರಸ್ಪರ ನಿಕಟ ಸಮನ್ವಯದಿಂದ ಕೆಲಸ ಮಾಡುವಂತೆ ನಿರ್ದೇಶಿಸಲಾಗಿದೆ.

ಪ್ರಧಾನಮಂತ್ರಿ ಮತ್ತು ಅವರ ಕುಟುಂಬದವರಿಗೆ ನೀಡಲಾಗುವ ಎಸ್‌ಪಿಜಿ ಭದ್ರತೆಯ ನಂತರದ ದೇಶದ ಎರಡನೇ ಅತ್ಯುನ್ನತ ಭದ್ರತಾ ವರ್ಗವಾಗಿರುವ ಜೆಡ್-ಪ್ಲಸ್ ಭದ್ರತೆಯಲ್ಲಿ ಸುಮಾರು 50ಕ್ಕೂ ಹೆಚ್ಚು ಸಿಬ್ಬಂದಿಗಳು ಪಾಳಿಯಲ್ಲಿ ಕಾರ್ಯನಿರ್ವಹಿಸುವುದಲ್ಲದೆ, ರಕ್ಷಿತ ವ್ಯಕ್ತಿಯ ನಿವಾಸ ಮತ್ತು ಬೆಂಗಾವಲು ವಾಹನಗಳಿಗೆ ವಿಶೇಷ ರಕ್ಷಣೆ ಇರುತ್ತದೆ. ಚುನಾವಣಾ ಆಯೋಗದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಇಂಡಿಯಾ ಮೈತ್ರಿಕೂಟದ ನಾಯಕರು ಪ್ರತಿಭಟನೆ ನಡೆಸುತ್ತಿದ್ದು, ಮುಖ್ಯ ಚುನಾವಣಾ ಆಯುಕ್ತರು ರಾಜೀನಾಮೆ ನೀಡಬೇಕೆಂದು ಆಗ್ರಹಿಸುತ್ತಿದ್ದಾರೆ. ಈ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಇತ್ತೀಚಿನ ವರ್ಷಗಳಲ್ಲಿಯೇ ಅತ್ಯಧಿಕ ಅರೆಸೇನಾ ಪಡೆಗಳನ್ನು ನಿಯೋಜಿಸಲಾಗಿದೆ. ಅಕ್ಟೋಬರ್ 8ರಿಂದ 12ರವರೆಗೆ ದೆಹಲಿ ಪೊಲೀಸರ ಸಹಾಯಕ್ಕಾಗಿ ಗೃಹ ಸಚಿವಾಲಯವು 221 ಕೇಂದ್ರ ಅರೆಸೇನಾಪಡೆಗಳ ಕಂಪನಿಗಳನ್ನು ಅಂದರೆ ಸುಮಾರು 23,000 ಸಿಬ್ಬಂದಿಯನ್ನು ಒದಗಿಸಿದೆ. ಜಮ್ಮು ಮತ್ತು ಕಾಶ್ಮೀರ, ಪಶ್ಚಿಮ ಬಂಗಾಳ ಹಾಗೂ ಛತ್ತೀಸ್‌ಗಢದಿಂದ ಸಿಆರ್‌ಪಿಎಫ್ ಕಂಪನಿಗಳನ್ನು ದೆಹಲಿಗೆ ಕರೆತರಲಾಗುತ್ತಿದ್ದು, ಈ ಹೆಚ್ಚುವರಿ ಭದ್ರತಾ ಪಡೆಗಳು ದೆಹಲಿ ಪೊಲೀಸರಿಗೆ ಪ್ರತಿಭಟನೆಗಳನ್ನು ನಿರ್ವಹಿಸಲು, ಪ್ರಮುಖ ಸರ್ಕಾರಿ ಕಟ್ಟಡಗಳನ್ನು ರಕ್ಷಿಸಲು ಮತ್ತು ಕೇಂದ್ರ ದೆಹಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನೆರವಾಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಚುನಾವಣಾ ಆಯೋಗವು ದೇಶದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮತ್ತು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ಖಾತರಿಪಡಿಸುವ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆ. ಸಂವಿಧಾನದ 324ನೇ ವಿಧಿಯಡಿ ಸಂಪೂರ್ಣ ಸ್ವಾಯತ್ತತೆಯೊಂದಿಗೆ ಕಾರ್ಯನಿರ್ವಹಿಸಲು ರೂಪಿಸಲಾದ ಈ ಆಯೋಗದ ಮುಖ್ಯಸ್ಥರ ಮೇಲೆ ಇಂದು ಅಂತಹ ತೀವ್ರ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಅತ್ಯಂತ ಗಂಭೀರ ಬೆಳವಣಿಗೆ. ಜತೆಗೆ ಕೇಂದ್ರ ಸರ್ಕಾರದ ಈ ಕ್ರಮ, ವಿರೋಧ ಪಕ್ಷಗಳ ಹಾಗೂ ಯುವಜನತೆಯ ಆಕ್ರೋಶಕ್ಕೆ ಸಣ್ಣಗೆ ನಡುಗುತ್ತಿದೆ ಎಂಬುದನ್ನು ತೋರಿಸುತ್ತದೆ, ಹಾಗಾಗಿಯೇ ಭದ್ರತೆಯನ್ನು ಹೆಚ್ಚಿಸಿಕೊಂಡಿದ್ದಾರೆ ಎಂಬ ಸಾರ್ವಜನಿಕ ಟೀಕೆಗೂ ಗುರಿಯಾಗುತ್ತಿದೆ.

### ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಟ ಮಾಡಲು ಸಿಜೆಪಿ ನಾಯಕ ಅಭಿಜಿತ್ ದೀಪ್ಕೆ ಕರೆ

# ಎಸ್‌ಐಆರ್ ವಿರುದ್ಧ ತೀವ್ರಗೊಂಡ ಹೋರಾಟ: ಪ್ರಜಾಪ್ರಭುತ್ವದ ಸಾವಿಗೆ ಮೋದಿ ಕಾರಣ

**ಬೆಂಗಳೂರು, ಅ.8:** ಪ್ರಧಾನಿ ವೋಟ್ ಚೋರ್ (ಮತ ಕಳ್ಳ). ಮತಗಳನ್ನು ಅಳಿಸಿ ಪ್ರಧಾನಿಯಾಗಿದ್ದಾರೆ. ಮತಗಳನ್ನು ಅಳಿಸುವ ಮೂಲಕ ದೇಶದ ಪ್ರಜಾಪ್ರಭುತ್ವದ ಸಾವಿಗೆ ಕಾರಣರಾಗಿದ್ದಾರೆ. ಇದರ ಹಂತಕ ನರೇಂದ್ರ ಮೋದಿ. ದೇಶದಲ್ಲಿ ಮತದಾನದ ಹಕ್ಕು ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ನಿಟ್ಟಿನಲ್ಲಿ ಜನರು ಎಚ್ಚೆತ್ತುಕೊಂಡು ಹೋರಾಟಕ್ಕೆ ಮುಂದಾಗಬೇಕು ಎಂದು ಸಾಮಾಜಿಕ ಹೋರಾಟಗಾರ, ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನಾಯಕ ಅಭಿಜೀತ್ ದೀಪ್ಕೆ ಕರೆ ನೀಡಿದರು.

ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, ಮತದಾರರ ಪಟ್ಟಿಯಿಂದ ಮತಗಳನ್ನು ಅಳಿಸುವ ಪ್ರಕ್ರಿಯೆ ದೇಶದಾದ್ಯಂತ ನಡೆಯುತ್ತಿದೆ. ಇದರ ಹಿಂದೆ ರಾಜಕೀಯ ಉದ್ದೇಶವಿದೆ. ಯಾರು ಅವರಿಗೆ ಮತ ಹಾಕುವುದಿಲ್ಲವೋ ಅವರ ಮತಗಳನ್ನು ತೆಗೆದುಹಾಕುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು.

ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಜವಾಹರಲಾಲ್ ನೆಹರು ಅವರ ಕೊಡುಗೆಗಳನ್ನು ಸ್ಮರಿಸಿದ ದೀಪ್ಕೆ, ಗಾಂಧಿ ದೇಶದ ಆತ್ಮ, ಬಾಬಾಸಾಹೇಬರು ದೇಶದ ಬೆನ್ನೆಲುಬು, ನೆಹರು ದೇಶದ ಮನಸ್ಸು ಎಂದು ಬಣ್ಣಿಸಿದರು.

ಸ್ವಾತಂತ್ರ್ಯನಂತರ ದೇಶದ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡಿದ ಸಂವಿಧಾನಾತ್ಮಕ ವ್ಯವಸ್ಥೆಯನ್ನು ಉಲ್ಲೇಖಿಸಿದ ಅವರು, ಇಂದು ಅದೇ ಮತದಾನದ ಹಕ್ಕನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ವೋಟ್ ಚೋರ್, ಗದ್ದಿ ಛೋಡ್ ಎಂಬ ಘೋಷಣೆ ಮೊಳಗಿತು.



## ಒಂದು ದೇಶ, ಒಂದು ಪಕ್ಷ ಉದ್ದೇಶವಷ್ಟೇ

ಒಂದು ದೇಶ, ಒಂದು ಚುನಾವಣೆ ವಿಚಾರವನ್ನು ಪ್ರಸ್ತಾಪಿಸಿದ ಅಭಿಜೀತ್ ದೀಪ್ಕೆ, ಒಂದು ದೇಶ, ಒಂದು ಚುನಾವಣೆ ಎಂಬುದು ಕೇವಲ ಘೋಷಣೆಯಲ್ಲ. ಅದರ ಹಿಂದೆ ಒಂದು ದೇಶ, ಒಂದು ಪಕ್ಷ ಎಂಬ ಉದ್ದೇಶವಿದೆ. ಇದೇ ವೇಳೆ ಹಿಟ್ಲರ್‌ನ ರಾಜಕೀಯ ಮಾದರಿಯೊಂದಿಗೆ ಕೇಂದ್ರ ಸರ್ಕಾರದ ಆಡಳಿತ ಮಾದರಿಯನ್ನು ಹೋಲಿಕೆ ಮಾಡಿದರು. ಮೋದಿ ಸರ್ಕಾರ ಇತಿಹಾಸದಿಂದ ಪಾಠ ಕಲಿಯಬೇಕು. ಪ್ರಾದೇಶಿಕ ನಾಯಕರನ್ನು ದುರ್ಬಲಗೊಳಿಸುವುದು ಮತ್ತು ಸಂಸ್ಥೆಗಳನ್ನು ಹಾಳು ಮಾಡುವುದು ಇವರ ಉದ್ದೇಶ. ಮತ ಉಳಿದರೆ ದೇಶ ಉಳಿಯುವುದು, ಮತವೇ ಹೋದರೆ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ರಸ್ತೆಗಿಳಿಯಬೇಕಾಗುತ್ತದೆ. ಈಗ ರಸ್ತೆಗಳು ನಮ್ಮವು. ಇದೇ ರಸ್ತೆಗಳಿಂದ ನಮ್ಮ ಪ್ರಜಾಪ್ರಭುತ್ವವನ್ನು ಮರಳಿ ಪಡೆಯುತ್ತೇವೆ. ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

## ಪ್ರಜೆಗಳ ಘನತೆಗೆ ಮಾಡಿದ ಘೋರ ಅಪಮಾನ: ನಟ ಪ್ರಕಾಶ್‌ರಾಜ್

ಪ್ರಜಾಪ್ರಭುತ್ವದಲ್ಲಿ ಐದು ವರ್ಷಕ್ಕೊಮ್ಮೆ ಬರುವ ರಾಜಕಾರಣಿಗಳು ಮತದಾರರ ಕಾಲಿಗೆ ಬಿದ್ದು ಮತ ಕೇಳುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿ ಬದಲಾಗಿದ್ದು, ಪ್ರಜೆಗಳು ತಮ್ಮ ಮತವನ್ನು ವಾಪಸ್ ಪಡೆಯಲು ಅಧಿಕಾರಿಗಳ ಕಚೇರಿ ಮುಂದೆ ಸಾಲಿನಲ್ಲಿ ನಿಲ್ಲುವಂತಾಗಿದೆ. ದೇಶದಲ್ಲಿ ಯಾರಿಗೆ ಮತದಾನದ ಹಕ್ಕಿರಬೇಕು ಎಂಬುದನ್ನು ಜನ ನಿರ್ಧರಿಸಬೇಕೇ ವಿನಃ, ಅಧಿಕಾರದಲ್ಲಿರುವವರಲ್ಲ ಎಂದು ನಟ ಪ್ರಕಾಶ್ ರಾಜ್ ಹೇಳಿದರು. ಪ್ರಜಾಪ್ರಭುತ್ವದ ಮೂಲಭೂತ ಹಕ್ಕಾದ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದ್ದು, ಇದು ಪ್ರತಿಯೊಬ್ಬ ಪ್ರಜೆಯ ಗೌರವಕ್ಕೆ ಎಸಗಿದ ಘೋರ ಅಪಮಾನ. ಮತ ಕಳೆದುಕೊಂಡಿರುವುದು ಬರಿ 13 ಕೋಟಿ ಸಂಖ್ಯೆಯಲ್ಲ; ಬದಲಿಗೆ ಪ್ರತಿಯೊಬ್ಬ ಸಂತ್ರಸ್ತ ಪ್ರಜೆಯ ಬದುಕಿನ ಕಣ್ಣೀರಿನ ಕಥೆಯಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಕೃತ್ಯದ ಹಿಂದೆ ವ್ಯವಸ್ಥಿತ ಸಂಚಿದ್ದು, ದೇಶದ ಪ್ರಜೆಗಳನ್ನು ನೇರವಾಗಿ ಕೊಲ್ಲಲು ಸಾಧ್ಯವಾಗದ ಕಾರಣ ಮತಪಟ್ಟಿಯಿಂದ ಅವರ ಹೆಸರುಗಳನ್ನು ತೆಗೆದುಹಾಕಲಾಗುತ್ತಿದೆ. ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ಸ್ವಚ್ಛಗೊಳಿಸುವ ನೆಪದಲ್ಲಿ ಪ್ರಜೆಗಳನ್ನೇ ಪ್ರಜಾಪ್ರಭುತ್ವದಿಂದ ಹೊರಹಾಕಲು ಹೊರಟಿದೆ. ಜ್ಞಾನೇಶ್ ಕುಮಾರ್ ರಾಜೀನಾಮೆ ಒಂದೇ ಈ ಸಮಸ್ಯೆಗೆ ಪರಿಹಾರವಲ್ಲ. ಒಬ್ಬರು ಹೋದರೆ ಮತ್ತೊಬ್ಬರು ಬರುತ್ತಾರೆ. ಆದ್ದರಿಂದ ಸಂಪೂರ್ಣ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

## ದೇಶದ ಬೆನ್ನೆಲುಬು ಮುರಿಯಲು ಅವಕಾಶ ನೀಡಲ್ಲ: ಎಐಎಸ್‌ಎಫ್ ನಾಯಕಿ ಆಯಿಷಾ ಘೋಷ್

ಪ್ರಸ್ತುತ ದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರಿತಿದ್ದೇವೆ. ದೇಶದ ಬೆನ್ನೆಲುಬನ್ನು ಮುರಿಯಲು ಮತ್ತು ಪ್ರಜಾಪ್ರಭುತ್ವದ ಹಕ್ಕುಗಳನ್ನು ಕಿತ್ತುಕೊಳ್ಳಲು ಸರ್ಕಾರ ಯತ್ನಿಸುತ್ತಿದ್ದು, ಇದನ್ನು ಸಹಿಸುವುದಿಲ್ಲ ಎಐಎಸ್‌ಎಫ್ ನಾಯಕಿ ಆಯಿಷಾ ಘೋಷ್ ಆಕ್ರೋಶ ಹೊರಹಾಕಿದರು. ಬೆಂಗಳೂರಿನಲ್ಲಿ ಆಯೋಜಿಸಿದ್ದ ಜನತಾ ನ್ಯಾಯಾಲಯ ಕಾರ್ಯಕ್ರಮದಲ್ಲಿ ಮಾತನಾಡಿ, ಜನರ ಮತಗಳನ್ನು ಕಸಿಯುವ ಹುನ್ನಾರ ನಡೆಯುತ್ತಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರೇ, ನಿಮ್ಮ ಹಸಿಸುಳ್ಳುಗಳು ಮತ್ತು ನಿಯಮಬಾಹಿರ ನಡವಳಿಕೆಗಳ ವಿರುದ್ಧ ನಿಮ್ಮನ್ನೇ ಗುರಿಯಾಗಿಸಿ ಬಂದಿದ್ದೇವೆ.

ಹೋರಾಟಗಾರರನ್ನು ಮತ್ತು ಪ್ರತಿಭಟನಾನಿರತರನ್ನು ಬಂಧಿಸಿ, ಅವರ ಮನೋಬಲ ಹಾಗೂ ಹೋರಾಟದ ಕಿಚ್ಚನ್ನು ಕುಗ್ಗಿಸಲು ಆಡಳಿತಾರೂಢ ಸರ್ಕಾರ ನಿರಂತರವಾಗಿ ಯತ್ನಿಸುತ್ತಿದೆ. ಆದರೆ, ಎಷ್ಟೇ ಬಂಧನಗಳು ಎದುರಾದರೂ ನಮ್ಮ ಹೋರಾಟದ ಉತ್ಸಾಹ ಹಾಗೂ ಆತ್ಮಸ್ಥೈರ್ಯವನ್ನು ಹಾಳುಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

---

# ಇಎಸ್‌ಐ ಆಸ್ಪತ್ರೆಗಳ ಸಹಸ್ರಾರು ನೌಕರರು, ವೈದ್ಯರಿಗೆ ಸೆಪ್ಟೆಂಬರ್ ವೇತನ ಪಾವತಿಯಾಗದೇ ತೊಂದರೆ: ಇ.ಎಸ್.ಐ ಸೊಸೈಟಿಯಾದ ನಂತರ ಸಮಸ್ಯೆ ಉಲ್ಬಣ

**ಬೆಂಗಳೂರು,ಅ.8:** ರಾಜ್ಯಾದ್ಯಂತ ಇಎಸ್‌ಐ ಔಷಧಾಲಯಗಳು ಮತ್ತು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಸ್ರಾರು ನೌಕರರು ಮತ್ತು ವೈದ್ಯರಿಗೆ ಸೆಪ್ಟೆಂಬರ್ ತಿಂಗಳ ವೇತನ ಇನ್ನೂ ಪಾವತಿಯಾಗಿಲ್ಲ. ಸಾಮಾನ್ಯವಾಗಿ ತಿಂಗಳ ಕೊನೆಯ ಕೆಲಸದ ದಿನದಂದು ಸಂಬಳ ದೊರೆಯುತ್ತಿತ್ತು. ಆದರೆ ಈ ಬಾರಿ ವೇತನ ಯಾವಾಗ ಸಿಗಲಿದೆ ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಇವರ ವೇತನ ವಿಳಂಬವಾಗುತ್ತಿ ರುವುದು ಇದೇ ಮೊದಲ ಬಾರಿಯಲ್ಲ. ಇದೇ ರೀತಿಯ ವೇತನ ಪಾವತಿ ವಿಳಂಬದಿಂದಾಗಿ ಕಳೆದ ಮಾರ್ಚ್‌ನಲ್ಲಿಯೂ ನೌಕರರು ಸಾಕಷ್ಟು ತೊಂದರೆ ಎದುರಿಸಿದ್ದರು. ಇ.ಎಸ್.ಐ ಸೊಸೈಟಿಯಾದ ನಂತರ ಸಮಸ್ಯೆ ಉಲ್ಬಣಗೊಂಡಿದೆ.

125 ಔಷಧಾಲಯಗಳು ಮತ್ತು ಏಳು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1,000ಕ್ಕೂ ಹೆಚ್ಚು ನೌಕರರು ಹಾಗೂ ವೈದ್ಯರಿಗೆ ಎಂಟು ದಿನಗಳು ಕಳೆದರೂ ವೇತನ ಪಾವತಿಯಾಗಿಲ್ಲ. ಬೆಂಗಳೂರಿನ ಇಂದಿರಾನಗರ, ಮೈಸೂರು, ದಾವಣಗೆರೆ ಮತ್ತು ಬೆಳಗಾವಿಯಲ್ಲಿರುವ ಇಎಸ್‌ಐ ಆಸ್ಪತ್ರೆಗಳಲ್ಲಿಯೂ, ಹಾಗೆಯೇ ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಬೆಳಗಾವಿ ಮತ್ತು ಮಂಗ ಳೂರಿನ ಇಎಸ್‌ಐ ಔಷಧಾಲಯ ಗಳಲ್ಲಿಯೂ ನೌಕರರು ಮತ್ತು ವೈದ್ಯರಿಗೆ ವೇತನ ಪಾವತಿಯಾಗಿಲ್ಲ.

ಇ.ಎಸ್.ಐ.ಎಂ.ಎಸ್ ಔಷಧಾಲಯಗಳ ಉದ್ಯೋಗಗಳ ಕಲ್ಯಾಣ ಸಂಘದ ಅಧ್ಯಕ್ಷ ಪ್ರದೀಪ್ ಕೆ. ಮಾತನಾಡಿ, ಕರ್ನಾಟಕ ಇಎಸ್‌ಐ ಸೊಸೈಟಿ ರಚನೆಯಾದ ನಂತರದಿಂದ ನೌಕರರು ಮತ್ತು ವೈದ್ಯರು ವೇತನ ಸೇರಿದಂತೆ ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಣಕಾಸು ಇಲಾಖೆಯಿಂದ ಇಲಾಖೆಗೆ ಅಗತ್ಯ ಹಣವನ್ನು ಬಿಡುಗಡೆ ಮಾಡದಿರುವುದರಿಂದ ವೇತನ ಸಮಯಕ್ಕೆ ಸರಿಯಾಗಿ ಪಾವತಿ ಯಾಗುತ್ತಿಲ್ಲ ಎಂದು ಅವರು ತಿಳಿಸಿದರು.

ನೌಕರರು ತಮ್ಮ ವೇತನವನ್ನು ಸಮಯಕ್ಕೆ ಸರಿಯಾಗಿ ಪಡೆಯಲು ಸೊಸೈಟಿಯಿಂದ ಬರುವ ಹಣವನ್ನು



ಅವಲಂಬಿಸಬೇಕಾಗಿದೆ. ಆದ್ದರಿಂದ ಸಚಿವರು ಹಾಗೂ ಉನ್ನತ ಅಧಿಕಾರಿಗಳು ಈ ಸಮಸ್ಯೆ ಮತ್ತು ಇತರ ಸೇವಾ ಸಂಬಂಧಿತ ಸಮಸ್ಯೆಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ಪರಿಶೀಲಿಸಿ ಪರಿಹರಿಸಬೇಕು" ಎಂದರು.

ಇ.ಎಸ್.ಐ ಅಧಿಕಾರಿಗಳು ಮತ್ತು ನೌಕರರ ಸಂಘದ ಅಧ್ಯಕ್ಷ ಡಾ. ಮಳೆಗೌಡ ಮಾತನಾಡಿ, ಅಧಿಕಾರಿಗಳಿಗೆ ತಿಳಿದಿರುವ ಕಾರಣಗಳಿಂದಾಗಿ ಅನೇಕ ನೌಕರರು ಮತ್ತು ವೈದ್ಯರಿಗೆ ಸೆಪ್ಟೆಂಬರ್ ತಿಂಗಳ ವೇತನ ಇನ್ನೂ ದೊರೆತಿಲ್ಲ ಎಂದು ಹೇಳಿದರು.

ವೇತನ ಪಾವತಿ ವಿಳಂಬ ಹಾಗೂ ಸೇವಾ ಸಂಬಂಧಿತ ಸಮಸ್ಯೆಗಳ ಕುರಿತು ಮುಖ್ಯ ಕಾರ್ಯದರ್ಶಿ ಸೇರಿದಂತೆ ಉನ್ನತ ಅಧಿಕಾರಿಗಳಿಗೆ ಈಗಾಗಲೇ ಮಾಹಿತಿ ನೀಡಿದ್ದೇವೆ. ವೇತನ ವಿಳಂಬವಾಗುತ್ತಿರುವುದು ಎರಡನೇ ಬಾರಿ. ಸಮಸ್ಯೆಗಳನ್ನು ಪರಿಹರಿಸಿ ಸಮಯಕ್ಕೆ ಸರಿಯಾಗಿ ವೇತನ ಪಾವತಿಯಾಗುವಂತೆ ಮಾಡಲು ಸಂಬಂಧಪಟ್ಟ ಅಧಿಕಾರಿ ಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ ಎಂದು ಡಾ. ಮಳೆಗೌಡ ಹೇಳಿದರು.

ಇ.ಎಸ್.ಐ.ಎಂ.ಎಸ್ ಔಷಧಾಲಯಗಳ ಉದ್ಯೋಗಗಳ ಕಲ್ಯಾಣ ಸಂಘದಿಂದ ಅಕ್ಟೋಬರ್ 5ರಂದು ಕಾರ್ಮಿಕ ಸಚಿವರಿಗೆ ಬರೆದ ಪತ್ರದಲ್ಲಿ, ಕರ್ನಾಟಕ ಉದ್ಯೋಗಿಗಳ ರಾಜ್ಯ ವಿಮಾ ಸೊಸೈಟಿ ರಚನೆಯಾಗುವ ಮೊದಲು ರಾಜ್ಯ ಸರ್ಕಾರವು ಇ.ಎಸ್.ಐ.ಎಂ.ಎಸ್ ಇಲಾಖೆಗೆ ಪ್ರತಿವರ್ಷ ಬಜೆಟ್ ಅನುದಾನವನ್ನು ನೀಡುತ್ತಿತ್ತು. ಈ ಅನುದಾನದಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನ ಹಾಗೂ ಇತರ ಆಡಳಿತಾತ್ಮಕ ವೆಚ್ಚಗಳನ್ನು ನಿಯಮಿತವಾಗಿ ಪಾವತಿಸಲಾಗುತ್ತಿತ್ತು ಎಂದು ತಿಳಿಸಿದೆ.

ಆದರೆ, ಸೊಸೈಟಿ ರಚನೆಯಾದ ನಂತರ, 2026–27ನೇ ಹಣಕಾಸು ವರ್ಷದಿಂದ ಹಣಕಾಸು ಇಲಾಖೆಯು ಇ.ಎಸ್.ಐ.ಎಂ.ಎಸ್ ಇಲಾಖೆಗೆ ನೀಡುತ್ತಿದ್ದ ವಾರ್ಷಿಕ ಬಜೆಟ್ ಅನುದಾನವನ್ನು ಸ್ಥಗಿತಗೊಳಿಸಿದೆ. ಸೊಸೈಟಿಯಿಂದ ಸ್ವೀಕರಿಸುವ ಹಣ ಹಾಗೂ ಇ.ಎಸ್.ಐ.ಎಂ.ಎಸ್ ಇಲಾಖೆಯ ಶಾಶ್ವತ ರಾಜ್ಯ ಸರ್ಕಾರಿ ನೌಕರರ ವೇತನ ಪಾವತಿಗೆ ಅಗತ್ಯವಿರುವ ಹಣವನ್ನು ಕಾರ್ಪೊರೇಷನ್‌ನಿಂದ ಹಣ ಬಂದ ನಂತರವಷ್ಟೇ ಬಿಡುಗಡೆ ಮಾಡಲಾಗುತ್ತಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಇಎಸ್‌ಐ ಯೋಜನೆಯ ಆಡಳಿತ ಮತ್ತು ಕಾರ್ಯನಿರ್ವಹಣೆಗಾಗಿ ಸೊಸೈಟಿಯು ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದೆ. ಅಂತಹ ಗುತ್ತಿಗೆ ನೌಕರರ ವೇತನವನ್ನು ಸಮಯಕ್ಕೆ ಸರಿಯಾಗಿ ಪಾವತಿಸಲಾಗುತ್ತಿದೆ. ಇದಕ್ಕೆ ವಿರುದ್ಧವಾಗಿ, ಇ.ಎಸ್.ಐ.ಎಂ.ಎಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ಶಾಶ್ವತ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಸ್ತುತ ಹಣಕಾಸು ವ್ಯವಸ್ಥೆಯಿಂದಾಗಿ ಪ್ರತಿ ತಿಂಗಳ ವೇತನ ಪಾವತಿಯಲ್ಲಿ ಪದೇಪದೇ ವಿಳಂಬವಾಗುತ್ತಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಈ ನಡುವೆ, ಕಾರ್ಮಿಕ ಇಲಾಖೆಯ ಕಾರ್ಯದರ್ಶಿ (ಪ್ರಭಾರ) ಸಲ್ಮಾ ಕೆ. ಫಹೀಮ್ ಅವರು ಇಎಸ್‌ಐ ಔಷಧಾಲಯಗಳು ಮತ್ತು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ವೈದ್ಯರಿಗೆ ವೇತನ ಪಾವತಿಗೆ ಹಣದ ಕೊರತೆಯಿಲ್ಲ ಎಂದು ತಿಳಿಸಿದ್ದಾರೆ. ವೇತನ ಪಾವತಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಇ.ಎಸ್.ಐ.ಎಂ.ಎಸ್ ವೈದ್ಯಕೀಯ ಸೇವೆಗಳ ಆಯುಕ್ತರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಅವರು ಹೇಳಿದ್ದಾರೆ.



ಮೈಸೂರಿನಲ್ಲಿ ಗುರುವಾರ ಜಂಬೂಸವಾರಿ ತಾಲೀಮು ಮೆರವಣಿಗೆ ವೇಳೆ ಕಾಣಿಸಿಕೊಂಡ ದಸರಾ ಆನೆಗಳು

---

## ಕಾಳೇನ ಅಗ್ರಹಾರ–ತಾವರೆಕೆರೆ ಎಲಿವೇಟೆಡ್ ಮೆಟ್ರೋ ಗುಲಾಬಿ ಮಾರ್ಗದಲ್ಲಿ ಸುರಕ್ಷತಾ ತಪಾಸಣೆ ಪೂರ್ಣ

**ಬೆಂಗಳೂರು, ಅ.8:** ನಮ್ಮ ಮೆಟ್ರೋದ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿಮೀ ಉದ್ದದ ಎಲಿವೇಟೆಡ್ ಗುಲಾಬಿ ಮಾರ್ಗದಲ್ಲಿ ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತ (ಸಿಎಂಆರ್‌ಎಸ್)ವಿ ವೆಂಕಟ ಸುಬ್ರಮಣಿಯನ್ ಮೂರು ದಿನಗಳ ಸುರಕ್ಷತಾ ತಪಾಸಣೆಯನ್ನು ಪೂರ್ಣಗೊಳಿಸಿದ್ದಾರೆ.

ಈ ಮಾರ್ಗದಲ್ಲಿ ಪ್ರಯಾಣಿಕರಿಗೆ ಸೇವೆಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಈ ಸುರಕ್ಷತಾ ತಪಾಸಣೆಯು ಅಕ್ಟೋಬರ್ 6ರಿಂದ 8ರವರೆಗೆ ನಡೆಯಿತು. ಈ ಮಾರ್ಗವು ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆಪಿ ನಗರ 4ನೇ ಹಂತ, ಜಯದೇವ ಆಸ್ಪತ್ರೆ ಮತ್ತು ತಾವರೆಕೆರೆ ಸೇರಿದಂತೆ ಒಟ್ಟು ಆರು ನಿಲ್ದಾಣಗಳನ್ನು ಒಳಗೊಂಡಿದೆ.ಅಕ್ಟೋಬರ್ 6ರಂದು ಸಿಎಂಆರ್‌ಎಸ್ ಮತ್ತು ಅವರ ತಂಡವು ಮುಖ್ಯ ಮಾರ್ಗ ಹಾಗೂ ಸಂಬಂಧಿತ ಮೂಲಸೌಕರ್ಯಗಳನ್ನು ಮೋಟಾರ್ ಟ್ರಾಲಿ ಮೂಲಕ ಪರಿಶೀಲಿಸಿತು.

ಅಕ್ಟೋಬರ್ 7ರಂದು ಮೋಟಾರ್ ಟ್ರಾಲಿ ತಪಾಸಣೆ ಜೊತೆಗೆ ಕೊತ್ತನೂರು ಡಿಪೋದ ಸೌಲಭ್ಯಗಳನ್ನು ಪರಿಶೀಲಿಸಿ, ಮುಖ್ಯ ಮಾರ್ಗದಲ್ಲಿ ಮೆಟ್ರೋ ರೈಲುಗಳ ಪ್ರಾಯೋಗಿಕ ಸಂಚಾರ ಮತ್ತು ವಿವಿಧ ಪರೀಕ್ಷೆಗಳನ್ನು



ನಡೆಸಿತು. ಅಕ್ಟೋಬರ್ 8ರಂದು ಬೈಯಪ್ಪನಹಳ್ಳಿಯಲ್ಲಿರುವ ಕಾರ್ಯಾಚರಣೆ ನಿಯಂತ್ರಣ ಕೇಂದ್ರವನ್ನು ಪರಿಶೀಲಿಸುವ ಮೂಲಕ ಮೂರು ದಿನಗಳ ತಪಾಸಣೆಯನ್ನು ಪೂರ್ಣಗೊಳಿಸಲಾಯಿತು.

ಬಿಎಂಆರ್‌ಸಿಎಲ್ 2026ರ ಆಗಸ್ಟ್‌ನಲ್ಲಿ ಸಂಶೋಧನಾ ವಿನ್ಯಾಸ ಮತ್ತು ಮಾನದಂಡಗಳ ಸಂಸ್ಥೆಯಿಂದ ವೇಗ ಪ್ರಮಾಣಪತ್ರವನ್ನು ಪಡೆದಿದೆ. ನಂತರ ರೈಲ್ವೆ ಮಂಡಳಿಯಿಂದ ಮೆಟ್ರೋ ರೈಲು ಬೋಗಿಗಳಿಗೆ ತಾತ್ಕಾಲಿಕ ಅನುಮೋದನೆ ಹಾಗೂ ಸಿಗ್ನಲಿಂಗ್ ವ್ಯವಸ್ಥೆಗೆ ಸ್ವತಂತ್ರ ಸುರಕ್ಷತಾ ಮೌಲ್ಯಮಾಪಕರಿಂದ (15ಸಿ) ಸುರಕ್ಷತಾ ಪ್ರಮಾಣೀಕರಣವನ್ನು ಪಡೆಯಲಾಗಿದೆ.ಸಾರ್ವಜನಿಕರ ಸಂಚಾರಕ್ಕೆ ಈ ಮಾರ್ಗವನ್ನು ಮುಕ್ತಗೊಳಿಸುವ ಮೊದಲು ಸಿಎಂಆರ್‌ಎಸ್ ನಡೆಸುವ ತಪಾಸಣೆಯು ಮುಖ್ಯವಾಗಿದೆ.

ತಪಾಸಣೆಯ ಸಂದರ್ಭದಲ್ಲಿ ಸಿಎಂಆರ್‌ಎಸ್ ಸೂಚಿಸಿರುವ ಅಂಶಗಳು ಹಾಗೂ ಷರತ್ತುಗಳನ್ನು ಪಾಲಿಸಿದ ನಂತರವೇ ಪ್ರಯಾಣಿಕರ ಸಂಚಾರಕ್ಕೆ ಅನುಮೋದನೆ ನೀಡಲಾಗುತ್ತದೆ.

ಈ ಎಲಿವೇಟೆಡ್ ಗುಲಾಬಿ ಮಾರ್ಗವು ಸಾರ್ವಜನಿಕ ಸೇವೆಗೆ ಮುಕ್ತಗೊಂಡ ನಂತರ, ನಮ್ಮ ಮೆಟ್ರೋದ ಸದ್ಯದ ಕಾರ್ಯಾಚರಣೆಯಲ್ಲಿರುವ 96.10 ಕಿಮೀ ಮಾರ್ಗದ ಉದ್ದವು 103.6 ಕಿಮೀಗೆ ವಿಸ್ತರಣೆಯಾಗಲಿದೆ. ಇದರಿಂದ ಬನ್ನೇರುಘಟ್ಟ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಮೆಟ್ರೋ ಸಂಪರ್ಕ ಮತ್ತಷ್ಟು ಸುಧಾರಿಸಲಿದ್ದು, ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಹೆಚ್ಚಿನ ಬಲ ದೊರೆಯಲಿದೆ.

---

## ಗ್ರಾಮೀಣ ಮಕ್ಕಳಿಗೆ ಉಚಿತ ಕಲಾ ಶಿಕ್ಷಣ: ಈಶ್ವರಖಂಡ್ರೆ ಎನ್‌ಜಿಎಂಎ-ಆರ್‌ಡಿಪಿಆರ್. ನಡುವೆ ಒಡಂಬಡಿಕೆಗೆ ಸಹಿ

**ಬೆಂಗಳೂರು, ಅ.8:** ಗ್ರಾಮೀಣ ಮಕ್ಕಳಲ್ಲಿ ಸೃಜನಶೀಲತೆ ಬೆಳೆಸಲು ಹಾಗೂ ಕಲಾ ರಂಗದಲ್ಲಿ ಔನ್ನತ್ಯ ಸಾಧಿಸಲು ಅನುವಾಗುವಂತೆ ಗ್ರಾಮ ಪಂಚಾಯತಿಗಳ ಗಂಥಾಲಯಗಳಲ್ಲಿ ಉಚಿತವಾಗಿ ಆಧುನಿಕ ಕಲಾ ಶಿಕ್ಷಣ ನೀಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಬೆಂಗಳೂರಿನ ರಾಷ್ಟ್ರೀಯ ಆಧುನಿಕ ಕಲಾ ಗ್ಯಾಲರಿ (ಎನ್.ಜಿ.ಎಂ.ಎ) ನಡುವೆ ನಡೆದ ಒಡಂಬಡಿಕೆ ವಿನಿಮಯಕ್ಕೆ ಸಾಕ್ಷಿಯಾಗಿ ಮಾತನಾಡಿದ ಅವರು, ಗ್ರಾಮ ಪಂಚಾಯತಿ ಗ್ರಂಥಾಲಯ ಅರಿವು ಕೇಂದ್ರಕ್ಕೆ ಬರುವ ಮಕ್ಕಳಿಗೆ ಆಧುನಿಕ ಕಲೆಯ ಪರಿಚಯ ಮಾಡಿಸಲಾಗುವುದು. ಇಂಡಿಯಾ ಫೌಂಡೇಷನ್ ಫಾರ್ ಆರ್ಟ್ಸ್ (ಐ.ಎಫ್.ಎ) ಆಧುನಿಕ ಕಲಾ ಶಿಕ್ಷಣ ಕಲಿಕೆಗೆ ಅಗತ್ಯವಾದ ಪಠ್ಯಕ್ರಮ ಅಭಿವೃದ್ಧಿ ಪಡಿಸುತ್ತದೆ ಮತ್ತು ಸಾಮರ್ಥ್ಯವರ್ಧನೆ ಹಾಗೂ ಕಾರ್ಯಕ್ರಮದ ಅನುಷ್ಠಾನಕ್ಕೆ ಬೆಂಬಲ ನೀಡಲಿದೆ. ರಿ ರಿತಿ ಸಂಸ್ಥೆ ಸ್ವತಂತ್ರ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯನ್ನು ಕೈಗೊಳ್ಳಲಿದೆ ಎಂದು ವಿವರಿಸಿದರು.

## ಭ್ರಷ್ಟಾಚಾರ ಮಾಡಿ, ಆದರೆ ಸಿಕ್ಕಿಬೀಳಬೇಡಿ ಎಂಬ ಸಿಎಂ ಹೇಳಿಕೆ ಖಂಡನೀಯ: ರವಿಕುಮಾರ್ ಕಿಡಿ

**ಬೆಂಗಳೂರು, ಅ.8:** ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳಿ, ಆದರೆ ಸಿಕ್ಕಿಬೀಳದಂತೆ ಎಚ್ಚರಿಕೆ ವಹಿಸಿ ಎಂಬ ರೀತಿ ಸಚಿವರಿಗೆ ಸಂದೇಶ ನೀಡಿರುವುದು ಅತ್ಯಂತ ಖಂಡನೀಯ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ಮುಖ್ಯ ಸಚೇತಕ ಎನ್. ರವಿ ಕುಮಾರ್ ಹೇಳಿದ್ದಾರೆ.

ಸರ್ಕಾರದ ಮುಖ್ಯಸ್ಥರಾಗಿ ನೀವು ನಿಮ್ಮ ಸಚಿವರಿಗೆ ಸಾರ್ವಜನಿಕ ಜೀವನದಲ್ಲಿ ಅತ್ಯುನ್ನತ ನೈತಿಕ ಹಾಗೂ ಪ್ರಾಮಾಣಿಕತೆಯ ಮಾನದಂಡಗಳನ್ನು ಕಾಪಾಡಿ ಕೊಳ್ಳುವಂತೆ ಸೂಚಿಸಬೇಕಿತ್ತು. ಆದರೆ, ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳಿ, ಸಿಕ್ಕಿಬೀಳದಂತೆ ಎಚ್ಚರಿಕೆ ವಹಿಸಿ ಎಂಬ ಸಂದೇಶ ನೀಡಿರುವುದು ಅಸಹ್ಯಕರ ಹಾಗೂ ತೀವ್ರವಾಗಿ ಖಂಡನೀಯ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ಈ ಹೇಳಿಕೆಯು ಅವರ ಸರ್ಕಾರದಲ್ಲಿ ಭ್ರಷ್ಟಾಚಾರ ಆಳವಾಗಿ ಬೇರೂರಿದೆ ಎಂಬುದಕ್ಕೆ ಸ್ಪಷ್ಟ ಹಾಗೂ ವಿಶ್ವಾಸಾರ್ಹ ಸಾಕ್ಷಿಯಾಗಿದೆ ಎಂದು ರವಿ ಕುಮಾರ್ ಆರೋಪಿಸಿದ್ದಾರೆ.

ಮುಖ್ಯಮಂತ್ರಿಗಳ ಈ ಹೇಳಿಕೆ ಸಚಿವರು ಹಾಗೂ ಅಧಿಕಾರಿಗಳಿಗೆ ಯಾವುದೇ ಮಿತಿಯಿಲ್ಲದೆ ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳಲು ಮತ್ತಷ್ಟು ಧೈರ್ಯ ನೀಡುವಂತಾಗಿದೆ. ಮುಖ್ಯಮಂತ್ರಿಗಳ ಈ ಖಂಡನೀಯ ಸಂದೇಶವು ಆಡಳಿತ ಯಂತ್ರದ ಕೆಳಹಂತದ ಅಧಿಕಾರಿಗಳಿಗೂ ಭ್ರಷ್ಟಾಚಾರಕ್ಕೆ ಉತ್ತೇಜನ ನೀಡು



ವಂತಾಗಲಿದೆ. ಡಿ.ಕೆ. ಶಿವಕುಮಾರ್ ಅವರು ಭ್ರಷ್ಟಾಚಾರಕ್ಕೆ ಉತ್ತೇಜನ ನೀಡುವಂತಹ ಹೇಳಿಕೆಯಿಂದ ಸಾಮಾನ್ಯ ಜನರ ದಿನನಿತ್ಯದ ಬದುಕು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ ಎಂದು ರವಿಕುಮಾರ್ ಹೇಳಿದ್ದಾರೆ.

---

## ರಾಹುಲ್ ಗಾಂಧಿ, ಪ್ರಿಯಾಂಕಾ ಬಂಧನ ಮತಗಳ್ಳತನಕ್ಕೆ ಬಿ.ಕೆ.ಹರಿಪ್ರಸಾದ್ ಆಕ್ರೋಶ

**ಬೆಂಗಳೂರು, ಅ.8** ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ದೆಹಲಿಯಲ್ಲಿ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರನ್ನು ಬಂಧಿಸಿದ ಘಟನೆ, ರಾಜ್ಯದಲ್ಲಿ ಆರೋಪಿತ ಮತಗಳ್ಳತನ ಹಾಗೂ ಇತರ ರಾಜಕೀಯ ವಿಚಾರಗಳ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿ ದ್ದಾರೆ.



ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಚುನಾಯಿತ ಜನಪ್ರತಿನಿಧಿಗಳ ಮೇಲಿನ ಪೊಲೀಸ್ ದಬ್ಬಾಳಿಕೆಯನ್ನು ಖಂಡಿಸಿ, ಇಂದು ಬೆಂಗಳೂರಿನ ಕೆಪಿಸಿಸಿ ಕಚೇರಿ ಎದುರು ಹಮ್ಮಿಕೊಂಡಿದ್ದ ಪ್ರಜಾ ಪ್ರಭುತ್ವದ ಕರಾಳದಿನ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿ, ರಾಹುಲ್ ಮತ್ತು ಪ್ರಿಯಾಂಕಾ ಅವರನ್ನು ಬಂಧಿಸಿದ್ದು ಮಾತ್ರವಲ್ಲದೆ, ಪ್ರತಿಭಟನೆ ವೇಳೆ ಅವರನ್ನು ಎಳೆದಾಡಲಾಯಿತು. ದೆಹಲಿ ಪೊಲೀಸರು ಗೂಂಡಾವರ್ತನೆ ತೋರಿದ್ದಾರೆ. ಕೆಲವು ಗೂಂಡಾಗಳನ್ನು ಬಿಟ್ಟು, ಅವರಿಗೆ ಪೊಲೀಸ್ ಸಮವಸ್ತ್ರ ತೊಡಿಸಲಾಗಿದೆ" ಎಂದು ಹೇಳಿದ್ದಾರೆ.

"ರಾಹುಲ್ ಗಾಂಧಿಯವರು ಪ್ರತಿಪಕ್ಷ ನಾಯಕರಾಗಿದ್ದು, ಎಲ್ಲದರ ಬಗ್ಗೆಯೂ ಮಾತನಾಡುವ ಹಕ್ಕಿದೆ. ಆದರೆ ಅವರನ್ನು ವಶಕ್ಕೆ ಪಡೆಯಲು ಪ್ರಯತ್ನಿಸಲಾಯಿತು.

ದುರದೃಷ್ಟವಶಾತ್, ಈ ಬಗ್ಗೆ ಯಾರೂ ಮಾತನಾಡುತ್ತಿಲ್ಲ" ಎಂದು ಪ್ರಶ್ನಿಸಿದ್ದಾರೆ.

**ಅ.10ರಿಂದ 20ರವರೆಗೆ ಪಾದಯಾತ್ರೆ:** ರಾಜ್ಯದಲ್ಲಿ ನಡೆಯುತ್ತಿರುವ ಮತಗಳ್ಳತನದ ವಿರುದ್ಧ ಪಾದಯಾತ್ರೆ ನಡೆಸುವುದಾಗಿ ಹರಿಪ್ರಸಾದ್ ಘೋಷಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 10ರಿಂದ 20ರವರೆಗೆ ಪ್ರತಿ ವಾರ್ಡ್ ಮತ್ತು ಬ್ಲಾಕ್‌ಗಳಲ್ಲಿ ಪಾದಯಾತ್ರೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಅಕ್ಟೋಬರ್ 24ರಿಂದ ಮತ್ತಷ್ಟು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ನವೆಂಬರ್ 1ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ರಾಷ್ಟ್ರಮಟ್ಟದ ಬೃಹತ್ ಪ್ರತಿಭಟನೆ ನಡೆಯಲಿದೆ ಎಂದು ಹರಿಪ್ರಸಾದ್ ಘೋಷಿಸಿದ್ದಾರೆ.

## ಟ್ರಾವೆಲ್ ಏಜೆಂಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಅಮೃತ ಮಹೋತ್ಸವ: ಆತಿಥ್ಯ ವಲಯದಲ್ಲಿ ನಾವೀನ್ಯತೆ, ಶ್ರೇಷ್ಠತೆ ಅಳವಡಿಸಲು ನಿರ್ಧಾರ

**ಬೆಂಗಳೂರು,ಅ.8:** ದೇಶದ ಪ್ರವಾಸೋದ್ಯಮ ಮತ್ತು ಆತಿಥ್ಯ ವಲಯದಲ್ಲಿ ತನ್ನದೇ ಆದ ಹೆಗ್ಗುರುತುಗಳನ್ನು ಮೂಡಿಸಿರುವ ಟ್ರಾವೆಲ್ ಏಜೆಂಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ 75 ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ 'ಟ್ರಾವೆಲ್ ಏಜೆಂಟ್‌ಗಳ ರಾಷ್ಟ್ರೀಯ ಸಮ್ಮೇಳನ ನಗರದಲ್ಲಿ ನಡೆಯಿತು.

ಗಾಂಧಿನಗರದ ಹಾಲಿಡೇ ಇನ್‌ನಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ "ನಮ್ಮ ಪರಂಪರೆಯನ್ನು ಗೌರವಿಸುವ, ಭವಿಷ್ಯವನ್ನು ಪ್ರೇರೇಪಿಸುವ" ಧ್ಯೇಯ ವಾಕ್ಯದ ದೃಷ್ಟಿಕೋನವನ್ನು ಈ ಸಮ್ಮೇಳನ ಅನಾವರಣಗೊಳಿಸಿತು. ಪ್ರಯಾಣ, ಪ್ರವಾಸೋದ್ಯಮ ಮತ್ತು ಆತಿಥ್ಯ ಉದ್ಯಮದ ಮಾನ್ಯತೆ ಪಡೆದ ಧ್ವನಿಯಾಗಿ 2,700 ಕ್ಕೂ ಅಧಿಕ ಸಂಸ್ಥೆಗಳ ಸಹಯೋಗದೊಂದಿಗೆ ಇದು ಕಾರ್ಯನಿರ್ವಹಿಸುತ್ತಿದೆ. ಭವಿಷ್ಯದ ಪಯಣವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸಲು ಸಮ್ಮೇಳನದಲ್ಲಿ ನಿರ್ಧರಿಸಲಾಯಿತು.

ವಿಮಾನಯಾನ ಸಂಸ್ಥೆಗಳು, ಪ್ರವಾಸೋದ್ಯಮ ಮಂಡಳಿಗಳು ಮತ್ತು ಪ್ರಾಧಿಕಾರಗಳು, ವೀಸಾ, ವಿಮೆ ಮತ್ತು ತಂತ್ರಜ್ಞಾನ ಪರಿಣಿತರು ಮತ್ತು



ಉದ್ಯಮ ಪಾಲುದಾರರೊಂದಿಗಿನ ಸಹಯೋಗವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಬಲಪಡಿಸುವ ಕುರಿತು ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಪ್ರವಾಸೋದ್ಯಮದ ಆತಿಥ್ಯದಲ್ಲಿ ನಾವೀನ್ಯತೆ, ಹೊಸ ದೃಷ್ಟಿ, ಸ್ಪಷ್ಟ ಉದ್ದೇಶ ಮತ್ತು ಶ್ರೇಷ್ಠತೆಯೊಂದಿಗೆ ಪ್ರತಿನಿಧಿಸುವ, ಸೇವೆ ಸಲ್ಲಿಸುವ ಮತ್ತು ಮುನ್ನಡೆಸುವ ಬದ್ಧತೆಯನ್ನು ಸಂಸ್ಥೆ ಪುನರುಚ್ಚರಿಸಿದೆ.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಟಾಯ್ ನ ರಾಷ್ಟ್ರೀಯ ಸಂಘದ ಅಧ್ಯಕ್ಷ ಸುನೀಲ್ ಕುಮಾರ್, 75 ವರ್ಷಗಳಲ್ಲಿ ಭವ್ಯ ಪರಂಪರೆ ಹೊಂದಿರುವ ಸಂಸ್ಥೆಯ ಅಮೃತ ಮಹೋತ್ಸವದ ಸಮಾರೋಪ ಸಮಾರಂಭ ಇದೇ 26ರಂದು ಕೊಲ್ಕತ್ತಾದಲ್ಲಿ ಆಯೋಜಿಸಲಾಗಿದೆ. ಟಾಯ್ ಸದಸ್ಯತ್ವ ಪಡೆಯಲು 600 ಕಂಪನಿಗಳು ಅರ್ಜಿ ಸಲ್ಲಿಸಿ ಕಾಯುತ್ತಿದ್ದು, ಇದು ಸಂಸ್ಥೆಯ ಮಹತ್ವನ್ನು ಅನಾವರಣಗೊಳಿಸುತ್ತದೆ ಎಂದರು.

ಟಾಯ್ ನ ಕರ್ನಾಟಕ ಘಟಕದ ಅಧ್ಯಕ್ಷ ನಿರಂಜನ್ ಎಸ್.ಭಾರ್ಗವ ಮಾತನಾಡಿ, 75 ವರ್ಷಗಳ ಪ್ರಯಾಣವನ್ನು ನಾವು ಆಚರಿಸುತ್ತಿದ್ದು, ಇದು ನಾಯಕತ್ವ, ಸೇವೆ, ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ತನ್ಮೂಲಕ ಟಾಯ್ ಪ್ರವಾಸೋದ್ಯಮದಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ ಎಂದು ಹೇಳಿದರು.

ಟಾಯ್ ಉಪಾಧ್ಯಕ್ಷ ಲೋಕೇಶ್ ಬೆಟ್ಟಯ್ಯ ಮಾತನಾಡಿ, ದೇಶೀಯ ವಿಯಾನಯಾಕ್ಕೆ ಡಿಜಿಯಾತ್ರಾ ಅತ್ಯಂತ ಪರಿಣಾಮಕಾರಿಯಾಗಿದ್ದು, ಈ ವ್ಯವಸ್ಥೆ ಅಂತಾರಾಷ್ಟ್ರೀಯ ಪ್ರಯಾಣಕ್ಕೂ ಶೀಘ್ರದಲ್ಲೇ ಮುಕ್ತವಾಗಲಿದೆ. ಇದರಿಂದ ಪ್ರಯಾಣ ಮತ್ತಷ್ಟು ಸುಗಮ, ಸುಲಲಿತವಾಗಲಿದೆ. ಪ್ರಯಾಣಿಕರ ವಾಸ್ತವ್ಯವನ್ನು ತಾರಾ ಹೋಟೆಲ್‌ಗಳಿಗೆ ಸೀಮಿತಗೊಳಿಸದೇ ಹೋಮ್ ಸ್ಟೇ ಮತ್ತಿತರ ಮಾರ್ಗಗಳ ಬಗ್ಗೆಯೂ ಗಮನಹರಿಸುವುದು ಸೂಕ್ತ ಎಂದು ಸಲಹೆ ಮಾಡಿದರು.

ಟಾಯ್‌ನ ರಾಷ್ಟ್ರೀಯ ಸಂಘದ ಖಜಾಂಚಿ ಪರಸ್ ಲಾಖಿಯಾ, ಪ್ರಧಾನ ಕಾರ್ಯದರ್ಶಿ ಶ್ರೀರಾಮ್ ಪಟೇಲ್, ಕರ್ನಾಟಕ ಚಾಪ್ಟರ್ ಕಾರ್ಯದರ್ಶಿ ಜಿತೇಂದ್ರ ಶೆಟ್ಟಿ, ಖಜಾಂಚಿ ಕೆ.ಎಸ್. ಬಾಲಾಜಿ ಮತ್ತಿತರರು ಉಪಸ್ಥಿತರಿದ್ದರು.



ದೇವನೂರು ಮಹಾದೇವ, ಸಿಜೆಪಿ ನಾಯಕ ಅಭಿಜೀತ್ ದಿಪ್ಕೆ, ಸಹ-ಸಂಯೋಜಕ ಅಶುತೋಷ್ ರಂಕಾ ಮತ್ತು ವಕ್ತಾರ ಸೌರವ್ ದಾಸ್ ಅವರು ಇದರಲ್ಲಿ ಪಾಲ್ಗೊಂಡಿದ್ದರು. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ನಡೆದ ರಾಜ್ಯಮಟ್ಟದ ಜನತಾ ನ್ಯಾಯಾಲಯದಲ್ಲಿ ಪ್ರಮುಖ ಯೂಟ್ಯೂಬರ್ ಧ್ರುವ್ ರಾಠೀ ಮತ್ತು ಹಿರಿಯ ನಟ ಹಾಗೂ ಕಾರ್ಯಕರ್ತ ಪ್ರಕಾಶ್ ರಾಜ್ ಮಾತನಾಡಿದರು; ಚುನಾವಣಾ ಆಯೋಗವು ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಗುರಿಯಾಗಿಸಿಕೊಂಡು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

# ಬರ ಪರಿಶೀಲನಾ ಸಭೆಯಲ್ಲಿ, ಜಿಲ್ಲಾಡಳಿತದ ವಿರುದ್ಧ ಜನಪ್ರತಿನಿಧಿಗಳ ಆಕ್ರೋಶ

**ರಾಯಚೂರು, ಅ. 8:** ಮುಂಗಾರು ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವಿನ ಸಮಸ್ಯೆ ಎದುರಾಗುವ ಸಾಧ್ಯತೆ ಇದ್ದರೂ, ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿಕೊಂಡಿಲ್ಲ ಎಂದು ಜಿಲ್ಲೆಯ ಜನಪ್ರತಿನಿಧಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಬರ ಪರಿಶೀಲನಾ ಸಭೆಯಲ್ಲಿ ಜನಪ್ರತಿನಿಧಿಗಳು ಜಿಲ್ಲಾಡಳಿತದ ಕಾರ್ಯವೈಖರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಲವು ಗ್ರಾಮಗಳಲ್ಲಿ ವರ್ಷ ಕಳೆದರೂ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಂಡಿಲ್ಲ. ಜಾನುವಾರುಗಳಿಗೆ ಮೇವಿನ ವ್ಯವಸ್ಥೆಯನ್ನೂ ಮಾಡಿಲ್ಲ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಅವರ ಮೇಲುಸ್ತುವಾರಿಯೂ ಸಮರ್ಪಕವಾಗಿಲ್ಲ. ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಸ್ಯಾತ್ಮಕ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆ ಆಲಿಸುತ್ತಿಲ್ಲ ಎಂದು ಶಾಸಕರು ದೂರಿದರು.

ಜಿಲ್ಲೆಯ ಯಾವ ಗ್ರಾಮಗಳಲ್ಲಿ ಕೆರೆಗಳು ಬತ್ತಿವೆ, ಯಾವ ಗ್ರಾಮಗಳು ಬೋರ್‌ವೆಲ್‌ಗಳನ್ನೇ ಅವಲಂಬಿಸಿವೆ ಎಂಬ ಬಗ್ಗೆ ಸಮರ್ಪಕ ಮಾಹಿತಿ ಹೊಂದಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಪಟ್ಟಿ ಇದ್ದರೂ ಸಮಸ್ಯೆ ಪರಿಹಾರಕ್ಕೆ ಒಂದು ವರ್ಷದಿಂದಲೂ ಕ್ರಮ ಕೈಗೊಂಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಜಲಧಾರೆ ಹಾಗೂ ಜಲ ಜೀವನ್ ಮಿಷನ್ ಯೋಜನೆಗಳು ಆರಂಭವಾಗಿ ನಾಲ್ಕು ವರ್ಷ ಕಳೆದರೂ ಪೂರ್ಣಗೊಂಡಿಲ್ಲ. ಯೋಜನೆಗಳನ್ನು ಏಕೆ ಪೂರ್ಣಗೊಳಿಸಿಲ್ಲ? ಅದರ ಮೇಲ್ವಿಚಾರಣೆ ಮಾಡುವವರು ಯಾರು ಎಂದು ಶಾಸಕ ಬಸನಗೌಡ ಬಾದರ್ಲಿ ಪ್ರಶ್ನಿಸಿದರು.

ತುಂಗಭದ್ರಾ ಜಲಾಶಯದಲ್ಲಿ ಎಷ್ಟು ನೀರು ಸಂಗ್ರಹವಿದೆ ಹಾಗೂ ಕುಡಿಯುವ ನೀರು, ಕೃಷಿ ಮತ್ತು ಕೈಗಾರಿಕೆಗಳಿಗೆ ಎಷ್ಟು ನೀರು ಮೀಸಲಿಡಲಾಗಿದೆ ಎಂಬ ಬಗ್ಗೆ ಅಧಿಕಾರಿಗಳು ಸಭೆಗೆ ಸಮರ್ಪಕ ಮಾಹಿತಿ ನೀಡುತ್ತಿಲ್ಲ. ಮುಂದಿನ ಎರಡು–ಮೂರು ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗುವ ಸಾಧ್ಯತೆ ಇದ್ದು, ಈಗಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಒತ್ತಾಯಿಸಿದರು.

ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ಕ್ರಮ: ಸಭೆಗೆ ತಪ್ಪು ಮಾಹಿತಿ ನೀಡುವ ಹಾಗೂ ಒಂದು ವರ್ಷ ಕಳೆದರೂ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳದ



ಅಧಿಕಾರಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ್ ಸಿಂಗ್ ಎಚ್ಚರಿಸಿದರು.

ಕುಡಿಯುವ ನೀರು ಪೂರೈಕೆಗೆ ರಾಜ್ಯ ಸರ್ಕಾರ ಬದ್ಧವಾಗಿದೆ. ಈ ಕುರಿತು ಈಗಾಗಲೇ ಮೂರು ಸಭೆ ನಡೆಸಲಾಗಿದೆ. ರಾಜ್ಯ ಸರ್ಕಾರದಿಂದ ಜಿಲ್ಲಾ ಪಂಚಾಯಿತಿಗೆ ?11 ಕೋಟಿ ಬಿಡುಗಡೆಯಾಗಿದ್ದು, ಶಾಸಕರೂ ತಲಾ ?1 ಕೋಟಿ ಅನುದಾನ ನೀಡಿದ್ದಾರೆ. ತಹಶೀಲ್ದಾರ್‌ಗಳ ಖಾತೆಯಲ್ಲೂ ಅನುದಾನ ಲಭ್ಯವಿದೆ. ಅಧಿಕಾರಿಗಳು ಆದ್ಯತೆಯ ಮೇರೆಗೆ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಸೂಚಿಸಿದರು.

ಮೇವಿನ ಕೊರತೆ ಕುರಿತು ತರಾಟೆ: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಪ್ರೇಮ್‌ಸಿಂಗ್ ಅವರು ಸಭೆಗೆ ಸಮರ್ಪಕ ಸಿದ್ಧತೆ ಇಲ್ಲದೆ ಬಂದು ಮಾಹಿತಿ ನೀಡಲು ಮುಂದಾದಾಗ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ತರಾಟೆಗೆ ತೆಗೆದುಕೊಂಡರು.

ಜಿಲ್ಲೆಯಲ್ಲಿ ಮೇವಿನ ಕೊರತೆ ಇಲ್ಲ. ರೈತರ ಬಳಿ ಅಗತ್ಯ ಪ್ರಮಾಣದ ಮೇವು ಸಂಗ್ರಹವಿದೆ. ಅಗತ್ಯ ಬಿದ್ದರೆ ಖಾಸಗಿಯವರೊಂದಿಗೆ ಒಪ್ಪಂದ ಮಾಡಿಕೊಂಡು ಮೇವು ತರಿಸಲಾಗುವುದು ಹಾಗೂ ಮೇವು ಬ್ಯಾಂಕ್ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರೇಮ್‌ಸಿಂಗ್ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಹಂಪನಗೌಡ ಬಾದರ್ಲಿ ಹಾಗೂ ಬಸನಗೌಡ ದದ್ದಲ್, ಜಿಲ್ಲೆಯಲ್ಲಿ ಎಷ್ಟು ಜಾನುವಾರುಗಳಿವೆ ಹಾಗೂ ಎಲ್ಲೆಲ್ಲಿ ಮೇವು ಬ್ಯಾಂಕ್ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಸಮರ್ಪಕ ಮಾಹಿತಿ ನೀಡುವಂತೆ ಒತ್ತಾಯಿಸಿದರು.

ಜಿಲ್ಲೆಯಲ್ಲಿ ಶೇ 70ರಷ್ಟು ಬೆಳೆ ನಷ್ಟವಾಗಿದೆ. ಮೇವು ಆಗುವಷ್ಟು ಬೆಳೆ ಕೂಡ ಬಂದಿಲ್ಲ. ಹೀಗಿರುವಾಗ ಮೇವಿನ ಕೊರತೆ ಇಲ್ಲ ಎಂದು ಕಳೆದ ವರ್ಷದ ಅಂಕಿ–ಅಂಶ ಆಧರಿಸಿ ಹೇಳುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

### ಸರ್ಕಾರದ ಆರ್ಥಿಕ ವ್ಯವಸ್ಥೆಯಲ್ಲಿ ಶಿಸ್ತು ಕಾಪಾಡಿಕೊಳ್ಳಲಾಗಿದೆ

# ಜನಪರ ಗ್ಯಾರಂಟಿ ಯೋಜನೆಗಳನ್ನು ರದ್ದುಪಡಿಸಿಲ್ಲ: ಡಿಸಿಎಂ ಪರಮೇಶ್ವರ್ ಸ್ಪಷ್ಟನೆ

**ಕೊಪ್ಪಳ, ಅ.8:** ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಎದುರಾಗಿರುವ ಡೀಸೆಲ್ ಕೊರತೆ ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಸರ್ಕಾರದ ಜನಪರ ಅಥವಾ ಗ್ಯಾರಂಟಿ ಯೋಜನೆಗಳನ್ನು ರದ್ದುಪಡಿಸಿಲ್ಲ. ಸರ್ಕಾರದ ಆರ್ಥಿಕ ವ್ಯವಸ್ಥೆಯಲ್ಲಿ ಕಟ್ಟುನಿಟ್ಟಿನ ಶಿಸ್ತು ಕಾಪಾಡಿಕೊಳ್ಳಲಾಗಿದೆ ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದ ವಾರ್ಷಿಕ 52,000 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗಾಗಿ ಒದಗಿಸುತ್ತ ಬರಲಾಗಿದೆ. ಒಂದು ವೇಳೆ ಆರ್ಥಿಕ ಬಿಕ್ಕಟ್ಟು ತಲೆದೋರಿದ್ದರೆ ಈ ಯೋಜನೆಗಳನ್ನು ಮುಂದುವರಿಸಲು ಸಾಧ್ಯವಿರಲಿಲ್ಲ. ರಾಜ್ಯದ ಆರ್ಥಿಕತೆ ಯನ್ನು ಅತ್ಯಂತ ವ್ಯವಸ್ಥಿತವಾಗಿ ನಿರ್ವಹಿಸಲಾಗುತ್ತಿದೆ ಎಂದು ಹೇಳಿದರು.

ಇತರ ರಾಜ್ಯಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರೂ, ನಮ್ಮ ಸರ್ಕಾರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದೆ.

ಅನಿವಾರ್ಯ ಸಂದರ್ಭಗಳಲ್ಲಿ ಸಾಲ ಮಾಡಿ ಯಾದರೂ ಸರ್ಕಾರವನ್ನು ಮುನ್ನಡೆಸು ತ್ತೇವೆ ಹೊರತು ಯೋಜನೆಗಳನ್ನು ಕೈಬಿಡುವುದಿಲ್ಲ ಎಂದು ಭರವಸೆ ನೀಡಿದರು.

ಡೀಸೆಲ್ ಕೊರತೆ ತಾತ್ಕಾಲಿಕ ಕೆಎಸ್‌ಆರ್‌ಟಿಸಿ ಡೀಸೆಲ್ ಕೊರತೆ ವಿಚಾರವಾಗಿ ಪ್ರತಿಕ್ರಿಯಿಸಿ, 1,250 ಕೋಟಿ ರೂ.ಗಳ ಹೊರೆ ಸರ್ಕಾರದ



ಪಾಲಿಗೆ ದೊಡ್ಡದಲ್ಲ. ತಾತ್ಕಾಲಿಕವಾಗಿ ಎದುರಾಗಿರುವ ಈ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಲಾಗುವುದು. ಕೆಲವು ಕಡೆಗಳಲ್ಲಿ ಯೋಜನೆಗಳ ಅನುಷ್ಠಾನದಲ್ಲಿ ಸಣ್ಣಪುಟ್ಟ ವಿಳಂಬವಾಗಬಹುದೇ ವಿನಃ ಯಾವ ಯೋಜನೆಯೂ ನಿಂತಿಲ್ಲ ಎಂದು ಪರಮೇಶ್ವರ್ ಸ್ಪಷ್ಟಪಡಿಸಿದರು.

# ಸಿಎಂ ಡಿಕೆಶಿ ವರ್ಚಸ್ಸಿಗೆ ಧಕ್ಕೆ ತರುವ ಪ್ರಯತ್ನ: ರಾಜು ಕುನ್ನೂರ

**ಶಿಗ್ಗಾವಿ, ಅ.08–** ರಾಜ್ಯದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜನಪ್ರಿಯತೆ ಹಾಗೂ ರಾಜಕೀಯ ವರ್ಚಸ್ಸನ್ನು ಸಹಿಸದ ಕೆಲವರು ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ರೀತಿಯಲ್ಲಿ ಅನಗತ್ಯ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಕುನ್ನೂರ ಆರೋಪಿಸಿದರು.

ರಾಜ್ಯದ ಅಭಿವೃದ್ಧಿ ಹಾಗೂ ಜನಪರ ಆಡಳಿತಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆದ್ಯತೆ ನೀಡುತ್ತಿದ್ದಾರೆ. ಸಮಾಜದ ಎಲ್ಲ ವರ್ಗದವರೊಂದಿಗೆ ಗೌರವಯುತವಾಗಿ ನಡೆದುಕೊಳ್ಳುವ ಅವರು, ಮಠಾಧೀಶರು, ಸ್ವಾಮೀಜಿಗಳು ಹಾಗೂ ಧಾರ್ಮಿಕ ಮುಖಂಡರ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಇಂತಹ ನಾಯಕನ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುವುದು ಸರಿಯಲ್ಲ ಎಂ ದರು.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಪರ ಯೋಜನೆಗಳಿಗೆ ವೇಗ ನೀಡಲಾಗಿದೆ. ಸರ್ಕಾರದ ಸಾಧನೆಗಳನ್ನು ಜನರ ಮುಂದೆ ಸಮರ್ಥವಾಗಿ ಹೇಳಲು ಸಾಧ್ಯವಾಗದವರು ವೈಯಕ್ತಿಕ ಟೀಕೆಗಳಿಗೆ ಇಳಿಯುತ್ತಿರುವುದು ದುರದೃಷ್ಟಕರ. ಟೀಕೆಗಳು ರಾಜಕೀಯವಾಗಿ ಇರಲಿ, ಆದರೆ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಆರೋಪಗಳನ್ನು ಮಾಡುವುದನ್ನು ಯಾರೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.

ಜನರ ವಿಶ್ವಾಸವೇ ಡಿ.ಕೆ. ಶಿವಕುಮಾರ್ ಅವರ ದೊಡ್ಡ ಶಕ್ತಿ. ವಿರೋಧಿಗಳು ಎಷ್ಟೇ ಅಪಪ್ರಚಾರ ಮಾಡಿದರೂ ಅಭಿವೃದ್ಧಿ ಮತ್ತು ಜನಪರ ಕಾರ್ಯಗಳ ಮೂಲಕ ಅದಕ್ಕೆ ಉತ್ತರ ನೀಡಲಾಗುವುದು. ಕಾಂಗ್ರೆಸ್ ಕಾರ್ಯಕರ್ತರು ಇಂತಹ ಅಪಪ್ರಚಾರಗಳಿಗೆ ಕಿವಿಗೊಡದೆ ಸರ್ಕಾರದ ಸಾಧನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ರಾಜು ಕುನ್ನೂರ ಕರೆ ನೀಡಿದರು.

ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ರಾಜ್ಯವು ಅಭಿವೃದ್ಧಿಯತ್ತ ಸಾಗುತ್ತಿದ್ದು, ಸರ್ಕಾರದ ಜನಪರ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ. ಇದನ್ನು ಸಹಿಸದ ಕೆಲವರು ಗೊಂದಲ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದಾರೆ. ಜನರು ಇಂತಹ ಅಪಪ್ರಚಾರಗಳಿಗೆ ಮನ್ನಣೆ ನೀಡುವುದಿಲ್ಲ ಎಂದರು.

# ವಿಠಲ್ ಹೇರೂರ ವೃತ್ತದಲ್ಲಿ ಸಿದ್ದರಾಮಯ್ಯ ಮೂರ್ತಿ ಸ್ಥಾಪನೆಗೆ ಕೋಲಿ ಸಮಾಜದ ವಿರೋಧ

**ಕಲಬುರಗಿ, ಅ. 8:** ನಗರದ ಹೈಕೋರ್ಟ್‌ನ ಅಫಜಲಪುರ ರಸ್ತೆ ವೃತ್ತದಲ್ಲಿ ಕೋಲಿ, ಕಬ್ಬಲಿಗ ಸಮಾಜದ ನಾಯಕ ವಿಠ್ಠಲ್ ಹೇರೂರ್ ಅವರ ಹೆಸರಿನ ನಾಮಫಲಕ 2015ರಲ್ಲೇ ಅಳವಡಿಸಲಾಗಿದೆ. ಅದೇ ವೃತ್ತದಲ್ಲಿ ಯಾವುದೇ ಮುನ್ಸೂಚನೆ ನೀಡದೇ ರಾತೋರಾತ್ರಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಮೂರ್ತಿ ಸ್ಥಾಪನೆ ಮಾಡಿರುವುದು ಅಪರಾಧವಾಗಿದ್ದು, ಯಾವುದೇ ಕಾರಣಕ್ಕೂ ವಿಠಲ್ ಹೇರೂರ ವೃತ್ತದಲ್ಲಿ ಮಾಜಿ ಸಿಎಂ ಮಾಜಿ ಸಿದ್ಧರಾಮಯ್ಯ ಅವರ ಮೂರ್ತಿ ಸ್ಥಾಪನೆ ಮಾಡಲು ನಾವು ಅವಕಾಶ ನೀಡುವದಿಲ್ಲ. ಪಾಲಿಕೆಯವರೂ ಅವಕಶ ನಿಡಬಾರದು ಎಂದು ಕೋಲಿ ಸಮಾಜದವರು ಮುಖಂಡರು ಪ್ರತಿಭಟನೆ ಮಾಡಿದರು.

ಕೋಲಿ ಸಮಾಜದ ಅಧ್ಯಕ್ಷ ನಿಂಗಣ್ಣ ಹೆಗಲೇರಿ ಅವರ ನೇತೃತ್ವದಲ್ಲಿ ಮುಖಂಡರು ಈ ಸಂಬಂಧ ತಹಸಿಲ್ದಾರ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರ ಸಲ್ಲಿಸಿದರು.



ಈ ಸಂದರ್ಭದಲ್ಲಿ ಮುಖಂಡರು ಮಾತನಾಡಿ, ದಿ. ವಿಠ್ಠಲ್ ಹೇರೂರ್ ಅವರ ನಾಮಫಲಕ ಇರುವಾ ಗಲೂ ಕುರುಬ ಸಮಾಜದ ಕೆಲವರು ರಾತ್ರೋರಾತ್ರಿ ಸಿದ್ದರಾಮಯ್ಯ ಅವರ ಮೂರ್ತಿ ತಂದು ಇಟ್ಟಿದ್ದನ್ನು ಮಹಾನಗರ ಪಾಲಿಕೆ ತಕ್ಷಣ ತೆರವುಗೊಳಿಸಿದೆ. ಇದು ಕೋಲಿ ಸಮಾಜದ ಭಾವನೆಗಳಿಗೆ ಮತ್ತು ಹೇರೂರ್ ಅವರಿಗೆ ಮಾಡಿದ ಅವಮಾನವಾಗಿದ್ದು, ಇದನ್ನು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 2013ರಿಂದಲೂ ಸದರಿ ವೃತ್ತದಲ್ಲಿ ವಿಠಲ್ ಹೇರೂರ್ ಅವರ ಭಾವಚಿತ್ರವುಳ್ಳ ನಾಮಫಲಕ ಹಾಕಿ ಪ್ರತಿ ವರ್ಷ ಪುಣ್ಯಸ್ಮರಣೆ, ಜಯಂತಿ, ಅನ್ನದಾಸೋಹ ಹಾಗೂ ಪೂಜಾ ಕಾರ್ಯಕ್ರಮ ನಡೆಸಲಾಗುತ್ತಿದೆ. ಸದರಿ ವೃತ್ತವು ಈಗಾಗಲೇ ವಿಠಲ್ ಹೇರೂರ್ ವೃತ್ತ ಎಂದೇ ಪ್ರಸಿದ್ಧಿಯಾಗಿದೆ. ಒಂದು ಸಮಾಜದ ನಾಯಕನ ಹೆಸರಿನಲ್ಲಿ ನಾಮಫಲಕ ಇದ್ದರೂ ಮೂರ್ತಿ ತಂದು ಕೂಡಿಸಿರುವುದು ಕೋಲಿ, ಕಬ್ಬಲಿಗ ಸಮಾಜದ ಸ್ವಾಭಿಮಾನಕ್ಕೆ ಧಕ್ಕೆ ತರುವ ಕೆಲಸವಾಗಿದ್ದು, ಇದನ್ನು ಉಗ್ರವಾಗಿ ಖಂಡಿಸುತ್ತೇವೆ. ಸದರಿ ವೃತ್ತದಲ್ಲಿ ವಿಠಲ್ ಹೇರೂರ್ ಅವರ ಮೂರ್ತಿ ಹೊರತುಪಡಿಸಿ ಬೇರೆ ಯಾವುದೇ ಮೂರ್ತಿ ಕೂಡಿಸಲು ಬಿಡುವುದಿಲ್ಲ ಎಂದು ಅವರು ಎಚ್ಚರಿಸಿದರು.

# ಶಾರ್ಟ್ ಸರ್ಕ್ಯೂಟ್: ಹೊತ್ತಿ ಉರಿದ ಖಾಸಗಿ ಬಸ್

**ಶಿವಮೊಗ್ಗ, ಅ.8:** ಚಲಿಸುತ್ತಿದ್ದ ಖಾಸಗಿ ಸ್ಲೀಪರ್ ಬಸ್‌ಗೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ಬಸ್‌ನ ಶೇ.80ರಷ್ಟು ಭಾಗ ಸುಟ್ಟುಹೋದ ಘಟನೆ ಗುರುವಾರ ಮುಂಜಾನೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಮುಂಬಾಳು ಗ್ರಾಮದ ಬಳಿ ನಡೆದಿದೆ.

ಆನಂದಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಮುಂಬಾಳು ಗ್ರಾಮದ ಬಳಿ ಬೆಳಗ್ಗೆ 5.45ಕ್ಕೆ ಬಸ್ ಚಲಿಸುತ್ತಿದ್ದಾಗ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಬೆಂಗಳೂರಿನಿಂದ ಸಾಗರದತ್ತ ತೆರಳುತ್ತಿದ್ದ ಬಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.ಬೆಂಕಿ ಕಾಣಿಸಿಕೊಂಡ ಕೂಡಲೇ ಚಾಲಕ ಹಾಗೂ ಕ್ಲೀನರ್ ಸಮಯಪ್ರಜ್ಞೆ ಮೆರೆದು ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಳಿಸಿದ್ದಾರೆ. ಸಾಗರದತ್ತ ತೆರಳುತ್ತಿದ್ದ ಮಾರ್ಗದಲ್ಲಿ ಆ ಸಮಯದಲ್ಲಿ ಕೇವಲ ಇಬ್ಬರು ಪ್ರಯಾಣಿಕರು ಮಾತ್ರ ಬಸ್‌ನಲ್ಲಿದ್ದರು. ಶಿವಮೊಗ್ಗದಲ್ಲಿ ನಡೆದ ಹಿಂದಿನ ನಿಲುಗಡೆಯಲ್ಲೇ ಬಹುತೇಕ ಪ್ರಯಾಣಿಕರು ಬಸ್‌ನಿಂದ ಇಳಿದಿದ್ದರು ಎಂದು ತಿಳಿದುಬಂದಿದೆ.

ಬೆಂಕಿಯ ತೀವ್ರತೆಗೆ ಬಸ್‌ನ ಸುಮಾರು ಶೇ.80ರಷ್ಟು ಭಾಗ ಸುಟ್ಟುಹೋಗಿದೆ. ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ.ಆನಂದಪುರಂ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಪ್ರವೀಣ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಘಟನೆ ಕುರಿತು ಆನಂದಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ಮುಂದುವರಿದಿದೆ.

# ಬಳ್ಳಾರಿಯಲ್ಲಿ ಬೃಹತ್ ಆರೋಗ್ಯ ಶಿಬಿರ: 216 ನೌಕರರ ಆರೋಗ್ಯ ತಪಾಸಣೆ, ಚಿಕಿತ್ಸೆ

**ಬಳ್ಳಾರಿ,ಅ.08.** ನೌಕರರ ಆರೋಗ್ಯ ಕಾಪಾಡುವ ಪ್ರಮುಖ ಉದ್ದೇಶದೊಂದಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಕ್ಷೇಮಾಭಿವೃದ್ಧಿ ಸಂಘ ಹಾಗೂ ಆರೋಗ್ಯ ಇಲಾಖೆಯ ಜಂಟಿ ಸಹಯೋಗದಲ್ಲಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ಜರುಗಿತು.

ಶಿಬಿರದಲ್ಲಿ ಆರೋಗ್ಯ ಇಲಾಖೆಯ ವತಿಯಿಂದ ಒಟ್ಟು 17 ಪ್ರತ್ಯೇಕ ತಪಾಸಣಾ ಕೌಂಟರ್‌ಗಳನ್ನು ಸ್ಥಾಪಿಸಲಾಗಿತ್ತು. ಮನೋವೈದ್ಯಕೀಯ, ಚರ್ಮರೋಗ, ಇಸಿಜಿ, ಎಕ್ಸ್-ರೇ ಹಾಗೂ ಕ್ಷಯರೋಗ ಸೇರಿದಂತೆ ತಲೆಯಿಂದ ಕಾಲಿನವರೆಗಿನ ಸಂಪೂರ್ಣ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಕ್ಕಾಗಿ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯಗಳನ್ನು ಇಲ್ಲಿ ಕಲ್ಪಿಸಲಾಗಿತ್ತು. ಒಟ್ಟು 216 ನೌಕರರು ಶಿಬಿರದಲ್ಲಿ ಪಾಲ್ಗೊಂಡು



ತಪಾಸಣೆ ಮತ್ತು ಚಿಕಿತ್ಸೆ ಪಡೆದರು.

**ವಿವಿಧ ಪರೀಕ್ಷೆಗಳ ವಿವರ:**

ರಕ್ತದೊತ್ತಡ ಮತ್ತು ಮಧುಮೇಹ: 152 ಜನರಿಗೆ ರಕ್ತದೊತ್ತಡ ಹಾಗೂ 118 ಜನರಿಗೆ ಮಧುಮೇಹ ಪರೀಕ್ಷೆ ನಡೆಸಲಾಯಿತು.

ಪ್ರಯೋಗಾಲಯ ಪರೀಕ್ಷೆಗಳು: ಎಚ್.ಐ.ವಿ ಕ್ಯೂಆರ್ ಕೋಡ್ (208), ಹೆಚ್.ಐ.ವಿ ತಪಾಸಣೆ (119), ಸಿ.ಬಿ.ಸಿ (32), ರಕ್ತಹೀನತೆ (03), ಎಕ್ಸ್-ರೇ (36), ಸ್ಪೂಟಮ್ (03) ಮತ್ತು ಇಸಿಜಿ (52) ಪರೀಕ್ಷೆಗಳನ್ನು ಕೈಗೊಳ್ಳಲಾಯಿತು.

**ವಿಶೇಷ ತಜ್ಞರ ತಪಾಸಣೆ:**

ಕಣ್ಣಿನ ತಪಾಸಣೆ (118), ದಂತ ಪರೀಕ್ಷೆ (36), ಇಎನ್‌ಟಿ (29), ಚರ್ಮರೋಗ (26), ಜನರಲ್ ಮೆಡಿಸಿನ್ (18) ಹಾಗೂ ಕೀಲು–ಮೂಳೆ ತಜ್ಞರಿಂದ 13 ಜನರಿಗೆ ಚಿಕಿತ್ಸೆ ನೀಡಲಾಯಿತು.

**ಸಮಾಲೋಚನೆ ಮತ್ತು ಲಸಿಕೆ:**

ಶಸ್ತ್ರಚಿಕಿತ್ಸೆ ಆಪ್ತ ಸಮಾಲೋಚನೆಗೆ 11, ಮಾನಸಿಕ/ತಂಬಾಕು ನಿಯಂತ್ರಣ ಸಮಾಲೋಚನೆಗೆ 13 ಹಾಗೂ ಪ್ರಸೂತಿ ಆರೈಕೆಗೆ 17 ನೌಕರರು ಒಳಪಟ್ಟರು. ಜೊತೆಗೆ 06 ಜನರಿಗೆ ಹೆಚ್.ಪಿ.ವಿ ಹಾಗೂ 16 ಜನರಿಗೆ ಹೆಪಟೈಟಿಸ್–ಬಿ ಲಸಿಕೆ ನೀಡಲಾಯಿತು.

**ರಕ್ತದಾನ ಮತ್ತು ಅಂಗಾಂಗ ದಾನ:**

ನೌಕರರು ಸ್ವಯಂಪ್ರೇರಿತರಾಗಿ 16 ಯೂನಿಟ್ ರಕ್ತದಾನ ಮಾಡಿದರು ಮತ್ತು ಇಬ್ಬರು ಅಂಗಾಂಗ ದಾನಕ್ಕೆ ನೋಂದಣಿ ಮಾಡಿಕೊಂಡರು.

# ಆಶಾ ಕಾರ್ಯಕರ್ತೆಯರಿಗೆ 15 ಸಾವಿರ ಪ್ರೋತ್ಸಾಹ ಧನ ನಿಗದಿಗೆ ಒತ್ತಾಯಿಸಿ ಹೋರಾಟ

**ಬಳ್ಳಾರಿ ಅ 08.** ರಾಜ್ಯದಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಹಗಲಿರುಳು ಶ್ರಮಿಸುತ್ತಿರುವ ಆಶಾ ಕಾರ್ಯಕರ್ತೆಯರು ಎದುರಿಸುತ್ತಿರುವ ತೀವ್ರ ಸಂಕಷ್ಟಗಳು ಹಾಗೂ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ,

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ನೇತೃತ್ವದಲ್ಲಿ ಅಕ್ಟೋಬರ್ 5 ರಿಂದ 11, 2026 ರವರೆಗೆ ರಾಜ್ಯದಾದ್ಯಂತ ಪ್ರತಿಭಟನಾ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನಗರದ ಗಾಂಧಿ ಭವನದಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ಬಂದು ಜಿಲ್ಲಾಧಿಕಾರಗಳ ಕಛೇರಿಯ ಮುಂದೆ ಪ್ರತಿಭಟನೆ ಮಾಡಲಾಯಿತು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಡಿ. ನಾಗಲಕ್ಷ್ಮಿ ಮ ಅವರು ಮಾತನಾಡುತ್ತಾ, ಕಳೆದ 9 ವರ್ಷದಿಂದ ಕೇವಲ ರೂ. 1500 ಮಾತ್ರ ಹೆಚ್ಚಳವಾಗಿದ್ದು, ಬೆಲೆ ಏರಿಕೆಗೆ ತಕ್ಕಂತೆ ವೇತನ ಹೆಚ್ಚಳವು ಇಲ್ಲದೆ ಅತ್ಯಂತ ತೊಂದರೆಯಲ್ಲಿ ಇರುವರು. ಇಂದಿನ ದುಬಾರಿ ವೆಚ್ಚದ ದಿನಗಳಲ್ಲಿ ಇವರ ಗೌರವಧನ ಹೆಚ್ಚಳ ಅತ್ಯಗತ್ಯವಾಗಿದೆ. ವಿವಿಧ ರಾಜ್ಯಗಳಲ್ಲಿ ಆಶಾ ಕಾರ್ಯಕರ್ತೆಯರಿಗೆ ಗಣನೀಯವಾಗಿ ವೇತನ ಹೆಚ್ಚಿಸಿರುವರು. ಆದರೆ ಇಲ್ಲಿ ಈಗಿನ ಸರ್ಕಾರದಿಂದ ಇವರ ವೇತನ ಹೆಚ್ಚಳಕ್ಕೆ ಈಗಾಗಲೇ ನೀಡಿದ ಭರವಸೆಗಳು ಈಡೇರಿಸದೆ ಇರುವುದು ನಿರಾಶಾದಾಯಕ ವಿಷಯವಾಗಿದೆ.

ಮತ್ತೊಂದೆಡೆ ಕಳೆದ ಒಂದು ವರ್ಷದಿಂದ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ಮತ್ತು ಗೌರವಧನ ನಿಗದಿತ ಅವಧಿಯಲ್ಲಿ ಸಿಗದೇ ಸಂಕಷ್ಟದಲ್ಲಿ ಇರುವರು. ಕಳೆದ ಹಲವು ತಿಂಗಳುಗಳಿಂದ ಹಲವಾರು ಜಿಲ್ಲೆಗಳ ಆಶಾ




ಕಾರ್ಯಕರ್ತೆಯರಿಗೆ ಬಾಕಿ ಪ್ರೋತ್ಸಾಹ ಧನವನ್ನು ನೀಡಿರುವುದಿಲ್ಲ. ಪ್ರತೀ ತಿಂಗಳು ಬರಬೇಕಿರುವ ಪ್ರೋತ್ಸಾಹಧನ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಬರದೆ ಪ್ರತೀ ತಿಂಗಳು ನಷ್ಟವನ್ನು ಅನುಭವಿಸುತ್ತಿರುವರು.

ಮೊಬೈಲ್ ನೀಡದಿರುವುದು, ತಾಂತ್ರಿಕ ತೊಂದರೆಗಳು, ಸರ್ವರ್ ಸಮಸ್ಯೆಗಳು ಹಾಗೂ ಮೊಬೈಲ್ ಸೌಲಭ್ಯಗಳ ಕೊರತೆಯ ನಡುವೆಯೂ ಆಶಾ ಕಾರ್ಯಕರ್ತೆಯರು ಇನ್ನಿತರೆ ಯಾವುದೇ ಮೊಬೈಲ್ ಆಯಪ್‌ನ್ನು ಪ್ರಸ್ತುತ ಸ್ವರೂಪದಲ್ಲಿ ಮೊಬೈಲ್‌ಗೆ ಅಳವಡಿಸಿಕೊಂಡು ಕಾರ್ಯ ನಿರ್ವಹಿಸುವುದು ಆಶಾ ಕಾರ್ಯಕರ್ತೆಯರಿಗೆ ಅತ್ಯಂತ ಕಷ್ಟಸಾಧ್ಯವಾಗಿದೆ. ಆಶಾ ಕಾರ್ಯಕರ್ತೆಯರು ತಾಂತ್ರಿಕತೆಗೆ ವಿರೋಧಿಗಳಲ್ಲ. ಆದರೆ, ಮೂಲಭೂತ ಸೌಕರ್ಯಗಳೇ ಇಲ್ಲದೆ ಕೇವಲ ಆಯಪ್ ಮೂಲಕ ಕೆಲಸ ಮಾಡಿ ಎಂದು ಒತ್ತಡ ಹೇರುವುದು ಎಷ್ಟು ನ್ಯಾಯ ಸಮ್ಮತ ಡಿಜಿಟಲ್ ದಾಖಲಾತಿ ಪ್ರಕ್ರಿಯೆಯಿಂದಾಗಿ ಆಶಾಗಳು ಜನರ ಆರೋಗ್ಯ ಸೇವೆ ಕಡೆಗೆ ಗಮನ ಹರಿಸುವುದಕ್ಕಿಂತ, ಒಂದೆಡೆ ಭೌತಿಕ ದಾಖಲೆ ಮತ್ತು ಇನ್ನೊಂದೆಡೆ ಮೊಬೈಲ್ ದಾಖಲೆಗಳಿಗೆ ಸಮಯ ವ್ಯರ್ಥ ಮಾಡುವಂತಾಗುತ್ತದೆ. ಡಿಜಿಟಲಿಕರಣ ಅನಿವಾರ್ಯ ಅಂತಾದರೆ ಮೇಲಿನ ಸಮಸ್ಯೆಗಳಿಗೆ ಪರಿಹಾರ ಸಿಗಬೇಕು ಎಂದು ಅಗ್ರಹಿಸಿದರು.

ಎಐಯುಟಿಯುಸಿ ಜಿಲ್ಲಾಧ್ಯಕ್ಷರಾದ ಎ. ದೇವದಾಸ್ ಅವರು ಮಾತನಾಡುತ್ತಾ, ಒಟ್ಟಾರೆ ರಾಜ್ಯ ಸರ್ಕಾರದ ಗೌರವಧನ ಹಾಗೂ ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಒಟ್ಟಿಗೆ ಸೇರಿಸಿ ಕನಿಷ್ಟ ರೂ.15,000 ನಿಗದಿ ಮಾಡಬೇಕು. ಕಳೆದ ಹಲವು ತಿಂಗಳುಗಳಿಂದ ಆಶಾ ಕಾರ್ಯಕರ್ತೆಯರಿಗೆ ಬಾಕಿ ಪ್ರೋತ್ಸಾಹ ಧನವನ್ನು ತಕ್ಷಣವೇ ಅವರ ಖಾತೆಗಳಿಗೆ ಜಮಾ ಮಾಡಬೇಕು. ಪ್ರತೀ ತಿಂಗಳು ನಿಗದಿತವಾಗಿ ವೇತನ ಬಿಡುಗಡೆ ಮಾಡಬೇಕು. ಮೊಬೈಲ್ ಆಧಾರಿತ ಕೆಲಸ ಮಾಡಲು ಮೊಬೈಲ್ ಕೊಡುವುದು ಮತ್ತು ಇದಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತಕ್ರಮ ತೆಗೆದುಕೊಳ್ಳಬೇಕು.

ಈ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಸಾವಿರಾರು ಆಶಾ ಕಾರ್ಯಕರ್ತೆಯರು ಬೀದಿಗಿಳಿದು ಶಾಂತಿಯುತವಾಗಿ ಪ್ರತಿಭಟನಾ ಸಪ್ತಾಹವನ್ನು ನಡೆಸಲಿದ್ದಾರೆ. ಸರ್ಕಾರ ಈ ಕೂಡಲೇ ಮಧ್ಯಪ್ರವೇಶಿಸಿ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂಬರುವ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಸಂಘಟನೆಯಿಂದ ಈ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡುತ್ತೇವೆ ಎಂದು ತಿಳಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಆಶಾ ಸಂಘದ ಜಿಲ್ಲಾಧ್ಯಕ್ಷರು ಎಂ. ಗೀತಾ ಅವರು ವಹಿಸಿದ್ದರು. ಈ ಸಂದರ್ಭದಲ್ಲಿ ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಡಾ. ಪ್ರಮೋದ್ ಎನ್., ಆಶಾ ಸಂಘದ ಜಿಲ್ಲಾ ಕಾರ್ಯದರ್ಶಿ ಮಾಣಿಕ್ಯ ಹಾಗೂ ಆಶಾ ಸಂಘದ ಸದಸ್ಯರಾದ ರೇಷ್ಮಾ, ಜಲಾಜಾಕ್ಷಿ, ಈರಮ್ಮ, ರಾಜೇಶ್ವರಿ, ಹನುಮಂತಮ್ಮ ಹಾಗೂ ನೂರಾರು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಪ್ರತಿಭಟನೆಯ ನಂತರ ಈ ಕೆಳಗಿನ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಆರೋಗ್ಯ ಸಚಿವರಿಗೆ ಜಿಲ್ಲಾಧಿಕಾರಿ ಮುಖಾಂತರ ಕಳುಹಿಸಿಕೊಡಲಾಯಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಆಶಾ ಕಾರ್ಯಕರ್ತೆಯರಿಗೆ ಇರುವ ಪ್ರೋತ್ಸಾಹಧನ ಮತ್ತು ಗೌರವಧನ ಸೇರಿಸಿ ರೂ. 15,000 ಮಾಸಿಕ ಗೌರವಧನ ನೀಡಿರಿ.

ಆಶಾ ಕಾರ್ಯಕರ್ತೆಯರಿಗೆ ಉತ್ತಮ ಗುಣಮಟ್ಟದ ಮೊಬೈಲ್ ಕೊಡಬೇಕು ಮತ್ತು ಈ ಪತ್ರದಲ್ಲಿ ನಮೂದಿಸಿರುವ ಸಮಸ್ಯೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು. ಎನ್‌ಎಚ್‌ಎಂ ಮಾರ್ಗಸೂಚಿ ಪ್ರಕಾರ ನಿಕ್ಷಯ್ ಆಪ್ ಕೆಲಸ ಆಶಾ ಕಾರ್ಯಕರ್ತೆಯರದ್ದಲ್ಲ, ಆದರೂ ಆ ಕೆಲಸ ಮಾಡಬೇಕೆಂದು ಒತ್ತಡ ಹೇರುವುದನ್ನು ನಿಲ್ಲಿಸಿ.

# ಬಳ್ಳಾರಿಯ ಹಳೆಯ ನ್ಯಾಯಾಲಯದ ಸಂಕೀರ್ಣದಲ್ಲಿ ಕಾನೂನು ವಿದ್ಯಾಲಯ ಸ್ಥಾಪನೆ: ನಾರಾ ಭರತ್ ರೆಡ್ಡಿ

**ಬಳ್ಳಾರಿ ಅ 08.** ನಗರದ ಹಳೆಯ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ಕಾನೂನು ವಿದ್ಯಾಲಯ ಸ್ಥಾಪನೆಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ, ಸೂಕ್ತ ಪ್ರಸ್ತಾಪವನ್ನು ಅಭಿಪ್ರಾಯದೊಂದಿಗೆ ತಕ್ಷಣವೇ ಸಲ್ಲಿಸುವಂತೆ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಸಚಿವರಿಗೆ ನಿರ್ದೇಶನ ನೀಡಿದೆ.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿಯವರ ದೂರ ದೃಷ್ಟಿ ಅಲೋಚನೆ ಹಾಗೂ ಮುಂದಿನ ಭವಿಷ್ಯದ ಮಕ್ಕಳ ವಿಧ್ಯಾಭ್ಯಾಸಕ್ಕೆ ಅನುಕೂಲವಾಗಲಿ ಕಾನೂನು ಪದವಿಗಾಗಿ ನಮ್ಮ ಬಳ್ಳಾರಿಯ ವಿಧ್ಯಾರ್ಥಿಗಳು ಬೇರೆ ಬೇರೆ ಜಿಲ್ಲೆಗಳಿಗೆ ತೆರಳಬಾರದು ಅಲ್ಲದೇ, ಸರ್ಕಾರದಿಂದಲೇ ಕಾನೂನು ಕಾಲೇಜು ಸ್ಥಾಪನೆಯಾಗಲಿ ಎಂಬ ಅಭಿಪ್ರಾಯದೊಂದಿಗೆ ನಗರದ ಹಳೆ (ಕೋರ್ಟ್) ನ್ಯಾಯಾಲಯ ಸಂಕೀರ್ಣದ ಜಾಗದಲ್ಲಿ ಕಾನೂನು ಕಾಲೇಜು ಆರಂಭಿಸಲು ಈ ಹಿಂದೆಯೇ ಶಾಸಕ ಭರತ್ ರೆಡ್ಡಿಯವರು ಅನುಮತಿ ಕೋರಿ ಸರ್ಕಾರಕ್ಕೆ ಸಲ್ಲಿಸಿದ್ದ






ಮನವಿಯನ್ನು ಆಧರಿಸಿ ಈಗ ಈ ಕ್ರಮ ಕೈಗೊಳ್ಳಲಾಗಿದೆ.

ಸರ್ಕಾರದ ವಶದಲ್ಲಿರುವ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿ ಕಾಲೇಜು ಸ್ಥಾಪಿಸಲು ಇರುವ ಅವಕಾಶಗಳ ಶಗಳ ಬಗ್ಗೆ ವಿಶ್ವವಿದ್ಯಾಲಯವು ಪರಿಶೀಲಿಸಲಿದ್ದು, ಶೀಘ್ರದಲ್ಲೇ ತನ್ನ ಅಭಿಪ್ರಾಯ ಒಳಗೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ. ಬಳ್ಳಾರಿಯಲ್ಲಿ ಹೊಸ ಕಾನೂನು ವಿದ್ಯಾಲಯ ಆರಂಭವಾದರೆ ಜಿಲ್ಲೆಯ ಹಾಗೂ ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಕಾನೂನು ಶಿಕ್ಷಣ ಪಡೆಯಲು ಅನುಕೂಲವಾಗಲಿದೆ ಎಂದು ಶಾಸಕ ನಾರಾ ಭರತ್ ರೆಡ್ಡಿ ತಿಳಿಸಿದ್ದಾರೆ.

# ಶರಣಪ್ಪ ಮಟ್ಟೂರ್ ಪರ ಜೆ.ಎಸ್.ಆಂಜನೇಯಲು, ಬೋಯಪಾಟಿ ವಿಷ್ಣುವರ್ಧನ್ ಮಿಂಚಿನ ಪ್ರಚಾರ

**ಬಳ್ಳಾರಿ ಅ 08.** ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ–2026 ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ್ ಅವರ ಪರವಾಗಿ 08.10.2026 ಗುರುವಾರ ವಾರರಂದು ಬೆಳಿಗ್ಗೆ 9.30 ಗಂಟೆಯಿಂದ ಬಳ್ಳಾರಿ ನಗರದ ಬಸವರಾಜೇಶ್ವರಿ ಪಬ್ಲಿಕ್ ಸ್ಕೂಲ್ ಮತ್ತು ಕಾಲೇಜು, ನಂದಿ ಪಿ.ಯು. ಕಾಲೇಜು ಪಟೇಲ್ ನಗರ, ನಾರಾಯಣ ಪಿ.ಯು. ಕಾಲೇಜು, ಸಂಜಯ್ ಗಾಂಧಿ ಪಾಲಿಟೆಕ್ನಿಕ್, ಹಾಗೂ ವಾಸವಿ



ಶಾಲೆಯಲ್ಲಿ ಪ್ರಚಾರ ಮಾಡಲಾಯಿತು.

ಈ ಸಂದರ್ಭದಲ್ಲಿ ಜೆ.ಎಸ್. ಆಂಜನೇಯುಲು, ಡಿ.ಸಿ.ಸಿ. ಕಾರ್ಯಾಧ್ಯಕ್ಷರು ಬೋಯ ಪಾಟಿ ವಿಷ್ಣುವರ್ಧನ, ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಶಿಕ್ಷಕರ ವಿಭಾಗದ ಅಧ್ಯಕ್ಷರು ಅಖಿಲ್ ಅಹ್ಮದ್, ಸೇವಾದಳ ಅಧ್ಯಕ್ಷರು ಅತಾವುಲ್ಲಾ, ಮಲ್ಲೇಶ್ವರಿ, ಶಿವರಾಜ್ ಗೌಡ, ಅಖಿಲ್, ಅನಿಲ್, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.


ಮಾಜಿ ಸಚಿವರು
ಹಾಗೂ ಗಾಂಧಿನಗರ
ವಿಧಾನಸಭಾ ಕ್ಷೇತ್ರ
ಜನಪ್ರಿಯ ಶಾಸಕರಾದ
ಸನ್ಮಾನ್ಯಶ್ರೀ
9.10.2026
ದಿನೇಶ್ ಗುಂಡೂರಾವ್
ಅವರಿಗೆ...
ಜನ್ಮದಿನದ ಹಾರ್ದಿಕ
ಶುಭಾಶಯಗಳು
ಶುಭ ಕೋರುವವರು:
ಅಭಿಮಾನಿಗಳು ಹಾಗೂ ಹಿತೈಷಿಗಳು
ಗಾಂಧಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು, ಕರ್ನಾಟಕ